بِسْمِ اللّٰہِ الرَّحْمٰنِ الرَّحِیْمِ نَحْمَدُہٗ وَنُصَلِّیْ عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَکُمُ اللّٰہُ بِبَدْرٍ وَّاَنْتُمْ اَذِلَّۃٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 03

ವಾರ್ಷಿಕ ಶುಲ್ಕ ರೂ.575/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

20 ಜನವರಿ 2022, 20 ಸುಲಹ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
16 ಜಮಾದಿ ಉಸ್ಸಾನಿ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِکْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

قُلْ لِّمَنْ مَّا فِی السَّمٰوٰتِ وَالْاَرْضِ ؕ قُلْ لِّلّٰہِ ؕ کَتَبَ عَلٰی نَفْسِہِ الرَّحْمَۃَ ؕ لَیَجْمَعَنَّکُمْ اِلٰی یَوْمِ الْقِیٰمَۃِ لَا رَیْبَ فِیْہِ ؕ اَلَّذِیْنَ خَسِرُوْۤا اَنْفُسَھُمْ فَھُمْ لَا یُؤْمِنُوْنَ (الانعام:13)

**(ಅಲ್‌ಅನ್‌ಆಂ : 13)**

**ಅಂದರೆ: ಕೇಳು: 'ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವೆಲ್ಲ ಯಾರಿಗೆ ಸೇರಿವೆ?' 'ಅಲ್ಲಾಹನಿಗೆ' ಎಂದು ಹೇಳು. ಅವನು ಕಾರುಣ್ಯವನ್ನು ತನ್ನ ಬಾಧ್ಯತೆಯನ್ನಾಗಿ ನಿಶ್ಚಯಿಸಿಕೊಂಡಿರುವನು. ನಿಶ್ಚಯವಾಗಿಯೂ ಅವನು ನಿಮ್ಮನ್ನು ಪುನರುತ್ಥಾನ ದಿನದ ವರೆಗೆ ಒಟ್ಟುಗೂಡಿಸುತ್ತಲಿರುತ್ತಾನೆ. ಅದರಲ್ಲೇನೂ ಸಂಶಯವಿಲ್ಲ. ತಮ್ಮ ಆತ್ಮಗಳನ್ನು ನಾಶಕ್ಕೀಡುಮಾಡುವವರಾರೋ ಅವರು ವಿಶ್ವಾಸ ಹೊಂದಲಾರರು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಫಲಾ ಜುನಾಹ ಅಲೈಹಿ ಅಂಯತವ್ವಫ ಬಿಹಿಮಾ" ಕುರಿತು ಹಝ್ರತ್ ಆಯಿಶಾ(ರ) ರವರ ಉಲ್ಲೇಖ

(1643) ಅವರು ಹೇಳಿದರು. ನಾನು ಹಝ್ರತ್ ಆಯಿಶಾ(ರ) ರೊಡನೆ ಕೇಳಿದೆನು. ಅಲ್ಲಾಹನು ಹೇಳುವನು. ಸಫಾ ಮತ್ತು ಮರ್ವಾ ಅಲ್ಲಾಹನ ಪವಿತ್ರ ಸ್ಥಳವಾಗಿದೆ ಎಂದು, ಅಂದಹಾಗೆ ಯಾರು ಬೈತುಲ್ಲಾಹ್‌ದ ಹಜ್ಜ್ ಮಾಡಿರುವವನು ಅಥವಾ ಉಮ್ರ: ಮಾಡಿರುವವನು ಅವನ ಮೇಲೆ ಯಾವ ಪಾಪವು ಇಲ್ಲ, ಈ ಎರಡರ ತವಾಫ್ ಮಾಡಲಿ. ಅಲ್ಲಾಹನಾಣೇ! (ಇದರಿಂದ ತಿಳಿದುಬರುವುದೇನೆಂದರೆ) ಸಫಾ ಮತ್ತು ಮರ್ವ ತವಾಫ್ ಮಾಡಿದವರ ಮೇಲೆ ಯಾವ ಪಾಪವು ಇಲ್ಲ. ಅವರು ಹೇಳಿದರು. ನನ್ನ ಸಹೋದರ ಸಂಬಂಧಿಯೇ! ಎಷ್ಟೊಂದು ಕೆಟ್ಟ ಮಾತನ್ನು ಆಡಿರುವೆ. ನೀನು ಹೇಳಿದಂತಹ ವಚನ ನೀನು ವ್ಯಾಖ್ಯಾನಿಸಿದಂತೆ ಆಗುತ್ತಿದ್ದರೆ, ಹೀಗೆ ಆಗಬಹುದಿತ್ತು. "ಲಾ ಜುನಾಹ ಅಲೈಹಿ ಅಲ್ಲಾ ಯತವ್ವಫ ಬಿಹಿಮಾ" ಅಂದರೆ ಅವರ ಮೇಲೆ ಯಾವ ಪಾಪವು ಇಲ್ಲ. ಅವರು ಈ ಎರಡರ ತವಾಫ್ ಮಾಡಿದರೆ, ಆದರೆ ಈ ವಚನ ಅನ್ಸಾರರ ಪೈಕಿ ಅವತರಿಸಿತ್ತು. ಅವರು ಇಸ್ಲಾಂ ಸ್ವೀಕರಿಸುವ ಮುನ್ನ "ಮನಾತ್" ವಿಗ್ರಹಗೋಸ್ಕರ ಎಹರಾಮ್ ಕಟ್ಟುತ್ತಿದ್ದರು. ಅವನ್ನು ಪೂಜಿಸುತ್ತಿದ್ದರು. ಅಂದಹಾಗೆ ಹಜ್ಜ್ ಅಥವಾ ಉಮ್ರ:ಕ್ಕಾಗಿ ಬಹರಾಮ್ ಕಟ್ಟುತ್ತಿದ್ದರೆ ಸಫಾ ಮತ್ತು ಮರ್ವದಲ್ಲಿ ತವಾಫ್ ಮಾಡುವುದು ಪಾಪ ಎಂದು ಭಾವಿಸುತ್ತಿದ್ದರು. ಅವರು ಇಸ್ಲಾಂ ಧರ್ಮದ ಸ್ವೀಕಾರ ಮಾಡಿದ ಮೇಲೆ ರಸೂಲುಲ್ಲಾಹ್(ಸ) ರೊಡನೆ ಕೇಳಿದರು. ಓ ನಬಿವರ್ಯರೇ! ನಾವು ಸಫಾ ಮತ್ತು ಮರ್ವ ತವಾಫ್ ಮಾಡುವುದನ್ನು ಪಾಪ ಎಂದು ಭಾವಿಸುತ್ತಿದ್ದೆವು. ಆಗ ಅಲ್ಲಾಹನು ಈ ದಿವ್ಯವಾಣಿ ಅವತರಿಸಿದನು. "ಇನ್ನಸ್ಸಫಾ ವಲ್ ಮರ್ವ ನ ಮಿನ್ ಶಲಿಇರಿಲ್ಲಾಹಿ" ಹಝ್ರತ್ ಆಯಿಶಾ(ರ) ಹೇಳುತ್ತಿದ್ದರು. ರಸೂಲುಲ್ಲಾಹ್(ಸ) ಈ ಎರಡರ ಸುತ್ತು ತವಾಫ್ ಮಾಡುವುದನ್ನು ಜಾರಿಗೊಳಿಸಿದ್ದಾರೆ. ಆದುದರಿಂದ ಯಾರಿಗೂ ಸಹ ಬಿಡುವ ಅವಶ್ಯಕತೆ ಇಲ್ಲ.

**(ಸಹೀಹ್ ಬುಖಾರಿ, ಸಂಪುಟ–3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

**ಯಾರು ಅಲ್ಲಾಹನ ಸಂತುಷ್ಟಿಯ ಮೇಲೆ ಸಂತೃಪ್ತರಾಗಿ ತಲೆಬಾಗುವರೋ ಅವರು ಮನಪೂರ್ವಕವಾಗಿ ಹೇಳುವುದು. "ಇನ್ನಲಿಲ್ಲಾಹಿ ವ ಇನ್ನ ಇಲೈಹಿ ರಾಜಿವೂನ್," ಯಾವುದೇ ರೀತಿಯ ದೂರು ದುಮ್ಮಾನ ನೀಡುವುದಿಲ್ಲ. ಇಂತಹ ಜನರ ಬಗ್ಗೆಯೇ ಅಲ್ಲಾಹನು ಹೇಳಿರುವನು. "ಉಲಾಇಕ ಅಲೈಹಿಮ್ ಸಲಾತುನ್" ಅಂದರೆ ಅಲ್ಲಾಹನ ವಿಶೇಷ ರೀತಿಯ ಅನುಗ್ರಹಕ್ಕೆ ಪಾತ್ರರಾಗುವ ಜನರು ಇವರೇ ಆಗಿದ್ದಾರೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಕೆಲ ಜನರು ಆಪತ್ತಿಗೆ ಗುರಿಯಾಗುವಾಗ ಗಾಬರಿಯಾಗುವುದನ್ನು ಕಾಣುತ್ತೇವೆ. ಮತ್ತು ಅವರು ದೇವನ ಬಗ್ಗೆ ನಿರಾಶರಾಗಿರುತ್ತಾರೆ. ಅವರ ಸ್ವಭಾವದಲ್ಲಿ ಉದಾಸೀನತೆ ಬಂದು ಬಿಡುತ್ತದೆ. ಏಕೆಂದರೆ ದೇವನೊಂದಿಗೆ ಇರಬೇಕಾದ ಮೈತ್ರಿ, ಸಂಬಂಧ ಅವರಿಗೆ ಇರುವುದಿಲ್ಲ. ಅವನ ಮೇಲೆ ವಿಶ್ವಾಸವಿರುವವರೆಗೆ ಮೈತ್ರಿಯಿರುತ್ತದೆ. ಅದಾಗ್ಯೂ ನೆನಪಿರಲಿ, ಅಲ್ಲಾಹನೊಂದಿಗಿನ ಸಂಬಂಧವು ಓರ್ವ ಗೆಳೆಯನಂತಿರುತ್ತದೆ. ಒಮ್ಮೆ ತನ್ನ ಗೆಳೆಯನ ಮಾತನ್ನು ಮನ್ನಿಸುತ್ತಾನೆ. ಇನ್ನೊಮ್ಮೆ ತನ್ನ ಮಿತ್ರನ ಮಾತನ್ನು ಒಪ್ಪಬೇಕಾಗುತ್ತದೆ. ಈ ಒಪ್ಪಿಗೆಯೂ ಸಂತೋಷ ಮತ್ತು ಮನ: ಪೂರ್ವಕವಾಗಿರಬೇಕೇ ಹೊರತು ಬೇಸರದಿಂದಲ್ಲ.

ಅಲ್ಲಾಹನು ಒಂದೆಡೆ ಹೀಗೆ ಹೇಳಿದನು. **"ವಲನಬ್ಲುವನ್ನಕುಮ್ ಬಿಶೈಯಿಂ ಮಿನಲ್ ಖೌಫಿ ವಲ್‌ಜೂಯಿ"** (ಅಲ್ –ಬಖರ –156) ಅಂದರೆ ನಾವು ಒಮ್ಮೆ ಭಯಗಳಿಗೆ ಒಳಪಡಿಸಿ, ಒಮ್ಮೆ ಹಸಿವಿಗೆ ಗುರಿಯಾಗಿಸಿ, ಒಮ್ಮೆ ಸಂಪತ್ತು ಫಲಗಳಲ್ಲಿ ನಷ್ಟವುಂಟು ಮಾಡಿ ಪರೀಕ್ಷಿಸುತ್ತೇವೆ. ಅದರಲ್ಲಿ ಸಂತಾನವು ಒಳಗೊಂಡಿದೆ. ಇನ್ನೊಂದು ವಿಷಯ ಏನೆಂದರೆ ಕೆಲವೊಮ್ಮೆ ತಯಾರಾದ ಬೆಳೆ ಆಕಸ್ಮಾತ್ತಾಗಿ ಬೆಂಕಿಗೆ ಆಹುತಿಯಾಗಿ ನಾಶಹೊಂದುತ್ತದೆ ಅಥವಾ ಕೆಲವೊಂದು ಕೆಲಸ ಕಾರ್ಯಗಳಲ್ಲಿ ವಿಫಲಗೊಳ್ಳುತ್ತಾನೆ. ಅಂತೂ ವಿವಿಧ ರೀತಿಯ ಆಪತ್ತುಗಳು ಮತ್ತು ತೊಂದರೆಗಳು ಮನುಷ್ಯನ ಮೇಲೆ ಬರುತ್ತವೆ. ಇದು ಅಲ್ಲಾಹನ ಪರೀಕ್ಷೆಯಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಯಾರು ಅಲ್ಲಾಹನ ಸಂತುಷ್ಟಿಯ ಮೇಲೆ ಸಂತುಷ್ಟರಾಗಿ ಮತ್ತು ಅವನ ವಿಧಿಯ ಮುಂದೆ ತಲೆಬಾಗುವರೋ ಅವರು ಮನ: ಪೂರ್ವಕವಾಗಿ ಹೇಳುವರು. **"ಇನ್ನ ಲಿಲ್ಲಾಹಿ ವ ಇನ್ನ ಇಲೈಹಿ ರಾಜಿವೂನ್** (ಅಲ್–ಬಖರ–157) ಯಾವುದೇ ರೀತಿಯ ದೂರು ದುಮ್ಮಾನ ನೀಡುವುದಿಲ್ಲ. ಇಂತಹ ಜನರ ಪೈಕಿಯೇ ಅಲ್ಲಾಹನು ಹೇಳಿದನು. **"ಊಲಾಇಕ ಅಲೈಹಿಂ ಸಲಾತುನ್"** ಅಂದರೆ ಅಲ್ಲಾಹನ ವಿಶೇಷ ರೀತಿಯ ಅನುಗ್ರಹಗಳ ಪಾಲು ಅವರಿಗಿರುತ್ತದೆ. ಅಲ್ಲಾಹನು ಅವರಿಗೆ ಆ ಕಷ್ಟಗಳಲ್ಲಿಯೂ ಮಾರ್ಗ ತೋರಿಸುತ್ತಾನೆ. ನೆನಪಿರಲಿ. ಅಲ್ಲಾಹನು ಬಹಳ ದಯಾವಂತನು ಮತ್ತು ಕರುಣೆ ತೋರುವವನಾಗಿದ್ದಾನೆ. ಯಾರೇ ಇರಲಿ ಅವನ ಸಂತೃಪ್ತಿಗೆ ಬದ್ಧರಾಗಿದ್ದರೆ, ಅವನ ಸಂತುಷ್ಟಿಯ ಮೇಲೆ ಸಂತೃಪ್ತರಾಗಿದ್ದರೆ ಅವರಿಗೆ ಫಲ ನೀಡದೇ ಬಿಡುವುದಿಲ್ಲ. ಇದು ಅವನು ತನ್ನ ಮಾತನ್ನು ಮನ್ನಿಸುವ ಹಂತ ಹಾಗೂ ಸ್ಥಾನವಾಗಿದೆ. ಇನ್ನೊಂದು ರೀತಿಯ ಸ್ಥಾನವೆಂದರೆ ಅವನು ಉದ್‌ವೂನಿ ಅಸ್ತಜಿಬ್ ಲಕುಂ (ಅಲ್–ಮೂಮಿನ್–61) ನಲ್ಲಿ ಹೇಳಿದನು. ಇಲ್ಲಿ ಅವನ ಪ್ರಾರ್ಥನೆಯನ್ನು ಸ್ವೀಕರಿಸುವ ವಾಗ್ದಾನ ನೀಡಿರುತ್ತಾನೆ. ಅಂದ ಹಾಗೆ ಶಹೀದನು ಆ ಮೊದಲನೆಯ ಸ್ಥಾನ ಮೇಲಿರುತ್ತಾನೆ. ಅಂದರೆ ಮನ: ಪೂರ್ವಕವಾಗಿ ಅವನ ಮಾತನ್ನು ಒಪ್ಪಿಕೊಳ್ಳುತ್ತಾನೆ. ಬಂದ ಆಪತ್ತನ್ನು ಒಂದು ಬಹುಮಾನವೆಂದು ಭಾವಿಸುತ್ತಾನೆ.

(ಮಲ್ಫೂಝಾತ್ ಸಂಪುಟ–1, ಪುಟ–348 ಮುದ್ರಣ 2016 ಖಾದಿಯಾನ್)

### ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ನಂಬಿಕೆಗಳೂ ವಿಶ್ವಾಸಗಳೂ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಎಲೈ ಭೂಮಿಯ ಎಲ್ಲೆಡೆಗಳಲ್ಲೂ ವಾಸಿಸುತ್ತಿರುವ ಜನರೇ, ಪೂರ್ವ ಪಶ್ಚಿಮಗಳಲ್ಲಿ ವಾಸಿಸುತ್ತಿರುವ ಮಾನವ ಆತ್ಮಗಳೇ, ನಾನು ನಿಮ್ಮೆಲ್ಲರನ್ನೂ ಬಹಳ ಒತ್ತಾಯಪೂರ್ವಕವಾಗಿ ಈ ಕಡೆಗೆ ಆಹ್ವಾನಿಸುತ್ತಿದ್ದೇನೆ: ಲೋಕದಲ್ಲಿ ಈಗಿರುವ ಸತ್ಯಧರ್ಮ ಇಸ್ಲಾಮ್ ಮಾತ್ರವಾಗಿದೆ ಮತ್ತು ಪವಿತ್ರ ಖುರ್‌ಆನ್ ವಿವರಿಸುವ ದೇವನೇ ಸತ್ಯದೇವನಾಗಿದ್ದಾನೆ. ಸದಾಕಾಲ ಆಧ್ಯಾತ್ಮಿಕ ಜೀವಿತವನ್ನು ಪ್ರದಾನ ಮಾಡಬಲ್ಲ, ವೈಭವ ಮತ್ತು ಪರಿಶುದ್ಧತೆಯ ಸಿಂಹಾಸನದಲ್ಲಿ ಆಸೀನರಾಗಿರುವ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಗಿದ್ದಾರೆ."

*(ತಿರ್‌ಯಾಖುಲ್ ಖುಲೂಬ್; ರೂಹಾನಿ ಖಝಾಇನ್ ಸಂಪುಟ–15, ಪುಟ–141)*

# ಖುತ್‌ಬ ಜುಮುಅ

**ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ರ) ಇಸ್ಲಾಮಿಗಾಗಿ ಎರಡನೆ ಆದಂ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಕಾಶ ಕಿರಣಗಳ ಮೊದಲ ಪ್ರಕಟಣೆಯಾಗಿದ್ದರು.**

**ಪ್ರತಿ ಕಾಲಘಟ್ಟದಲ್ಲೂ ಸಿದ್ದೀಖಿನ ಪರಿಪೂರ್ಣತೆಯನ್ನು ಗಳಿಸಲು ಪ್ರಯತ್ನಿಸುವ ಒಬ್ಬ ವ್ಯಕ್ತಿಗೆ ಆವಶ್ಯಕವಾದುದೇನೆಂದರೆ, ಅಬೂಬಕರರ(ರ) ಸ್ವಭಾವಗುಣ ಮತ್ತು ಸಹಜ ಪ್ರಕೃತಿಯನ್ನು ತನ್ನೊಳಗೆ ಸಾಧ್ಯವಾದಷ್ಟು ಉಂಟುಮಾಡಲು ಕಠಿಣ ಪರಿಶ್ರಮ ಮಾಡಬೇಕು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–12–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

إِيَّاكَ نَعْبُدُ وَإِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಇಂದು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪ ಶುರುವಾಗುವುದು. ಹಝ್ರತ್ ಅಬೂಬಕರರ(ರ) ಹೆಸರು ಅಬ್ದುಲ್ಲಾಹ್ ಎಂದಾಗಿತ್ತು. ಅವರ ತಂದೆಯ ಹೆಸರು ಉಸ್ಮಾನ್ ಬಿನ್ ಆಮಿರ್ ಎಂದಾಗಿತ್ತು. ಅಬೂಬಕರ್ ಎಂಬುದು ಅವರ ಉಪನಾಮವಾಗಿತ್ತು. ಅತೀಖ್ ಮತ್ತು ಸಿದ್ದೀಖ್ ಎಂಬುದು ಅವರ ಬಿರುದುನಾಮವಾಗಿತ್ತು. ಅಬ್ರಹನ ಆನೆ ಸೈನ್ಯವು ಮಕ್ಕದ ಮೇಲೆ ದಾಳಿ ನಡೆಸಿದ ಎರಡು ವರ್ಷ ಆರು ತಿಂಗಳ ನಂತರ ಅವರ ಜನನವಾಗಿತ್ತು. ಎಂದರೆ, ಕ್ರಿ.ಶ. 573ಯಲ್ಲಿ. ಹಝ್ರತ್ ಅಬೂಬಕರರ(ರ) ಸಂಬಂಧವು ಖುರೈಶ್ ಗೋತ್ರವಾದ ಬನೂತೈಮ್ ಬಿನ್ ಮುರ್ರದೊಂದಿಗೆ ಆಗಿತ್ತು. ಇಸ್ಲಾಮಿಗೆ ಮುಂಚೆ ಅವರ ಹೆಸರು ಅಬ್ದುಲ್‌ಕಅ್‌ಬ ಎಂದಾಗಿತ್ತು. ಅದನ್ನು ಹಝ್ರತ್ ಪೈಗಂಬರ್(ಸ) ಬದಲಾಯಿಸಿ ಅಬ್ದುಲ್ಲಾಹ್ ಎಂದು ಹೆಸರಿಸಿದರು. ಅವರ ತಂದೆಯ ಹೆಸರು ಉಸ್ಮಾನ್ ಬಿನ್ ಆಮಿರ್ ಎಂದಾಗಿತ್ತು ಮತ್ತು ಅವರ ಉಪನಾಮ ಅಬೂಖಹಾಫ ಎಂದಾಗಿತ್ತು. ಹಝ್ರತ್ ಅಬೂಬಕರರ(ರ) ತಾಯಿಯ ಹೆಸರು ಸಲ್ಮಾ ಬಿನ್ತ್ ಸಖ಼ಿ ಬಿನ್ ಆಮಿರ್ ಎಂದಾಗಿತ್ತು. ಅವರ ಉಪನಾಮ ಉಮ್ಮುಲ್‌ಖೈರ್ ಎಂದಾಗಿತ್ತು. ಒಂದು ಹೇಳಿಕೆಯ ಪ್ರಕಾರ ತಾಯಿಯ ಹೆಸರು ಲೈಲ ಬಿನ್ತ್ ಸಖ಼ರ್ ಎಂದಾಗಿತ್ತು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್‌ಹಾಬ್, ಸಂಪುಟ–3, ಪುಟ–91–92, ಅಬ್ದುಲ್ಲಾ ಬಿನ್ ಖಹಾಫ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, 2002) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್ ಭಾಗ–3, ಪುಟ–90, ದಆರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996) (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–3, ಪುಟ–204, ದಾರುಲ್ ಫಿಕರ್ ಬೈರೂತ್ 2003) (ಅಸಬ, ಸಂಪುಟ–4, ಪುಟ–145, ದಾರುಲ್ ಕುತುಬ್ ಇಲ್‌ಮಿಯ ಬಯರೂತ್ 2005)

ಹಝ್ರತ್ ಅಬೂಬಕರರ(ರ) ವಂಶಾವಳಿಯು ಏಳನೇ ತಲೆಮಾರಿನಲ್ಲಿ ಮುರ್ರ ಎಂಬವರ ಮುಖಾಂತರ ಹಝ್ರತ್ ಪೈಗಂಬರರರೊಂದಿಗೆ(ಸ) ಬಂದುಸೇರುತ್ತದೆ. (ಹಝ್ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್, ಪುಟ–57, ಉರ್ದು ಅನುವಾದ ಅನ್‌ಜುಮ್ ಸುಲ್ತಾನ್ ಶೆಹ್‌ಬಾಝ್ ಬುಕ್ ಕಾರ್ನರ್ ಶೋರೂಮ್ ಜ್ಹೇಲಮ್)

ಅದೇ ರೀತಿಯಲ್ಲಿ ಹಝ್ರತ್ ಅಬೂಬಕರರ(ರ) ತಾಯಿಯ ವಂಶಾವಳಿಯು ಅಜ್ಜಿ ಮತ್ತು ತಾತ, ಇಬ್ಬರ ಕಡೆಯಿಂದಲೂ ಆರನೇ ತಲೆಮಾರಿನಲ್ಲಿ ಹಝ್ರತ್ ಪೈಗಂಬರರೊಂದಿಗೆ(ಸ) ಸೇರುತ್ತದೆ. (ಸಯ್ಯದನಾ ಅಬೂಬಕರ್ ಸಿದ್ದೀಖ್ ಕೀ ಜ಼ಿಂದಗಿ ಕೇ ಸುನೆಹ್ರೆ ನಾಕಿಯಾತ್, ಅಬ್ದುಲ್ ಮಾಲಿಕ್ ಮುಜಾಹಿದ್, ಪುಟ–29, ದಾರುಸ್ಸಲಾಮ್)

ಹಝ್ರತ್ ಅಬೂಬಕರರ(ರ) ತಂದೆಯ ಪತ್ನಿಯಾದ ಉಮ್ಮುಲ್‌ಖೈರ್ ಎಂಬವರು ಅವರದೇ ಚಿಕ್ಕಪ್ಪರ ಮಗಳಾಗಿದ್ದರು. ಹಝ್ರತ್ ಅಬೂಬಕರರ(ರ) ತಂದೆತಾಯಂದಿರು ಅವರ ಮರಣದ ನಂತರವೂ ಜೀವಂತವಾಗಿದ್ದರು. ಅವರಿಬ್ಬರೂ ತಮ್ಮ ಮಗನಾದ ಹಝ್ರತ್ ಅಬೂಬಕರರ(ರ) ವಾರಸು ಸೊತ್ತಿನಿಂದ ತಮ್ಮ ಪಾಲನ್ನು ಪಡೆದಿದ್ದರು. ಹಝ್ರತ್ ಅಬೂಬಕರರ(ರ) ಮರಣದ ನಂತರ, ಮೊದಲು ಅವರ ತಾಯಿಯ ನಿಧನವಾಯಿತು. (ಅಸ್‌ದ್‌ಉಲ್‌ಗಾಬ, ಸಂಪುಟ–7, ಪುಟ–314–315, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2008)

ಅನಂತರ ಅವರ ತಂದೆ ಹಿಜರಿ 14ರಲ್ಲಿ 97ನೇ ವಯಸ್ಸಿನಲ್ಲಿ ನಿಧನರಾದರು. (ಅಲ್‌ಅಸಬ, ಸಂಪುಟ–3, ಪುಟ–424, ದಾರುಲ್ ಫಿಕರ್ 2001)

ಹಝ್ರತ್ ಅಬೂಬಕರರ(ರ) ತಂದೆ ಮತ್ತು ತಾಯಿಗೆ ಇಸ್ಲಾಂ ಸ್ವೀಕರಿಸುವ ಸೌಭಾಗ್ಯ ಸಿಕ್ಕಿತ್ತು.

ಅವರ ತಂದೆಯ ಇಸ್ಲಾಂ ಸ್ವೀಕಾರದ ಘಟನೆ ಹೀಗಿದೆ: ಅವರ ತಂದೆಯು ಮಕ್ಕಾ ವಿಜಯದ ತನಕ ವಿಶ್ವಾಸಿಯಾಗಿರಲಿಲ್ಲ. ಆ ಸಮಯದಲ್ಲಿ ಅವರ ದೃಷ್ಟಿ ನಷ್ಟವಾಗಿತ್ತು. ಮಕ್ಕಾ ವಿಜಯದ ವೇಳೆ ಹಝ್ರತ್ ಪೈಗಂಬರ್(ಸ) ಮಸ್ಜಿದ್ ಹರಾಮಿನಲ್ಲಿ ಪ್ರವೇಶಿಸಿದಾಗ ಹಝ್ರತ್ ಅಬೂಬಕರ್(ರ) ತನ್ನ ತಂದೆಯನ್ನು ಜೊತೆಗೆ ಸೇರಿಸಿ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾದರು. ಹಝ್ರತ್ ಪೈಗಂಬರ್(ಸ) ಅವರನ್ನು ನೋಡಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಬೂಬಕರ್, ನೀವು ವೃದ್ಧರಾದ ನಿನ್ನ ತಂದೆಯನ್ನು ಮನೆಯಲ್ಲೇ ಇರಲು ಬಿಡಬೇಕಾಗಿತ್ತು. ನಾನು ಸ್ವತಃ ಅವರ ಬಳಿಗೆ ಬರುತ್ತಿದ್ದೆ. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಯಾ ರಸೂಲಲ್ಲಾಹ್, ನಾನು ನಿಮ್ಮ ಸನ್ನಿಧಿಯಲ್ಲಿ ಬರುವುದು ನೀವು ನಮ್ಮ ಸನ್ನಿಧಿಗೆ ಬರುವುದಕ್ಕಿಂತ ಹೆಚ್ಚು ಸರಿಯಾದ ಸಂಗತಿಯಾಗಿದೆ. ಹಝ್ರತ್ ಅಬೂಬಕರ್(ರ) ತಂದೆಯನ್ನು ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಕುಳ್ಳಿರಿಸಿದಾಗ ಹಝ್ರತ್ ಪೈಗಂಬರ್(ಸ) ಅವರ ಎದೆಯನ್ನು ಸವರಿಕೊಂಡು ಹೀಗೆ ಹೇಳಿದರು: ಇಸ್ಲಾಂ ಸ್ವೀಕರಿಸಿರಿ. ನೀವು ಸುರಕ್ಷಿತರಾಗುವಿರಿ. ಹೀಗೆ ಅಬೂಖಹಾಫ ಇಸ್ಲಾಂ ಸ್ವೀಕರಿಸಿದರು.
(ಅಲ್‌ಅಸಾಬ ಫೀ ತಮೀಝಿಸ್ಸಹಾಬ ಲಿಇಬ್ನೆ ಹಜರ್, ಸಂಪುಟ–4, ಪುಟ–374–375, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ; ಅಬೂಕಹಫರನ್ನು ಮಕ್ಕಾ ವಿಜಯದಂದು ತರಲಾಯಿತು. ಅವರ ತಲೆಗೂದಲು ಮತ್ತು ಗಡ್ಡ ಸಿಗಾಮ ಹೂವಿನಂತೆ ಬೆಳ್ಳಗಾಗಿತ್ತು. ಸಿಗಾಮ ಎಂಬುದು ಪರ್ವತದಲ್ಲಿ ಬೆಳೆಯುವ ಒಂದು ಬಿಳಿ ಬಣ್ಣದ ಹೂವಾಗಿದೆ. ಹೇಗಿದ್ದರೂ ತಲೆಗೂದಲು ಮತ್ತು ಗಡ್ಡ ಸಂಪೂರ್ಣವಾಗಿ ಬೆಳ್ಳಗಾಗಿತ್ತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅದನ್ನು ಬೇರೆ ಯಾವುದಾದರೂ ಬಣ್ಣಕ್ಕೆ ಬದಲಾಯಿಸು. ಎಂದರೆ ಕೂದಲಿಗೆ ಬಣ್ಣ ಹಚ್ಚಿದರೆ ಒಳ್ಳೆಯದಾಗಿತ್ತು. ಆದರೆ ಕಪ್ಪು ಬಣ್ಣ ಹಚ್ಚಬೇಡಿರಿ.
(ಸಹೀಹ್ ಮುಸ್ಲಿಮ್, ಕಿತಾಬುಲ್ ಅದಬ್, ಹದೀಸ್–3911 ಅನುವಾದ, ಸಂಪುಟ–11, ಪುಟ–198–199)

ಇದರ ಅರ್ಥ ಕಪ್ಪು ಬಣ್ಣ ಕೆಟ್ಟದಾಗಿದೆ ಎಂದಲ್ಲ. ಬದಲಾಗಿ ಇಷ್ಟು ವೃದ್ಧರಾದ ವ್ಯಕ್ತಿಯ ಮುಖಕ್ಕೆ ಅದು ಚೆನ್ನಾಗಿ ಕಾಣಲಿಕ್ಕಿಲ್ಲ ಎಂದಾಗಿದೆ. ಹೇಗಿದ್ದರೂ ಬಣ್ಣ ಹಚ್ಚಬೇಕೆಂದು ಅವರು ಹೇಳಿದರು.

ಹಝ್ರತ್ ಅಬೂಬಕರ್‌ರ(ರ) ತಾಯಿ ಇಸ್ಲಾಮಿನ ಆರಂಭ ಕಾಲದಲ್ಲೇ ಮುಸ್ಲಿಮರಾಗಿದ್ದರು. ಅದರ ಪ್ರಸ್ತಾಪ ಸೀರತ್ ಹಲ್‌ಬಿಯದಲ್ಲಿ ಹೀಗಿದೆ: ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬರು ರಹಸ್ಯವಾಗಿ ಅಲ್ಲಾಹನ ಆರಾಧನೆ ಮಾಡಲು ಸಾಧ್ಯವಾಗಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ದಾರೆ ಅರ್ಕಮಿಗೆ ಹೋಗಿದ್ದರು. ಆ ಸಮಯದಲ್ಲಿ ಒಟ್ಟು 38 ಮುಸ್ಲಿಮರಿದ್ದರು. ಆಗ ಮಸ್ಜಿದ್ ಹರಾಮಿಗೆ ಹೋಗಲು ಹಝ್ರತ್ ಪೈಗಂಬರ್‌ರ(ಸ) ಸನ್ನಿಧಿಯಲ್ಲಿ ಹಝ್ರತ್ ಅಬೂಬಕರ್(ರ) ವಿನಂತಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ನಮ್ಮ ಸಂಖ್ಯೆ ಬಹಳ ಕಡಿಮೆ, ಆದರೆ ಹಝ್ರತ್ ಅಬೂಬಕರ್(ರ) ಒತ್ತಾಯಪಡಿಸುತ್ತಿದ್ದರು. ಕೊನೆಗೆ ಹಝ್ರತ್ ಪೈಗಂಬರ್(ಸ) ತನ್ನ ಎಲ್ಲ ಸಹಾಬರ ಜೊತೆಗೆ ಮಸ್ಜಿದ್ ಹರಾಮಿಗೆ ಹೋದರು. ಅಲ್ಲಿ ಹಝ್ರತ್ ಅಬೂಬಕರ್(ರ) ಜನರ ಮುಂದೆ ಭಾಷಣ ಮಾಡಿದರು. ಆಗ ಹಝ್ರತ್ ಪೈಗಂಬರ್(ಸ) ಸಹ ಕುಳಿತುಕೊಂಡಿದ್ದರು. ತನ್ನ ಭಾಷಣದಲ್ಲಿ ಜನರನ್ನು ಅಲ್ಲಾಹ್ ಮತ್ತು ರಸೂಲಿನ ಕಡೆಗೆ ಆಮಂತ್ರಿಸಿದರು. ಹೀಗೆ ಹಝ್ರತ್ ಪೈಗಂಬರರ(ಸ) ನಂತರ ಹಝ್ರತ್ ಅಬೂಬಕರ್(ರ) ಅಲ್ಲಾಹನ ಕಡೆಗೆ ಜನರನ್ನು ಆಮಂತ್ರಿಸಿದ ಮೊದಲ ಭಾಷಣಗಾರರಾದರು. ಆಗ ಹಝ್ರತ್ ಅಬೂಬಕರ್(ರ) ಮತ್ತು ಇತರ ಮುಸ್ಲಿಮರನ್ನು ಹೊಡೆಯಲಿಕ್ಕಾಗಿ ಸತ್ಯನಿಷೇಧಿಗಳು ಧಾವಿಸಿ ಅವರನ್ನು ಬಹಳ ಹೀನಾಯವಾಗಿ ಹೊಡೆದರು. ಹಝ್ರತ್ ಅಬೂಬಕರ್‌ರನ್ನು(ರ) ಕಾಲಿನಡಿಯಲ್ಲಿ ಹಾಕಿ ತುಳಿಯಲಾಯಿತು. ಅವರನ್ನು ಬಹಳವಾಗಿ ಹೊಡೆಯಲಾಯಿತು. ಹಝ್ರತ್

ಅಬೂಬಕರ್‌ರನ್ನು(ರ) ಉತ್ಬ ಬಿನ್ ರಬೀಅ ತನ್ನ ಬೂಟಿನಿಂದ ಹೊಡೆಯುತ್ತಿದ್ದರು. ಅವನು ತನ್ನ ಬೂಟಿನಿಂದ ಹಝ್ರತ್ ಅಬೂಬಕರ್‌ರ(ರ) ಮುಖದಲ್ಲಿ ಎಷ್ಟು ಹೊಡೆದನು ಎಂದರೆ, ಅವರ ಮುಖ ಉಬ್ಬಿದ ಕಾರಣದಿಂದ ಮುಖದಲ್ಲಿ ಮೂಗಿನ ಗುರುತು ಕೂಡ ಸಿಗುತ್ತಿರಲಿಲ್ಲ. ಅನಂತರ ಬನೂ ತೈಮಿನ ಜನರು ಓಡುತ್ತಾ ಬಂದರು ಮತ್ತು ಹಝ್ರತ್ ಅಬೂಬಕರ್‌ರನ್ನು(ರ) ಮುಶ್ರಿಕರಿಂದ ಬಿಡಿಸಿಕೊಂಡರು. ಬನೂ ತೈಮಿನ ಜನರು ಹಝ್ರತ್ ಅಬೂಬಕರ್‌ರನ್ನು(ರ) ಒಂದು ಹೊದಿಕೆಯಲ್ಲಿ ಇರಿಸಿ ಎತ್ತಿಕೊಂಡು ಮನೆಗೆ ತಲುಪಿಸಿದರು. ಹಝ್ರತ್ ಅಬೂಬಕರ್(ರ) ಖಂಡಿತ ಸಾವನ್ನಪ್ಪುವರು ಎಂದು ಅವರು ಭಾವಿಸುತ್ತಿದ್ದರು. ಅಷ್ಟರ ಮಟ್ಟಿಗೆ ಮುಶ್ರಿಕರು ಅವರನ್ನು ಹೊಡೆದಿದ್ದರು. ಅನಂತರ ಬನೂ ತೈಮಿನ ಜನರು ಮರಳಿಬಂದು ಕಅ್‌ಬ ಭವನವನ್ನು ಪ್ರವೇಶಿಸಿದರು. ಅವರು ಹೇಳಿದರು: ಅಲ್ಲಾಹನಾಣೆ, ಅಬೂಬಕರ್(ರ) ಮೃತಪಟ್ಟರೆ, ನಾವು ಖಂಡಿತ ಉತ್ಬನನ್ನು ಕೊಲ್ಲುವೆವು. ಅನಂತರ ಅವರು ಹಝ್ರತ್ ಅಬೂಬಕರರ(ರ) ಬಳಿಗೆ ಮರಳಿ ಬಂದರು. ಅವರ ತಂದೆಯಾದ ಅಬೂಖಹಾಫ ಮತ್ತು ಬನೂತೈಮಿನ ಜನರು ಅವರೊಂದಿಗೆ ಮಾತನಾಡಲು ಪ್ರಯತ್ನಿಸಿದರು. ಆದರೆ ಪ್ರಜ್ಞಾಹೀನತೆಯ ಕಾರಣದಿಂದ ಯಾವುದೇ ಜವಾಬು ನೀಡಲು ಸಾಧ್ಯವಾಗುತ್ತಿರಲಿಲ್ಲ. ಕೊನೆಗೆ ಸಂಜೆಯಾದಾಗ ಮೊತ್ತಮೊದಲು ಹೀಗೆ ಕೇಳಿದರು: ಹಝ್ರತ್ ಪೈಗಂಬರ್(ಸ) ಹೇಗಿರುವರು. ಆದರೆ ಜನರು ಅವರ ಮಾತಿಗೆ ಉತ್ತರಿಸಲಿಲ್ಲ. ಆಗ ಅವರು ಪದೇ ಪದೇ ಇದೇ ಪ್ರಶ್ನೆಯನ್ನು ಕೇಳುತ್ತಿದ್ದರು. ಆಗ ಅವರು ತಾಯಿ ಹೇಳಿದರು: ಅಲ್ಲಾಹನಾಣೆ, ನನಗೆ ನಿಮ್ಮ ಸ್ನೇಹಿತನ ಬಗ್ಗೆ ಏನೂ ಗೊತ್ತಿಲ್ಲ. ತನ್ನ ತಾಯಿಯೊಡನೆ ಹಝ್ರತ್ ಉಮರ್ ಬಿನ್ ಖತ್ತಾಬ್‌ರ(ರ) ಸಹೋದರಿಯಾದ ಉಮ್ಮೇ ಜಮೀಲ್‌ರ(ರ) ಬಳಿಗೆ ಹೋಗಿ ಹಝ್ರತ್ ಪೈಗಂಬರರ(ಸ) ಸ್ಥಿತಿಯ ಬಗ್ಗೆ ಕೇಳಲು ಹಝ್ರತ್ ಅಬೂಬಕರ್(ರ) ಹೇಳಿದರು. ಉಮ್ಮೇ ಜಮೀಲ್(ರ) ಮೊದಲೇ ಮುಸ್ಲಿಮರಾಗಿದ್ದರು. ಆದರೆ ತನ್ನ ಇಸ್ಲಾಂ ಸ್ವೀಕಾರವನ್ನು ರಹಸ್ಯವಾಗಿ ಇಟ್ಟಿದ್ದರು. ಹೀಗೆ ಅವರ ತಾಯಿ ಉಮ್ಮೇ ಜಮೀಲ್‌ರ(ರ) ಬಳಿಗೆ ಹೋದರು ಮತ್ತು ಮುಹಮ್ಮದ್ ಬಿನ್ ಅಬ್ದುಲ್ಲಾಹ್‌ರ(ಸ) ಕುರಿತು ಅಬೂಬಕರ್ ಕೇಳುತ್ತಿದ್ದಾರೆ ಎಂದು ಹೇಳಿದರು. ನನಗೆ ಅದೆಲ್ಲ ಗೊತ್ತಿಲ್ಲವೆಂದು ಅವರು ಹೇಳಿದರು. ನಿಮ್ಮ ಜೊತೆಗೆ ನಾನು ಬರಬೇಕೆಂದು ನೀವು ಬಯಸುತ್ತೀರಾ ಎಂದು ಉಮ್ಮೇ ಜಮೀಲ್ ಅಬೂಬಕರರ(ರ) ತಾಯಿಯೊಡನೆ ಕೇಳಿದರು. ಬಯಸುತ್ತೇನೆಂದು ಅವರು ಹೇಳಿದರು. ಆಗ ಉಮ್ಮೇ ಜಮೀಲ್ ಅವರ ಜೊತೆಗೆ ಹಝ್ರತ್ ಅಬೂಬಕರರ(ರ) ಬಳಿಗೆ ಬಂದರು. ಹಝ್ರತ್ ಅಬೂಬಕರ್(ರ) ತೀವ್ರ ಗಾಯಾಳುವಾಗಿ ನೆಲದಲ್ಲಿ ಮಲಗಿರುವುದನ್ನು ಕಂಡಾಗ ಉಮ್ಮೇ ಜಮೀಲ್ ತೀವ್ರ ದುಃಖಿತರಾದರು ಮತ್ತು ಹೀಗೆ ಹೇಳಿದರು: ನಿಮ್ಮೊಂದಿಗೆ ಹೀಗೆ ವರ್ತಿಸಿದವರು ಖಂಡಿತ ಪಾಪಿಗಳಾಗಿರುವರು. ಅಲ್ಲಾಹನು ಅದರ ಪ್ರತೀಕಾರವನ್ನು ತೀರಿಸುವನು ಎಂದು ನನಗೆ ಭರವಸೆಯಿದೆ. ಆಗ ಹಝ್ರತ್ ಪೈಗಂಬರ್(ಸ) ಹೇಗಿರುವರು ಎಂದು ಹಝ್ರತ್ ಅಬೂಬಕರ್(ರ) ಅವರೊಡನೆ ಕೇಳಿದರು. ಉಮ್ಮೇ ಜಮೀಲ್(ರ) ಹೇಳಿದರು: ನಾನು ಹೇಳುವುದನ್ನು ನಿಮ್ಮ ತಾಯಿ ಕೂಡ ಕೇಳುತ್ತಿದ್ದಾರೆ. ಹಝ್ರತ್ ಅಬೂಬಕರ್(ರ) ಹೇಳಿದರು: ನೀನು ಹೇಳಲಿರುವ ರಹಸ್ಯವನ್ನು ಅವರು ಬಯಲು ಮಾಡಲಾರರು. ಆಗ ಉಮ್ಮೇ ಜಮೀಲ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಕ್ಷೇಮವಾಗಿದ್ದಾರೆ. ಈಗ ಅವರು ಎಲ್ಲಿರುವರು ಎಂದು ಹಝ್ರತ್ ಅಬೂಬಕರ್(ರ) ಕೇಳಿದರು. ಉಮ್ಮೇ ಜಮೀಲ್(ರ) ಹೇಳಿದರು: ದಾರೇಅರ್ಕಮಿನಲ್ಲಿ. ಹಝ್ರತ್ ಅಬೂಬಕರ್‌ರ(ರ) ಪ್ರವಾದಿ ಪ್ರೇಮದ ಉನ್ನತಮಟ್ಟವನ್ನು ನೋಡಿರಿ. ಈ ಮಾತನ್ನು ಕೇಳಿದಾಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗುವ ವರೆಗೂ ನಾನು ಆಹಾರ ಪಾನೀಯವನ್ನು ಸೇವಿಸುವುದಿಲ್ಲ. ಹಝ್ರತ್ ಅಬೂಬಕರ್‌ರ(ರ) ತಾಯಿ ಹೇಳುತ್ತಾರೆ: ನಾವು ಹಝ್ರತ್ ಅಬೂಬಕರ್‌ರನ್ನು(ರ) ಸ್ವಲ್ಪ ಸಮಯ ತಡೆದು ನಿಲ್ಲಿಸಿದೆವು. ಕೊನೆಗೆ ಜನರ ಬರುವುದು ಮತ್ತು ಹೋಗುವುದು ಕಡಿಮೆಯಾದಾಗ ನಾವು ಅವರನ್ನು ಎತ್ತಿ ಹೊರಟೆವು. ಅವರು ನನ್ನ ಆಸರೆಯಿಂದ ನಡೆಯುತ್ತಿದ್ದರು. ಕೊನೆಗೆ ಹಝ್ರತ್ ಪೈಗಂಬರರ(ಸ) ಸನ್ನಿಧಿಗೆ ಅವರು ತಲುಪಿದರು. ಆಗ ಹಝ್ರತ್ ಅಬೂಬಕರ್(ರ) ತೀವ್ರ ಭಾವುಕರಾದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರರ(ರ) ಈ ಸ್ಥಿತಿಯನ್ನು ಕಂಡಾಗ ಅವರನ್ನು ಚುಂಬಿಸಲು ಬಾಗಿದರು. ಇತರ ಮುಸ್ಲಿಮರು ಕೂಡ ಬಾಗಿದರು. ಹಝ್ರತ್ ಅಬೂಬಕರ್(ರ): ಹೇಳಿದರು: ನನ್ನ ತಂದೆತಾಯಿ ನಿಮಗೆ ಸಮರ್ಪಣೆ, ನನಗೆ ಮುಖದಲ್ಲಿ ಆದ ಗಾಯದ ಹೊರತು ಬೇರೆ ಯಾವುದೇ ನೋವಿಲ್ಲ ಮತ್ತು ನನ್ನ ತಾಯಿ ತನ್ನ ಮಗನಾದ ನನ್ನೊಂದಿಗೆ ಉತ್ತಮವಾಗಿ ವರ್ತಿಸುವವರಾಗಿದ್ದಾರೆ ಹಾಗೂ ನಿಮ್ಮ ಮುಖಾಂತರ ನನ್ನ ತಾಯಿ ಬಹುಶಃ ಬೆಂಕಿಯಿಂದ ಪಾರಾಗಬಹುದು. ಎಂದರೆ ಸತ್ಯವಿಶ್ವಾಸಿಯಾಗಬಹುದು. ಆಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರ(ರ) ತಾಯಿಗಾಗಿ ದುಆ ಮಾಡಿದರು ಮತ್ತು ಅವರ ತಾಯಿಯೊಡನೆ ಇಸ್ಲಾಂ ಸ್ವೀಕರಿಸಲು ಹೇಳಿದರು. ಹೀಗೆ ಅವರು ಇಸ್ಲಾಂ ಸ್ವೀಕರಿಸಿದರು. (ಅಸ್ಸೀರತುಲ್ ಹಲಬೀಯ, ಸಂಪುಟ–1, ಪುಟ–418–419, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) ಹೀಗೆ ಹಝ್ರತ್ ಅಬೂಬಕರ್‌ರ(ರ) ತಾಯಿ ಆರಂಭ ಕಾಲದಲ್ಲೇ ಇಸ್ಲಾಂ ಸ್ವೀಕರಿಸಿದ್ದರು.

ಸಹಾಬರ ಜೀವನಚರಿತ್ರೆಯ ಬಗ್ಗೆ ವಿಶ್ವಾಸಯೋಗ್ಯ ಒಂದು ಗ್ರಂಥದ ವರದಿಗಳ ಪ್ರಕಾರ ಅಬ್ರಹನ ಆನೆ ಸೈನ್ಯವು ಮಕ್ಕದ ಮೇಲೆ ಆಕ್ರಮಣ ನಡೆಸಿದ ಎರಡು ವರ್ಷ ಆರು ತಿಂಗಳ ನಂತರ ಹಝ್ರತ್ ಅಬೂಬಕರ್(ರ) ಜನಿಸಿದ್ದರು. (ಅಲ್‌ಅಸಾಬ ಫೀ ತಮೀಝೀಸ್ಸಹಾಬ, ಸಂಪುಟ–4, ಪುಟ–145, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಅವರು ಗಜವರ್ಷದ ಮೂರು ವರ್ಷದ ನಂತರ ಹುಟ್ಟಿದ್ದರು ಎಂದು ತಾರೀಖ್ ತಬರಿ ಮತ್ತು ತಬಖಾತುಲ್ ಖುಬ್ರದಲ್ಲಿ ಬರೆಯಲಾಗಿದೆ.
(ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–151, ಝಿಕರ್ ವಸೀಯ ಅಬೀಬಕರ್ ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ತಾರೀಖ್ ತಬರಿ, ಸಂಪುಟ–2, ಪುಟ–348, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಅದೇ ರೀತಿಯಲ್ಲಿ ಹಝ್ರತ್ ಅಬೂಬಕರ್‌ರಿಗೆ(ರ) ಎರಡು ಪ್ರಸಿದ್ಧ ಬಿರುದುನಾಮಗಳಿವೆ. ಒಂದು **ಅತೀಖ್** ಮತ್ತೊಂದು **ಸಿದ್ದೀಖ್**. ಹಝ್ರತ್ ಅಬೂಬಕರ್‌ರ(ರ) "ಅತೀಖ್" ಎಂಬ ಬಿರುದುನಾಮದ ಕುರಿತು ಹಝ್ರತ್ ಆಯಿಶರ(ರ) ಒಂದು ಹೇಳಿಕೆ ಹೀಗಿದೆ: ಒಮ್ಮೆ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರರ(ಸ) ಬಳಿಗೆ ಬಂದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಂತ ಅತೀಖುಲ್ಲಾಹಿ ಮಿನನ್ನಾರ್**. ಎಂದರೆ, ನಿನ್ನನ್ನು ಅಲ್ಲಾಹನು ಬೆಂಕಿಯಿಂದ ಸುರಕ್ಷಿತಗೊಳಿಸಿದ್ದಾನೆ. ಅಂದಿನಿಂದ ಅವರಿಗೆ ಅತೀಖ್ ಎಂಬ ಬಿರುದುನಾಮ ನೀಡಲಾಯಿತು. (ಸನನ್ ಅತ್ತಿರ್‌ಮಿಝಿ, ಕಿತಾಬುಲ್ ಮನಾಖಿಬ್, ಹದೀಸ್–3679)

ಆದರೆ ಅತೀಖ್ ಎಂಬುದು ಅವರ ಹೆಸರಾಗಿತ್ತು ಬಿರುದುನಾಮವಲ್ಲವೆಂದು ಕೆಲವು ಚರಿತ್ರೆಗಾರರು ಹೇಳುತ್ತಾರೆ. ಆದರೆ ಇದು ಸರಿಯಲ್ಲ. ಅಲ್ಲಾಮ ಜಲಾಲುದ್ದೀನ್ ಸುಯೂತಿ ತನ್ನ ತಾರೀಖುಲ್ ಖುಲಫ ಎಂಬ ಗ್ರಂಥದಲ್ಲಿ ಇಮಾಂ ನವವಿಯನ್ನು ಹೇಳಿಕೆಯನ್ನು ಉಲ್ಲೇಖಿಸುತ್ತಾ ಹೇಳುತ್ತಾರೆ: ಹಝ್ರತ್ ಅಬೂಬಕರ್‌ರ(ರ) ಹೆಸರು ಅಬ್ದುಲ್ಲಾಹ್ ಎಂದಾಗಿತ್ತು. ಇದೇ ಹೆಚ್ಚು ಪ್ರಸಿದ್ಧ ಮತ್ತು ಸರಿಯಾದುದಾಗಿದೆ. ಅವರ ಹೆಸರು ಅತೀಖ್ ಆಗಿತ್ತು ಎಂದು ಹೇಳಲಾಗುತ್ತದೆ. ಆದರೆ ಅತೀಖ್ ಎಂಬುದು ಅವರ ಬಿರುದುನಾಮವಾಗಿತ್ತು ಎಂದು ಹೆಚ್ಚಿನ ಪಂಡಿತರು ಒಮ್ಮತಾಭಿಪ್ರಾಯವನ್ನು ಹೊಂದಿರುವರು. ಅದೇ ಸರಿ.
(ತಾರೀಖುಲ್ ಖುಲಫಾ, ಪುಟ–27, ದಾರುಲ್ ಕುತುಬ್ ಅಲ್‌ಅರಬಿ ಬೈರೂತ್ 1999)

ಸೀರತ್ ಇಬ್ನು ಹಿಶಾಮಿನಲ್ಲಿ ಅತೀಖ್ ಎಂಬ ಬಿರುದುನಾಮದ ಕಾರಣವನ್ನು ಹೀಗೆ ವಿವರಿಸಲಾಗಿದೆ: ಹಝ್ರತ್ ಅಬೂಬಕರ್‌ರ(ರ) ಮುಖದ ಸೌಂದರ್ಯ ಮತ್ತು ಅವರ ಚೆಲುವಿನ ಕಾರಣದಿಂದ ಅವರನ್ನು ಅತೀಖ್ ಎಂದು ಕರೆಯಲಾಗುತ್ತಿತ್ತು. (ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಪುಟ–117, ದಾರ್ ಇಬ್ನೆ ಹಝ್ಮ್ 2009)

ಸೀರತ್ ಇಬ್ನು ಹಿಶಾಮಿನ ವ್ಯಾಖ್ಯಾನದಲ್ಲಿ ಅತೀಖ್ ಎಂಬ ಬಿರುದಿಗೆ ಹೀಗೆ ಕಾರಣಗಳನ್ನು ನೀಡಲಾಗಿದೆ: ಅತೀಖ್ ಎಂದರೆ, ಉನ್ನತ ನೈತಿಕಸ್ವಭಾವಗಳನ್ನು ಹೊಂದಿರುವವರು. ಎಂದರೆ ಅವರು ನ್ಯೂನತೆಗಳಿಂದ ಸುರಕ್ಷಿತರಾಗಿದ್ದರು. ಅದರ ಬಗ್ಗೆ ಹೀಗೆಯೂ ಹೇಳಲಾಗುತ್ತದೆ: ಹಝ್ರತ್ ಅಬೂಬಕರ್‌ರ(ರ) ತಾಯಿಯ ಯಾವುದೇ ಮಕ್ಕಳು ಜೀವಂತವಾಗಿ ಉಳಿಯುತ್ತಿರಲಿಲ್ಲ. ಅವರಿಗೆ ಒಂದು ಮಗು ಜನಿಸಿದರೆ, ಅವನಗೆ ಅಬ್ದುಲ್‌ಕಅ್‌ಬ ಎಂದು ಹೆಸರಿಸುವುದಾಗಿ ಮತ್ತು ಕಅ್‌ಬಗಾಗಿ ಸಮರ್ಪಿಸುವುದಾಗಿ ಅವರು ಹರಕೆ ಮಾಡಿದರು. ಅವರು ಜೀವಂತವಾಗಿದ್ದುಕೊಂಡು ಯುವಕನಾದಾಗ ಅವರಿಗೆ ಅತೀಖ್ ಎಂಬ ನಾಮ ಬಂತು. ಎಂದರೆ ಮರಣದಿಂದ ರಕ್ಷಣೆ ಪಡೆದ ವ್ಯಕ್ತಿ. (ಅರ್ರೌಝುಲ್ ಅನ್‌ಫ್ ಫೀ ತಫ್ಸೀರ್ ಅಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಶಾಮ್, ಸಂಪುಟ–1, ಪುಟ–430, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ ಮೊದಲನೇಯ ಮುದ್ರಣ)

ಇದಲ್ಲದೆಯೂ ಅತೀಖ್ ಎಂಬ ಹೆಸರಿಗೂ ಬೇರೆ ಬೇರೆ ಕಾರಣಗಳನ್ನು ಹೇಳಲಾಗುತ್ತದೆ. ಕೆಲವರ ಪ್ರಕಾರ, ಅವರ ವಂಶ ಪರಂಪರೆಯಲ್ಲಿ ನ್ಯೂನತೆಯೆಂದು ಬೊಟ್ಟುಮಾಡುವಂತಹ ಯಾವುದೇ ಸಂಗತಿ ಇದ್ದಿರಲಿಲ್ಲ. ಆದ್ದರಿಂದ ಅವರನ್ನು ಅತೀಖ್ ಎಂದು ಹೇಳಲಾಯಿತು. (ಅಲ್‌ಇಸ್ತಿಯಾಬ್ ಫೀ ಮಾರಿಫತಿಸ್ಸಹಾಬ, ಸಂಪುಟ–3, ಪುಟ–963, ಅಬ್ದುಲ್ಲ ಬಿನ್ ಖಹಾಫ, ದಾರುಲ್ ಜೀಲ್ ಬೈರೂತ್)

ಅತೀಖ್ ಎಂಬುದರ ಒಂದು ಅರ್ಥ, ಹಳೆಯ ಅಥವಾ ಪುರಾತನ ಎಂದೂ ಆಗಿದೆ. ಹಝ್ರತ್ ಅಬೂಬಕರ್(ರ) ಹಿಂದಿನಿಂದಲೇ ಒಳಿತು ಮತ್ತು ಸತ್ಕರ್ಮಗಳನ್ನು ಮಾಡುವವರಾಗಿದ್ದ ಕಾರಣದಿಂದ ಅವರನ್ನು ಅತೀಕ್ ಎಂದು ಕರೆಯಲಾಯಿತು ಎಂದೂ ಹೇಳಲಾಗುತ್ತದೆ. (ಅಲ್‌ಅಸಾಬ ಫೀ ತಮೀಝೀಸ್ಸಹಾಬ, ಸಂಪುಟ–4, ಪುಟ–146, ಅಬ್ದುಲ್ಲ ಬಿನ್ ಉಸ್ಮಾನ್, ದಾರುಲ್ ಕುತುಬ್ ಇಲ್‌ಮಿಯ ಬೂರೂತ್2005)

ಅದೇ ರೀತಿಯಲ್ಲಿ ಒಳಿತು ಮತ್ತು ಸತ್ಕರ್ಮಗಳಲ್ಲಿ ಮುಂದಾಗುತ್ತಿದ್ದ ಕಾರಣದಿಂದ ಅವರಿಗೆ ಅತೀಖ್ ಎಂಬ ಬಿರುದುನಾಮ ಲಭಿಸಿತ್ತು ಎಂದೂ ಹೇಳಲಾಗುತ್ತದೆ. (ಉಮ್ದತುಲ್ ಖಾರಿ ಕಿತಾಬ್ ಬದಅಲ್ ಖಲ್ಖ್, ಸಂಪುಟ–16, ಪುಟ–260, ದಾರ್ ಅಹ್ಯಾಉತ್ತುರಾಸುಲ್ ಅರಬಿ, ಬೈರೂತ್ 2003)

ಅವರ ಮತ್ತೊಂದು ಬಿರುದುನಾಮವಾದ "ಸಿದ್ದೀಖ್" ಎಂಬುದನ್ನು ಏಕೆ ಇರಿಸಲಾಯಿತು ಎಂಬುದರ ಕುರಿತು ಸಹ ಪ್ರಸ್ತಾಪಿಸಲಾಗುತ್ತದೆ. ಅಲ್ಲಾಮ ಜಲಾಲುದ್ದೀನ್ ಸುಯೂತಿರ(ರ) ಬರೆಯುತ್ತಾರೆ: ಇಸ್ಲಾಮಿಗೆ ಮುಂಚೆ ಅವರಿಂದ ಪ್ರಕಟವಾಗುತ್ತಿದ್ದ ಸತ್ಯತೆಯ ಕಾರಣದಿಂದ ಈ ಬಿರುದುನಾಮವನ್ನು ಕೊಡಲಾಗಿತ್ತು ಎಂದು ಹೇಳಲಾಗುತ್ತದೆ. ಹಝ್ರತ್ ಪೈಗಂಬರರ(ಸ) ಸಂದೇಶಗಳನ್ನು ತಕ್ಷಣವೇ ಅಂಗೀಕರಿಸುತ್ತಿದ್ದ ಕಾರಣದಿಂದ ಅವರಿಗೆ ಸಿದ್ದೀಖ್ ಎಂಬ ಹೆಸರು ಬಂದಿತ್ತು

ಎಂದೂ ಹೇಳಲಾಗುತ್ತದೆ. (ತಾರೀಖೊಲ್ ಖಿಲಫಾ, ಜಲಾಲುದ್ದೀನ್ ಸುಯೂತಿ, ಪುಟ–28–29, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1999)

ಹರ್ಝ್‌ರತ್ ಆಯಿಶ(ರ) ಹೇಳುತ್ತಾರೆ: ರಾತ್ರಿ ಸಮಯದಲ್ಲಿ ಹರ್ಝ್‌ರತ್ ಪೈಗಂಬರರನ್ನು(ಸ) ಬೈತುಲ್‌ಮಖ್‌ದಸ್‌ನ ಕಡೆಗೆ ಕೊಂಡುಹೋಗಲಾದಾಗ, ಬೆಳಿಗ್ಗೆ ಜನರು ಈ ಕುರಿತು ಮಾತನಾಡಲು ಶುರುಮಾಡಿದರು. ಹರ್ಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದ್ದ ಮತ್ತು ಅವರನ್ನು ಸತ್ಯಪಡಿಸಿದ್ದವರಲ್ಲಿ ಕೆಲವು ದುರ್ಬಲ ವಿಶ್ವಾಸಿಗಳು ಹಿಂದಕ್ಕೆ ಸರಿದರು. ಮುಶ್ರಿಕರಲ್ಲಿ ಕೆಲವು ಜನರು ಹರ್ಝ್‌ರತ್ ಅಬೂಬಕರ್‌ರ(ರ) ಬಳಿಗೆ ಓಡುತ್ತಾ ಹೋದರು ಮತ್ತು ಹೀಗೆ ಹೇಳಿದರು: ನಿಮಗೆ ನಿಮ್ಮ ಸಂಗಡಿಗನ ಕುರಿತು ಏನಾದರೂ ಗೊತ್ತಾಗಿದೆಯೇ? ಅವರನ್ನು ರಾತ್ರಿ ಸಮಯದಲ್ಲಿ ಬೈತುಲ್‌ಮಖ್‌ದಸಿಗೆ ಕೊಂಡುಹೋಗಲಾಯಿತು ಎಂದು ಅವರು ವಾದಿಸುತ್ತಿದ್ದಾರೆ. ಸತ್ಯವಾಗಿಯೂ ಅವರು ಹೀಗೆ ಹೇಳಿರುವರೇ? ಎಂದು ಹರ್ಝ್‌ರತ್ ಅಬೂಬಕರ್(ರ) ಪ್ರಶ್ನಿಸಿದರು. ಹೌದೆಂದು ಜನರು ಹೇಳಿದರು. ಆಗ ಹರ್ಝ್‌ರತ್ ಅಬೂಬಕರ್(ರ) ಹೇಳಿದರು: ಅವರು ಹಾಗೆ ಹೇಳಿದ್ದರೆ, ಅವರು ಖಂಡಿತವಾಗಿಯೂ ಸತ್ಯವನ್ನು ಹೇಳಿರುವರು. ಜನರು ಕೇಳಿದರು: ರಾತ್ರಿ ಸಮಯದಲ್ಲಿ ಬೈತುಲ್‌ಮಖ್‌ದಸಿಗೆ ಹೋಗಿ ಬೆಳಿಗ್ಗೆ ಆಗುವಷ್ಟರಲ್ಲಿ ಮರಳಿ ಕೂಡ ಬಂದರು ಎಂಬುದನ್ನು ನೀವು ಸತ್ಯಪಡಿಸುತ್ತೀರೋ? ಏಕೆಂದರೆ ಬೈತುಲ್‌ಮಖ್‌ದಿಸ್ ಮಕ್ಕಾದಿಂದ ಸುಮಾರು 1300 ಕಿಲೊ ದೂರದಲ್ಲಿದೆ. ಹರ್ಝ್‌ರತ್ ಅಬೂಬಕರ್(ರ) ಹೇಳಿದರು: ಹೌದು. ಇದಕ್ಕಿಂತ ಅಸಂಭವನೀಯ ಸಂಗತಿಯನ್ನು ಕೂಡ ನಾನು ಸತ್ಯಪಡಿಸುವೆನು. ಹಗಲು ರಾತ್ರಿ ಅವರಿಗೆ ಅವತೀರ್ಣವಾಗುತ್ತಿರುವ ದಿವ್ಯಸಂದೇಶಗಳನ್ನು ನಾನು ನಂಬುತ್ತೇನೆ. ಹೀಗೆ ಈ ಕಾರಣದಿಂದ ಅವರಿಗೆ ಸಿದ್ದೀಖ್ ಎಂಬ ಹೆಸರು ಬಂತು. ಅವರನ್ನು ಸಿದ್ದೀಖ್ ಎಂದು ಕರೆಯಲಾಯಿತು. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಕಿತಾಬ್ ಮಾರಿಫತಿಸ್ಸಹಾಬ, ಸಂಪುಟ–3, ಪುಟ–81, ಹದೀಸ್–4458, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಅತ್ಲಾಸ್ ಸೀರತ್ ನಬವಿ, ಪುಟ–136)

ಹರ್ಝ್‌ರತ್ ಅಬೂಹುರೈರ(ರ) ಸ್ವತಂತ್ರಗೊಳಿಸಿದ ಗುಲಾಮನಾದ ಅಬೂವಹಬ್ ಹೇಳುತ್ತಾರೆ: ಹರ್ಝ್‌ರತ್ ಪೈಗಂಬರ್(ಸ) ಹೇಳಿದರು: ನನ್ನನ್ನು ರಾತ್ರಿ ಸಮಯದಲ್ಲಿ ಕೊಂಡುಹೋಗಲಾದಾಗ ನಾನು ಜಿಬ್ರೀಲ್‌ನೊಡನೆ ಹೀಗೆ ಹೇಳಿದೆ: ನನ್ನ ಸಮುದಾಯ ನನ್ನನ್ನು ಸತ್ಯಪಡಿಸಲಾರರು. ಎಂದರೆ, ನನ್ನ ಮಾತನ್ನು ಸತ್ಯವೆಂದು ನಂಬಲಾರರು. ಆಗ ಜಿಬ್ರೀಲ್ ಹೇಳಿದರು: **ಯುಸದ್ದಿಖುಕ ಅಬೂಬಕರ್ ವಹುವಸ್ಸಿದ್ದೀಖ್**. ನಿಮ್ಮನ್ನು ಅಬೂಬಕರ್ ಸತ್ಯಪಡಿಸುವರು ಮತ್ತು ಅವರು ಸಿದ್ದೀಖ್ ಆಗಿರುವರು. ಈ ವರದಿಯನ್ನು ತಬ್‌ಖಾತುಲ್ ಕುಬ್ರದಲ್ಲಿ ಬರೆಯಲಾಗಿದೆ. (ಅತ್ತಬ್ಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–127, ದಾರುಲ್ ಕುತುಬ್ ಇಲ್‌ಮಿಯ 1990)

ಹರ್ಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇಸ್ರಾದ ಘಟನೆ ನಡೆದಾಗ ಜನರು ಓಡುತ್ತಾ ಹರ್ಝ್‌ರತ್ ಅಬೂಬಕರರ(ರ) ಬಳಿಗೆ ಹೋದರು ಮತ್ತು ಹೀಗೆ ಹೇಳಿದರು: ನಿಮ್ಮ ಸಂಗಡಿಗನು ಏನು ಹೇಳುತ್ತಿದ್ದಾರೆ ಎಂದು ನಿಮಗೆ ಏನಾದರೂ ಗೊತ್ತಾಗಿದೆಯೇ? ಏನು ಹೇಳುತ್ತಿದ್ದಾರೆ ಎಂದು ಹರ್ಝ್‌ರತ್ ಅಬೂಬಕರ್(ರ) ಕೇಳಿದರು. ಅವರು ರಾತ್ರಿ ಸಮಯದಲ್ಲಿ ಬೈತುಲ್‌ಮಖ್‌ದಸಿಗೆ ಹೋಗಿ ಬಂದಿರುವರು ಎಂದು ಹೇಳುತ್ತಿದ್ದಾರೆ ಎಂದು ಜನರು ಹೇಳಿದರು. ಹರ್ಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮಿಅ್‌ರಾಜಿನ ಘಟನೆ ಅದೇ ವೇಳೆ ಹೇಳಿದ್ದರೆ, ಇಸ್ರಾ ಮತ್ತು ಮಿಅ್‌ರಾಜ್ ಎಂಬುದು ಒಂದೇ ಘಟನೆ ಆಗಿದ್ದರೆ, ಸತ್ಯನಿಷೇಧಿಗಳು ಈ ಯಾತ್ರೆಯ ಭಾಗವೆಂದು ಭಾವಿಸಲಾಗುವ ಮಿಅ್‌ರಾಜ್ ಯಾತ್ರೆಯ ಕುರಿತು ಹೆಚ್ಚು ಗದ್ದಲ ಮಾಡುತ್ತಿದ್ದರು. ಆದರೆ ರಾತ್ರಿ ಸಮಯದಲ್ಲಿ ಬೈತುಲ್ ಮಖ್‌ದಸಿಗೆ ಹೋದ ಬಗ್ಗೆ ಹರ್ಝ್‌ರತ್ ಪೈಗಂಬರ್(ಸ) ಹೇಳಿದ್ದರು. ಹರ್ಝ್‌ರತ್ ಪೈಗಂಬರರ(ಸ) ಮಾತನ್ನು ಹರ್ಝ್‌ರತ್ ಅಬೂಬಕರ್(ರ) ಸತ್ಯಪಡಿಸಿದಾಗ, ಬುದ್ಧಿಗೆ ವಿರುದ್ಧವಾದ ಈ ಮಾತನ್ನು ಕೂಡ ನೀವು ಅಂಗೀಕರಿಸುತ್ತೀರಾ? ಎಂದು ಜನರು ಅವರೊಡನೆ ಕೇಳಿದರು. ಹರ್ಝ್‌ರತ್ ಅಬೂಬಕರ್(ರ) ಹೇಳಿದರು: ಬೆಳಿಗ್ಗೆ ರಾತ್ರಿ ಅವರಿಗೆ ದಿವ್ಯವಾಣಿಗಳು ಅವತೀರ್ಣವಾಗುತ್ತಿವೆ ಎಂಬ ಮಾತನ್ನು ಕೂಡ ನಾನು ನಂಬುತ್ತೇನೆ.
(ತಫಸೀರೆ ಕಬೀರ್, ಸಂಪುಟ–4, ಪುಟ–286)

ಹರ್ಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹರ್ಝ್‌ರತ್ ಅಬೂಬಕರ್‌ರಿಗೆ(ರ) ಹರ್ಝ್‌ರತ್ ಪೈಗಂಬರ್(ಸ) ಸಿದ್ದೀಖ್ ಎಂಬ ಬಿರುದುನಾಮ ನೀಡಿದಾಗ, ಅವರಲ್ಲಿ ಎಂತೆಲ್ಲ ಶ್ರೇಷ್ಠತೆಗಳಿದ್ದುವು ಎಂದು ಅಲ್ಲಾಹನೇ ಬಲ್ಲನು. ಹರ್ಝ್‌ರತ್ ಅಬೂಬಕರರ(ರ) ಶ್ರೇಷ್ಠತೆ ಅವರ ಹೃದಯದಲ್ಲಿರುವ ಸಂಗತಿಯ ಕಾರಣದಿಂದಾಗಿದೆ ಎಂದು ಹರ್ಝ್‌ರತ್ ಪೈಗಂಬರ್(ಸ) ಸಹ ಹೇಳಿದ್ದರು. ಗಮನವಿಟ್ಟು ನೋಡುವುದಾದರೆ, ಹರ್ಝ್‌ರತ್ ಅಬೂಬಕರ್(ರ) ತೋರಿಸಿದ ಸತ್ಯಸಂಧತೆಯ ಉದಾಹರಣೆ ಲಭಿಸುವುದು ಕಷ್ಟ. ಸತ್ಯವೇನೆಂದರೆ, ಪ್ರತಿ ಕಾಲಘಟ್ಟದಲ್ಲೂ ಸಿದ್ದೀಖಿನ ಪರಿಪೂರ್ಣತೆಯನ್ನು ಗಳಿಸಲು ಪ್ರಯತ್ನಿಸುವ ಒಬ್ಬ ವ್ಯಕ್ತಿಗೆ ಆವಶ್ಯಕವಾದುದೇನೆಂದರೆ, ಅಬೂಬಕರರ(ರ) ಸ್ವಭಾವಗುಣ ಮತ್ತು ಸಹಜ ಪ್ರಕೃತಿಯನ್ನು ತನ್ನೊಳಗೆ ಸಾಧ್ಯವಾದಷ್ಟು ಉಂಟುಮಾಡಲು ಕಠಿಣ ಪರಿಶ್ರಮ ಮಾಡಬೇಕು. ಅನಂತರ ಸಾಧ್ಯವಾದಷ್ಟು ದುಆಗಳನ್ನು ಮಾಡಿ ಅದಕ್ಕಾಗಿ ಪ್ರಯತ್ನಿಸಬೇಕು. ಎಲ್ಲಿಯ ವರೆಗೆ ಅಬೂಬಕರರ(ರ) ಸಹಜಗುಣದ ನೆರಳನ್ನು ತನ್ನ ಮೇಲೆ ಹಾಕುವುದಿಲ್ಲವೋ ಎಲ್ಲಿಯ ವರೆಗೆ ಅದೇ ಬಣ್ಣದಲ್ಲಿ ವರ್ಣರಂಜಿತನಾಗುವುದಿಲ್ಲವೋ ಅಲ್ಲಿಯ ವರೆಗೆ ಸಿದ್ದೀಖಿ ಗುಣದ ಪರಿಪೂರ್ಣತೆ ಮತ್ತು ಶ್ರೇಷ್ಠತೆ ಲಭಿಸಲು ಸಾಧ್ಯವಲ್ಲ. (ಮಲ್‌ಫೂಝಾತ್ ಸಂಪುಟ–1, ಪುಟ–372–373)

**"ಅತೀಖ್"** ಮತ್ತು **"ಸಿದ್ದೀಖ್"** ಎಂದಲ್ಲದೇ ಹರ್ಝ್‌ರತ್ ಅಬೂಬಕರ್‌ರಿಗೆ(ರ) ಇತರ ಬಿರುದುನಾಮಗಳು ಸಹ ಇವೆ. ಉದಾಹರಣೆಗೆ, **"ಖಲೀಫತುರ್‌ರಸೂಲುಲ್ಲಾಹ್"**. ಒಂದು ವರದಿಯಲ್ಲಿ ಹೀಗೆ ಪ್ರಸ್ತಾಪ ಬಂದಿದೆ: ಒಬ್ಬ ವ್ಯಕ್ತಿ ಹರ್ಝ್‌ರತ್ ಅಬೂಬಕರ್‌ರನ್ನು ಯಾ ಖಲೀಫತುಲ್ಲಾಹ್ ಎಂದು ಕರೆದರು. ಹರ್ಝ್‌ರತ್ ಅಬೂಬಕರ್(ರ) ಹೇಳಿದರು: ಖಲೀಫತುಲ್ಲಾಹ್ ಅಲ್ಲ, ಖಲೀಫತುರ್‌ರಸೂಲುಲ್ಲಾಹ್. ಎಂದರೆ, ನಾನು ಅಲ್ಲಾಹನ ಪ್ರವಾದಿಯ ಪ್ರತಿನಿಧಿಯಾಗಿದ್ದೇನೆ. ನಾನು ಅದರಲ್ಲೇ ಸಂತೃಪ್ತನಾಗಿದ್ದೇನೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3,ಪುಟ–137, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಸಹೀಹ್ ಬುಖಾರಿಯ ವ್ಯಾಖ್ಯಾನಗಾರರಾದ ಅಲ್ಲಾಮ ಬದ್ರುದ್ದೀನ್ ಐನಿ ಹೇಳುತ್ತಾರೆ: ಹರ್ಝ್‌ರತ್ ಅಬೂಬಕರ್‌ರಿಗೆ(ರ) ಖಲೀಫತುರ್‌ರಸೂಲ್ ಎಂಬ ಬಿರುದುನಾಮವಿತ್ತು ಎಂಬುದರಲ್ಲಿ ಚರಿತ್ರೆಗಾರರು ಒಮ್ಮತಾಭಿಪ್ರಾಯವನ್ನು ಹೊಂದಿರುವರು. (ಉಮ್ದತುಲ್ ಖಾರಿ, ಕಿತಾಬ್ ಬದಅಲ್ ಖಲ್‌ಖ್, ಸಂಪುಟ–16, ಪುಟ–260, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2003)

ಆದರೆ ಹರ್ಝ್‌ರತ್ ಅಬೂಬಕರ್‌ರಿಗೆ(ರ) ಈ ಬಿರುದು ಹರ್ಝ್‌ರತ್ ಪೈಗಂಬರರ(ಸ) ನಿಧನದ ನಂತರ ಅವರು ಖಲೀಫರಾದ ಕಾರಣದಿಂದ ನೀಡಲಾಗಿತ್ತು. ಆದ್ದರಿಂದ ಹರ್ಝ್‌ರತ್ ಪೈಗಂಬರರ(ಸ) ಕಾಲದಲ್ಲಿ ಅವರಿಗೆ ಈ ಬಿರುದು ನಾಮವಿತ್ತು ಎಂದು ಹೇಳುವಂತಿಲ್ಲ. ಇದು ನಂತರದ ಸಂಗತಿಯಾಗಿದೆ. ಜನರು ಹಾಗೆ ಕರೆದರು ಅಥವಾ ಅವರು ಸ್ವತಃ ಹಾಗೆ ಹೇಳುವುದನ್ನು ಇಷ್ಟಪಟ್ಟರು ಎಂದು ಹೇಳಬಹುದು.

**"ಅವ್ವಾಹುನ್"** ಎಂಬ ಒಂದು ಬಿರುದುನಾಮ ಸಹ ಅವರಿಗೆ ಇತ್ತು. ಅವ್ವಾಹುನ್ ಮುನೀಬ್. ಎಂದರೆ ಬಹಳ ತಾಳ್ಮೆಯುಳ್ಳವರು, ಸೌಮ್ಯಹೃದಯಿ ಮತ್ತು ಬಾಗುವವರು. (ಅತ್ತಬಖಾತುಲ್ ಕುಬ್ರ ಸಂಪುಟ–3, ಪುಟ–127, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ತಬ್‌ಖಾತಕುಲ್ ಕುಬ್ರದಲ್ಲಿ ವರದಿಗಾರ ಹೇಳುತ್ತಾರೆ – ಹರ್ಝ್‌ರತ್ ಅಲಿ(ರ) ಪ್ರವಚನಪೀಠದಲ್ಲಿ ಹೀಗೆ ಹೇಳುತ್ತಿರುವುದಾಗಿ ನಾನು ಆಲಿಸಿದೆ: ಗಮನವಿಟ್ಟು ಕೇಳಿರಿ, ಹರ್ಝ್‌ರತ್ ಅಬೂಬಕರ್(ರ) ಬಹಳ ಹೆಚ್ಚು ತಾಳ್ಮೆಯುಳ್ಳವರು, ಸೌಮ್ಯಹೃದಯಿ ಮತ್ತು ಬಾಗುವವರಾಗಿದ್ದರು. ಗಮನವಿಟ್ಟು ಕೇಳಿರಿ, ಹರ್ಝ್‌ರತ್ ಉಮರ್‌ರಿಗೆ(ರ) ಅಲ್ಲಾಹನು ಒಳಿತನ್ನು ದಯಪಾಲಿಸಿದನು. ಆದ್ದರಿಂದ ಅವರು ಇತರರಿಗೆ ಒಳಿತನ್ನು ತಲುಪಿಸುವವರಾದರು. (ಅತ್ತಬಖತುಲ್ ಕುಬ್ರ, ಸಂಪುಟ–3, ಪುಟ–127, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, 2012)

ಅವರ ಮತ್ತೊಂದು ಬಿರುದುನಾಮ **"ಅಮೀರುಶ್ಶಾಕಿರೀನ್"** ಎಂದಾಗಿದೆ. ಎಂದರೆ ಕೃತಜ್ಞತೆ ಮಾಡುವವರ ಸರದಾರ. ಹರ್ಝ್‌ರತ್ ಅಬೂಬಕರ್(ರ) ಬಹಳ ಹೆಚ್ಚಾಗಿ ಕೃತಜ್ಞತೆ ಅರ್ಪಿಸುತ್ತಿದ್ದ ಕಾರಣದಿಂದ ಅವರನ್ನು ಹಾಗೆ ಕರೆಯಲಾಗುತ್ತಿತ್ತು. ಹರ್ಝ್‌ರತ್ ಅಬೂಬಕರ್‌ರನ್ನು(ರ) ಅಮೀರುಶ್ಶಾಕಿರೀನ್ ಎಂಬ ಬಿರುದುನಾಮದಿಂದ ಕರೆಯಲಾಗುತ್ತಿತ್ತು ಎಂದು ಉಮ್ದತುಲ್ ಖಾರಿಯಲ್ಲಿ ಬರೆಯಲಾಗಿದೆ.
(ಉಮ್ದತುಲ್ ಖಾರಿ, ಕಿತಾಬ್ ಬದಅಲ್ ಖಲ್ಖ್, ಸಂಪುಟ–16, ಪುಟ–260, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 2003)

**"ಸಾನಿಯಸ್‌ನೈನ್"** ಎಂಬುದು ಸಹ ಒಂದು ಬಿರುದುನಾಮವಾಗಿತ್ತು. ಈ ಬಿರುದುನಾಮದಿಂದ ಅಲ್ಲಾಹನು ಅವರನ್ನು ಕರೆದಿದ್ದನು. ಮದೀನದ ಕಡೆಗೆ ವಲಸೆ ಹೋದ ಘಟನೆಯ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ: **ಅಲಾ ತನ್‌ಸುರೂಹು ಫಖದ್ ನಸರಹುಲ್ಲಾಹು ಇದ್ ಅಖ್‌ರಜಹುಲ್ಲದೀನ ಕಫರೂ ಸಾನಿಯಸ್‌ನೈನಿ ಇದ್‌ಹುಮಾ ಫಿಲ್‌ಗ್ಹಾರಿ ಇದ್ ಯಖೂಲು ಲಿಸಾಹಿಬಿಹೀ ಲಾ ತಹ್‌ಝನ್ ಇನ್ನಲ್ಲಾಹ ಮಅನಾ. ಫಅನ್‌ಝಲಲ್ಲಾಹು ಸಕೀನತುಹೂ ಅಲೈಹಿ.** ಎಂದರೆ, ನೀವು ಈ ಪ್ರವಾದಿಗೆ ನೆರವು ನೀಡದಿದ್ದರೆ. ತಿಳಿದುಕೊಳ್ಳಿರಿ, ಅವಿಶ್ವಾಸಿಗಳು ಅವರನ್ನು ಊರಿನಿಂದ ಬಹಿಷ್ಕರಿಸಿದಾಗ ದಿಟವಾಗಿಯೂ ಅಲ್ಲಾಹನು ಅವರಿಗೆ ನೆರವಿತ್ತಿದ್ದನು –ಅವರು ಇಬ್ಬರಲ್ಲಿ ಒಬ್ಬರಾಗಿದ್ದರು. ಅವರೀರ್ವರೂ ಆ ಗುಹೆಯಲ್ಲಿದ್ದಾಗ; 'ನೀನು ವ್ಯಥೆಪಡಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ' ಎಂದು ಅವರು ತನ್ನ ಸಂಗಡಿಗನೊಡನೆ ಹೇಳಿದ್ದಾಗ. ಆ ಸಂದರ್ಭದಲ್ಲಿ ಅಲ್ಲಾಹನು ತನ್ನ ಕಡೆಯಿಂದಿರುವ ಸಾಂತ್ವನವನ್ನು ಅವರಿಗೆ ಇಳಿಸಿಕೊಟ್ಟನು.

ಹರ್ಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ಕಷ್ಟದಾಯಕ ಸಮಯದಲ್ಲಿ ಮತ್ತು ಪ್ರಯಾಸಕರ ಸ್ಥಿತಿಯಲ್ಲಿ ತನ್ನ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹರ್ಝ್‌ರತ್ ಅಬೂಬಕರ್‌ರ(ರ) ಮುಖಾಂತರ ಸಾಂತ್ವನ ನೀಡಿದನು. **ಅಸ್ಸಿದ್ದೀಖ್** ಎಂಬ ಹೆಸರಿನಿಂದ ಮತ್ತು ಇಹಪರಲೋಕದ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಾಮೀಪ್ಯದಿಂದ ಹರ್ಝ್‌ರತ್ ಅಬೂಬಕರ್‌ರನ್ನು(ರ) ಅಲ್ಲಾಹನು ವಿಶಿಷ್ಟಗೊಳಿಸಿದನು ಹಾಗೂ ಅವರನ್ನು **ಸಾನಿಯಸ್‌ನೈನ್** ಎಂದರೆ ಇಬ್ಬರಲ್ಲಿ ಒಬ್ಬರು ಎಂಬ ಹೆಮ್ಮೆಯ ವಸ್ತ್ರದಿಂದ ಅನುಗ್ರಹಿಸಿದನು. ಅವರನ್ನು ತನ್ನ ವರಿಷ್ಠ ಮತ್ತು ವಿಶಿಷ್ಟ ದಾಸರನ್ನಾಗಿ ಮಾಡಿದನು. ಬೇರೆ ಯಾರನ್ನಾದರೂ ಸಾನಿಯಸ್‌ನೈನ್ ಎಂದು ಕರೆದಿರುವುದಾಗಿ, ಇಹಪರ ಲೋಕದ ಪ್ರವಾದಿಯ ಸಂಗಡಿಗನೆಂದು ನಾಮಕರಣ ಮಾಡಿದ್ದಾಗಿ, **ಇನ್ನಲ್ಲಾಹ ಮಅನಾ**, ಎಂದರೆ ಅಲ್ಲಾಹನು ನಿಮ್ಮಿಬ್ಬರ ಜೊತೆಗಿದ್ದಾನೆ ಎಂಬ ಶ್ರೇಷ್ಠತೆಯನ್ನು ನೀಡಿರುವುದಾಗಿ,

ಇಬ್ಬರು ಸಹಾಯಕರಲ್ಲಿ ಒಬ್ಬರೆಂದು ಹೇಳಿರುವುದಾಗಿ ನಿಮಗೆ ಗೊತ್ತಿದೆಯೇ? ಈ ರೀತಿಯಾಗಿ ಬೇರೆ ಯಾರನ್ನಾದರೂ ಪವಿತ್ರ ಖುರ್‌ಆನ್ ಪರಿಚಯಪಡಿಸಿದ್ದಾಗಿ ಮತ್ತು ಬೇರೆ ಯಾರದ್ದಾದರೂ ರಹಸ್ಯ ಸ್ಥಿತಿಗಳಿಂದ ಸಂಶಯಗಳ ದಟ್ಟತೆಯನ್ನು ದೂರ ಮಾಡಿದ್ದಾಗಿ ನಿಮಗೆ ಗೊತ್ತಿದೆಯೇ? ಅಲ್ಲಾಹನ ಸನ್ನಿಧಿಯಲ್ಲಿ ಸ್ವೀಕಾರಾರ್ಹ ವ್ಯಕ್ತಿಯೆಂದು ಸಂಶಯಕರವಾದ ಮಾತಿನಿಂದ ಅಲ್ಲ, ಬದಲಾಗಿ ಪವಿತ್ರ ಖುರ್‌ಆನಿನ ಸ್ಪಷ್ಟವಾದ ವಚನದಿಂದ ಸಾಬೀತಾದ ಬೇರೆ ಯಾರಾದರೂ ಇದ್ದಾರೆಯೇ? ಅಲ್ಲಾಹನಾಣೆ, ಈ ರೀತಿಯ ಸ್ಪಷ್ಟವಾದ ಪ್ರಸ್ತಾಪ ಹಝ್ರತ್ ಅಬೂಬಕರ್ ಸಿದ್ದೀಖ್‌ರಿಗೆ ಮಾತ್ರ ಲಭಿಸಿದ ವಿಶೇಷತೆಯಾಗಿದೆ. ಕಅ್‌ಬ ಭವನದ ಪ್ರಭುವಾದ ಅಲ್ಲಾಹನ ಗ್ರಂಥದಲ್ಲಿ ಬೇರೆ ಯಾರ ಬಗ್ಗೆಯೂ ಹೀಗೆ ಪ್ರಸ್ತಾಪಿಸಿರುವುದಾಗಿ ನಾನು ಕಂಡಿಲ್ಲ. ನಿಮಗೆ ನನ್ನ ಈ ಮಾತಿನ ಬಗ್ಗೆ ಸಂಶಯವಿದ್ದರೆ, ನಾನು ಸತ್ಯವನ್ನು ಹೇಳುತ್ತಿಲ್ಲವೆಂದು ನಿಮಗೆ ಅನಿಸುತ್ತಿದ್ದರೆ, ಪವಿತ್ರ ಖುರ್‌ಆನಿನಿಂದ ಬೇರೆ ಉದಾಹರಣೆಯನ್ನು ತೋರಿಸು. ನೀನು ಸತ್ಯವಂತನೆಂದಾದರೆ, ಪವಿತ್ರ ಖುರ್‌ಆನಿನಲ್ಲಿ ಬೇರೆ ಯಾವನಾದರೂ ವ್ಯಕ್ತಿಯ ಬಗ್ಗೆ ಇಷ್ಟು ಸ್ಪಷ್ಟವಾಗಿ ಹೇಳಿರುವುದಾಗಿ ತೋರಿಸಿಕೊಡಿರಿ. (ಸಿರ್‍ರುಲ್ ಖಿಲಾಫ, ಉರ್ದು ಅನುವಾದ ಪುಟ–60,63–64)

ಅವರ ಒಂದು ಬಿರುದುನಾಮ **'ಸಾಹಿಬುರ್‍ರಸೂಲ್'** ಎಂದೂ ಇದೆ. ಅದರ ಅರ್ಥ ಪ್ರವಾದಿಯ ಸಂಗಡಿಗ ಎಂದಾಗಿದೆ. ಒಂದು ಸಂಘದೊಡನೆ ಹಝ್ರತ್ ಅಬೂಬಕರ್(ರ) ಕೇಳಿದರು: ನಿಮ್ಮಲ್ಲಿ ಯಾರು ಸೂರಃ ತೌಬಃ ಓದುವಿರಿ. ನಾನು ಓದುತ್ತೇನೆ ಎಂದು ಒಬ್ಬ ವ್ಯಕ್ತಿ ಹೇಳಿದನು. ಅದರಲ್ಲಿ **ಇದ್ ಯಖೂಲು ಲಿಸಾಹಿಬಿಹೀ ಲಾ ತಹ್‌ಝನ್** ಎಂಬ ಈ ಆಯತ್ ಓದಲಾದಾಗ ಅವರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಅಲ್ಲಾಹನಾಣೆ, ನಾನೇ ಹಝ್ರತ್ ಪೈಗಂಬರರ(ಸ) ಸಂಗಡಿನಾಗಿದ್ದೆ. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–56, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಅಬೂಬಕರರ(ರ) ಒಂದು ಬಿರುದುನಾಮ **ಆದಮೇ ಸಾನಿ** ಎಂದಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ತನ್ನ ಒಂದು ಪತ್ರದಲ್ಲಿ ಅವರು ಹೀಗೆ ಬರೆಯುತ್ತಾರೆ: ಅಬೂಬಕರ್(ರ) ಇಸ್ಲಾಮಿನ ಆದಮೇ ಸಾನಿ ಆಗಿರುವರು. ಎಂದರೆ ಎರಡನೇ ಆದಂ. ಅದೇ ರೀತಿಯಲ್ಲಿ ಹಝ್ರತ್ ಉಮರ್ ಫಾರೂಖ್(ರ) ಮತ್ತು ಹಝ್ರತ್ ಉಸ್ಮಾನ್(ರ) ಧರ್ಮದ ಸತ್ಯಸಂಧರಾದ ಸಂರಕ್ಷಕರಾಗಿರದೇ ಇರುತ್ತಿದ್ದರೆ, ಇಂದು ಪವಿತ್ರ ಖುರ್‌ಆನಿನ ಯಾವುದಾದರೂ ಒಂದು ವಚನವನ್ನು ಕೂಡ ಅಲ್ಲಾಹನ ವತಿಯಿಂದ ಅವತೀರ್ಣವಾದದ್ದು ಎಂದು ಹೇಳಲು ಸಾಧ್ಯವಾಗುತ್ತಿರಲಿಲ್ಲ. (ಮಕ್ತೂಬಾತೆ ಅಹ್ಮದ್, ಸಂಪುಟ–2, ಪುಟ–151, ಮಕ್ತೂಬ್ ಸಂಖ್ಯೆ–2)

**ಸಿರ್‍ರುಲ್‌ಖಿಲಾಫ** ಎಂಬ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳುತ್ತಾರೆ: ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ರ) ಇಸ್ಲಾಮಿಗಾಗಿ ಎರಡನೆ ಆದಂ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಕಾಶ ಕಿರಣಗಳ ಮೊದಲ ಪ್ರಕಟಣೆಯಾಗಿದ್ದರು.

ಅವರ ಒಂದು ಬಿರುದು **'ಖಲೀಲುರ್‍ರಸೂಲ್'** ಎಂದೂ ಇದೆ. ಚರಿತ್ರೆಯ ಗ್ರಂಥಗಳಲ್ಲಿ **ಖಲೀಲುರ್‍ರಸೂಲ್'** ಎಂಬ ಬಿರುದುನಾಮ ಹಝ್ರತ್ ಅಬೂಬಕರ್‌ರಿಗೆ(ರ) ಇತ್ತು ಎಂದು ಪ್ರಸ್ತಾಪಿಸಲಾಗಿದೆ. ಅದರ ಪುರಾವೆ ಹದೀಸಿನ ಗ್ರಂಥಗಳಲ್ಲಿ ಇದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಯಾರನ್ನಾದರೂ **'ಖಲೀಲ್'** ಎಂದರೆ ನಿಕಟ ಸ್ನೇಹಿತನನ್ನಾಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನು ಮಾಡುತ್ತಿದ್ದೆ. ಸಹೀಹ್ ಬುಖಾರಿಯಲ್ಲಿ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಮರಣಾಸನ್ನರಾದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಜನರಲ್ಲಿ ಯಾರನ್ನಾದರೂ **'ಖಲೀಲ್'** ಎಂದರೆ ನಿಕಟ ಸ್ನೇಹಿತನನ್ನಾಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನು ಮಾಡುತ್ತಿದ್ದೆ. ಆದರೆ ಇಸ್ಲಾಮಿನ ಗೆಳೆತನ ಅತ್ಯಂತ ಶ್ರೇಷ್ಠತಮವಾದುದಾಗಿದೆ. ಈ ಮಸೀದಿಯ ಎಲ್ಲ ಕಿಟಕಿಗಳನ್ನು ಮುಚ್ಚಿರಿ, ಅಬೂಬಕರ್‌ರ ಮನೆಯ ಕಡೆಗೆ ಇರುವ ಕಿಟಿಕಿಯನ್ನು ಹೊರತುಪಡಿಸಿ. (ಸಹೀಹ್ ಬುಖಾರಿ, ಕಿತಾಬುಸ್ಸಲಾತ್, ಹದೀಸ್–467)

ಈ ಬಗ್ಗೆ ರಿಸರ್ಚ್ ಸೆಲ್ ಒಂದು ಪ್ರಶ್ನೆಯನ್ನು ಕೇಳಿದೆ. ಈ ಸಂಗತಿಯನ್ನು ಹಝ್ರತ್ ಮಸೀಹ್ ಮೌಊದ್(ಅ) ಸ್ವತಃ ಸ್ಪಷ್ಟಪಡಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಕಟ ಸ್ನೇಹಿತ ಮತ್ತು ಗೆಳೆತನ ಎಂಬುದು ನರಗಳ ಮತ್ತು ರೋಮಗಳ ಒಳನುಗ್ಗುವಂತಹದ್ದಾಗಿದೆ. ಅದಂತು ಅಲ್ಲಾಹನಿಗೆ ಮತ್ತು ಅಲ್ಲಾಹನೊಂದಿಗೆ ಮಾತ್ರ ಸಾಧ್ಯ ಮತ್ತದು ಅವನದ್ದೇ ವೈಶಿಷ್ಟ್ಯವಾಗಿದೆ. ಇತರರೊಂದಿಗೆ ಕೇವಲ ಸಾಹೋದರ್ಯ ಸಂಬಂಧ ಮಾತ್ರ ಸಾಧ್ಯ. ಖುಲ್ಲತ್ ಎಂಬುದು ಅಥವಾ ಉನ್ನತ ಮಟ್ಟದ ಗೆಳೆತನ ಎಂಬುದು ನರಗಳ ಮತ್ತು ರೋಮಗಳ ಹಾಸುಹೊಕ್ಕಿನಂತಿರುತ್ತದೆ. ಯೂಸುಫಿನೊಂದಿಗೆ ಇರುವ ಪ್ರೇಮ ಝುಲೇಖರ ಒಳಗೆ ನುಗ್ಗಿತ್ತು ಎಂದು ಹೇಳುವ ಹಾಗೆ. ಹಝ್ರತ್ ಪೈಗಂಬರರ(ಸ) ಈ ಪರಿಶುದ್ಧ ವಾಕ್ಯದ ಅರ್ಥ, ಅಲ್ಲಾಹನ ಪ್ರೀತಿಯಲ್ಲಿ ಬೇರೆ ಭಾಗೀದಾರರು ಇರಲು ಸಾಧ್ಯವಿಲ್ಲ. ಲೋಕದಲ್ಲಿ ನಾನು ಯಾರನ್ನಾದರೂ ಸ್ನೇಹಿತನನ್ನಾಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನು ಮಾಡುತ್ತಿದ್ದೆ ಎಂದಾಗಿದೆ. (ಮಲ್‌ಫೂಝಾತ್, ಸಂಪುಟ–8, ಪುಟ–277)

ಅಲ್ಲಾಹನಿಗೆ ಒಂದು ಪದವಿಯಿದೆ. ಅಂತಹ ಪದವಿ ಬೇರೆ ಯಾರಿಗೂ ಲಭಿಸಲು ಸಾಧ್ಯವಿಲ್ಲ. ಲೋಕದ ಜನರೊಂದಿಗೆ ಅಲ್ಲಾಹನೊಂದಿಗೆ ಇರಿಸುವಂತಹ ಗೆಳೆತನವನ್ನು ಬೆಳೆಸುವುದು ಒಬ್ಬ ಪ್ರವಾದಿಗೆ ವಿಶೇಷವಾಗಿ ಹಝ್ರತ್ ಪೈಗಂಬರ್‌ರಿಗೆ(ಸ) ಸಾಧ್ಯವಿಲ್ಲ. ಹಾಗೇನಾದರೂ ಸಾಧ್ಯವಿದ್ದರೆ, ಅಂತಹ ಗೆಳೆತನದ ಪದವಿಗೆ ಅತ್ಯಂತ ಹೆಚ್ಚು ಹಕ್ಕುದಾರ ಅಬೂಬಕರ್ ಆಗುತ್ತಿದ್ದರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದರು.

ಅವರ ಉಪನಾಮವಾದ ಅಬೂಬಕರ್ ಎಂಬುದರ ಕುರಿತು ಅನೇಕ ಕಾರಣಗಳು ಹೇಳಲಾಗುತ್ತವೆ. ಉದಾಹರಣೆಗೆ, ಬಕ್ರ್ ಎಂದು ಮಧ್ಯಮ ಪ್ರಾಯದ ಒಂಟೆಯನ್ನು ಕರೆಯಲಾಗುತ್ತದೆ. ಅವರಿಗೆ ಒಂಟೆಗಳ ಪರಿಪಾಲನೆ ಮತ್ತು ಮೇಲ್ನೋಟದಲ್ಲಿ ಅಭಿರುಚಿಯಿದ್ದ ಕಾರಣದಿಂದ ಅವರಿಗೆ ಈ ಉಪನಾಮ ಲಭಿಸಿತು ಎಂದು ಹೇಳಲಾಗುತ್ತದೆ. ಬಕರ್ ಎಂಬುದರ ಒಂದು ಅರ್ಥ ತ್ವರೆ ಮಾಡುವವ, ಮುಂದಾಗುವವ ಎಂದೂ ಆಗಿದೆ. ಕೆಲವರ ಪ್ರಕಾರ ಅವರು ಇಸ್ಲಾಂ ಸ್ವೀಕರಿಸುವುದರಲ್ಲಿ ಮೊದಲಿಗರಾಗಿದ್ದರು. ಆದ್ದರಿಂದ ಈ ಹೆಸರು ಬಂತು. **ಇನ್ನಹೂ ಬಕರುನ್ ಇಲಲ್ ಇಸ್ಲಾಮಿ ಖಬ್‌ಲ ಗೈರಿಹೀ.** ಎಂದರೆ, ಅವರು ಇತರರಿಗಿಂತ ಮುಂಚೆ ಇಸ್ಲಾಮಿನ ಕಡೆಗೆ ಧಾವಿಸಿದರು. (ಅಶ್ರಹ್ ಮುಬಶ್ಶಿರಹ್, ಬಶೀರ್ ಸಾಜಿದ್, ಪುಟ–41, ಅಲ್‌ಬದರ್ ಪಬ್ಲಿಕೇಶನ್ಸ್, 2000)

**"ಇಬ್‌ತಿಕಾರ್"** ಎಂದರೆ ಪರಿಶುದ್ಧ ಗುಣಗಳನ್ನು ಕೈಗೊಳ್ಳುವುದರಲ್ಲಿ ಮುಂದಿರುತ್ತಿದ್ದ ಕಾರಣದಿಂದ ಅವರನ್ನು ಅಬೂಬಕರ್ ಎಂದು ಕರೆಯಲಾಯಿತು ಎಂದು ಅಲ್ಲಾಮ ಝುಮಖ್‌ಶರಿ ಬರೆದಿದ್ದಾರೆ. (ಅಸ್ಸೀರತುಲ್ ಹಲಬೀಯ, ಸಂಪುಟ–1, ಪುಟ–390, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಆಯಿಶ(ರ) ಹಝ್ರತ್ ಅಬೂಬಕರ್‌ರ(ರ) ರೂಪವನ್ನು ಹೀಗೆ ವರ್ಣಿಸುತ್ತಾರೆ: ನಾನು ಒಬ್ಬ ಅರೇಬಿಯದ ವ್ಯಕ್ತಿ ನಡೆಯುತ್ತಿರುವುದಾಗಿ ಕಂಡೆನು. ಆಗ ನಾನು ನನ್ನ ಪಲ್ಲಕ್ಕಿಯಲ್ಲಿದ್ದೆ. ಆ ವ್ಯಕ್ತಿಗಿಂತ ಹೆಚ್ಚು ಹಝ್ರತ್ ಅಬೂಬಕರ್‌ರಿಗೆ(ರ) ಸಮಾನತೆಯುಳ್ಳ ಯಾರನ್ನೂ ನಾನು ಕಂಡಿಲ್ಲ. ವರದಿಗಾರ ಹೇಳುತ್ತಾರೆ: ಹಝ್ರತ್ ಅಬೂಬಕರರ(ರ) ರೂಪವನ್ನು ವಿವರಿಸಿಕೊಡಲು ನಾವು ಅವರೊಡನೆ ಹೇಳಿದೆವು. ಆಗ ಹಝ್ರತ್ ಆಯಿಶ(ರ) ಹೇಳಿದರು: ಅವರು ಬಿಳಿ ಮೈಬಣ್ಣವುಳ್ಳ, ಸಪೂರ ದೇಹದ, ತೆಳ್ಳಗಿನ ಮತ್ತು ಸ್ವಲ್ಪ ಬಾಗಿದ ಸೊಂಟದ, ವಿಶಾಲವಾದ ಹಣೆಯನ್ನು ಹೊಂದಿದ ವ್ಯಕ್ತಿಯಾಗಿದ್ದರು. ಕೆನ್ನೆಗಳಲ್ಲಿ ಮತ್ತು ಮುಖದಲ್ಲಿ ಮಾಂಸ ಕಡಿಮೆಯಿತ್ತು ಮತ್ತು ಕಣ್ಣುಗಳು ಒಳಗಿನ ಕಡೆಗೆ ಆಗಿದ್ದುವು. (ಅತ್ತಬಖಾತಲ್ ಕುಬ್ರ, ಸಂಪುಟ–3, ಪುಟ–140, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಸಹೀಹ್ ಬುಖಾರಿಯಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಹೇಳುತ್ತಾರೆ: ಯಾರು ಅಹಂಕಾರದಿಂದ ತಮ್ಮ ಬಟ್ಟೆಯನ್ನು ಎಳೆಯುತ್ತಾ ನಡೆಯುತ್ತಾನೋ ಅಲ್ಲಾಹನ ಖಿಯಾಮತ್ ದಿನದಂದು ಅವನ ಕಡೆಗೆ ಕಣ್ಣೆತ್ತಿ ನೋಡಲಾರನು. ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಬಟ್ಟೆಯ ಒಂದು ಭಾಗ ಸಡಿಲವಾಗಿರುತ್ತದೆ. ಗಮನಿಸದಿದ್ದರೆ ಕೆಳಗೆ ಇಳಿಯುತ್ತದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಅಹಂಕಾರದಿಂದ ಹಾಗೆ ಮಾಡುತ್ತಿಲ್ಲ. ಅದು ಅನುಮತನೀಯವಾದುದಾಗಿದೆ. ಪರವಾಗಿಲ್ಲ. (ಸಹೀಹ್ ಬುಖಾರಿ, ಕಿತಾಬ್ ಫಝಾಇಲುಸ್ಸಹಾಬ ನಬಿ(ಸ) ಹದೀಸ್–3665)

ಹಝ್ರತ್ ಅಬೂಬಕರ್(ರ) ಮದರಂಗಿ ಮತ್ತು ಕತಮ್ ಎಂಬ ಹೂವಿನಿಂದ ಕೂದಲಿಗೆ ಬಣ್ಣ ಹಚ್ಚುತ್ತಿದ್ದರು. (ಸಹೀಹ್ ಮುಸ್ಲಿಮ್ ಕಿತಾಬ್ ಫಝಾಇಲ್, ವರದಿ ಸಂಖ್ಯೆ–6073)

**ಕತಮ್** ಎಂಬುದು ಉನ್ನತ ಪರ್ವತಗಳಲ್ಲಿ ಬೆಳೆಯುವ ಒಂದು ಗಿಡವಾಗಿದೆ. ಅದನ್ನು ಬಣ್ಣದೊಂದಿಗೆ ಸೇರಿಸಿ ಹಚ್ಚಲಾಗುತ್ತದೆ. ಅದರ ಮೂಲಕ ಕೂದಲಿಗೆ ಕಪ್ಪು ಬಣ್ಣ ನೀಡಲಾಗುತ್ತಿತ್ತು. (ಲಿಸಾನಿಲ್ ಅರಬ್ **"ಕತಮ್"**)

ಇಸ್ಲಾಮಿಗೆ ಮುಂಚೆ ಹಝ್ರತ್ ಅಬೂಬಕರ್‌ರ(ರ) ಕೆಲಸ ಮತ್ತು ಖುರೈಶಿರ ನಡುವೆ ಅವರ ಪದವಿಯ ಬಗ್ಗೆ ತಾರೀಖ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಅವರು ಸೌಮ್ಯಸ್ವಭಾವದವರು ಮತ್ತು ಸಮುದಾಯದಲ್ಲಿ ಸ್ವೀಕಾರಾರ್ಹ ಮತ್ತು ಪ್ರಿಯ ವ್ಯಕ್ತಿಯಾಗಿದ್ದರು. ಖುರೈಶಿಯರ ವಂಶಾವಳಿ ಕುರಿತು, ಅದರ ಒಳಿತು ಮತ್ತು ಕೆಡುಕನ್ನು ಅವರು ಬಹಳ ಹೆಚ್ಚು ಅರಿತಿದ್ದರು. ಅವರು ವ್ಯಾಪಾರಿಯಾಗಿದ್ದರು. ಅವರು ಉನ್ನತ ನೈತಿಕಗುಣ ಮತ್ತು ಒಳಿತುಗಳನ್ನು ಹೊಂದಿದ್ದರು. ಅವರ ಈ ಅನೇಕ ಗುಣಗಳ ಕಾರಣದಿಂದ ಅವರ ಸಮುದಾಯದವರು ಅವರ ಬಳಿಗೆ ಬರುತ್ತಿದ್ದರು. ಅವರನ್ನು ಪ್ರೀತಿಸುತ್ತಿದ್ದರು. ಎಂದರೆ, ಅವರ ಅರಿವಿನ ಕಾರಣದಿಂದ, ಅವರ ಅನುಭವಜ್ಞಾನದ ಕಾರಣದಿಂದ, ಅವರ ಉತ್ತಮ ಸಹವಾಸದ ಕಾರಣದಿಂದ ಅವರ ಬಳಿಗೆ ಬರುತ್ತಿದ್ದರು. (ತಾರೀಖ್ ಅತ್ತಿಬರಿ, ಸಂಪುಟ–1, ಪುಟ–540–541, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಮುಹಮ್ಮದ್ ಹುಸೈನ್ ಹೈಕಲ್ ಬರೆಯುತ್ತಾರೆ: ಖುರೈಶಿನ ಸಮುದಾಯ ಪೂರ್ತಿ ವ್ಯಾಪಾರಸ್ಥರಾಗಿದ್ದರು. ಈ ಕೋಮಿನ ಪ್ರತಿಯೊಬ್ಬ ವ್ಯಕ್ತಿ ಇದೇ ಕೆಲಸದಲ್ಲಿ ನಿರತರಾಗಿದ್ದರು. ಹಝ್ರತ್ ಅಬೂಬಕರ್(ರ) ಸಹ ಬೆಳೆದ ನಂತರ ಬಟ್ಟೆಯ ವ್ಯಾಪಾರ ಶುರುಮಾಡಿದರು. ಅದರಲ್ಲಿ ಅವರು ಅಸಾಮಾನ್ಯವಾದ ಪ್ರಗತಿಯನ್ನು ಗಳಿಸಿದರು. ಅವರು ಮಕ್ಕದ ಅತ್ಯಂತ ಸಫಲ ವ್ಯಾಪಾರಸ್ಥರಲ್ಲಿ ಗಣಿಸಲ್ಪಟ್ಟರು. ವ್ಯಾಪಾರದ ವಿಜಯದಲ್ಲಿ ಅವರ ಆಕರ್ಷಣೀಯ ವ್ಯಕ್ತಿತ್ವ ಮತ್ತು ಅತುಲ್ಯವಾದ ನೈತಿಕಗುಣಕ್ಕೆ ಹೆಚ್ಚಿನ ಪಾಲಿತ್ತು. (ಹಝ್ರತ್ ಅಬೂಬಕರ್ ಸಿದ್ದೀಖ್ ಅಕ್ಬರ್(ರ) ಮುಹಮ್ಮದ್ ಹುಸೇನ್ ಹೈಕಲ್, ಅನುವಾದಕ: ಶೇಖ್ ಮುಹಮ್ಮದ್

ಅಕ್ಬರ್ ಪಾನೀಪತಿ, ಪುಟ-41, ಇಲ್ಮ್ ಎ ಇರ್‌ಫಾನ್ ಪಬ್ಲಿಶರ್ಸ್ ಲಾಹೋರ್ 2004)

ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತರಾದ ಸಮಯದಲ್ಲಿ ಹಝ್ರತ್ ಅಬೂಬಕರರ(ರ) ಬಂಡವಾಳ ನಲ್ವತ್ತು ಸಾವಿರ ದಿರ್ಹಮ್ ಆಗಿತ್ತು. ಅವರು ಆ ಸಂಪತ್ತಿನಿಂದ ಗುಲಾಮರನ್ನು ಸ್ವತಂತ್ರಗೊಳಿಸುತ್ತಿದ್ದರು, ಮುಸ್ಲಿಮರ ಆರೈಕೆ ಮಾಡುತ್ತಿದ್ದರು. ಅವರು ಮದೀನಕ್ಕೆ ವಲಸೆ ಹೋಗುವಾಗ ಅವರ ಬಳಿ ಐದು ಸಾವಿರ ದಿರ್ಹಂ ಬಾಕಿಯಿತ್ತು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ-4, ಪುಟ-148, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಇಸ್ಲಾಮಿಗೆ ಮುಂಚೆ ಸಹ ಹಝ್ರತ್ ಅಬೂಬಕರ್(ರ) ತನ್ನ ಉನ್ನತ ನೈತಿಕಗುಣ ಮತ್ತು ಸಂಪತ್ತಿನ ಆಧಿಕ್ಯದ ಕಾರಣದಿಂದ ಖುರೈಶಿಗಳ ನಡುವೆ ಉನ್ನತ ಸ್ಥಾನವನ್ನು ಹೊಂದಿದ್ದರು. ಅವರು ಖುರೈಶಿನ ಸರದಾರರಲ್ಲಿ ಒಬ್ಬರಾಗಿದ್ದರು ಮತ್ತು ಅವರು ಸಮಾಲೋಚನೆಯ ಕೇಂದ್ರಬಿಂಧುವಾಗಿದ್ದರು. ಅವರು ಅತ್ಯಂತ ಪರಿಶುದ್ಧ ಮತ್ತು ಸಜ್ಜನರಲ್ಲಿ ಸೇರಿದವರಾಗಿದ್ದರು. ಅವರು ಆದರಣೀಯ ಉದಾರಿ ನೇತಾರರಾಗಿದ್ದರು ಮತ್ತು ಬಹಳವಾಗಿ ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಿದ್ದರು. ತನ್ನ ಸಮುದಾಯದಲ್ಲಿ ಎಲ್ಲರಿಗೂ ಪ್ರಿಯ ಮತ್ತು ಇಷ್ಟಕರ ವ್ಯಕ್ತಿಯಾಗಿದ್ದರು. ಸ್ವಪ್ನವ್ಯಾಖ್ಯಾನದ ಆಳವಾದ ಅರಿವು ಅವರಿಗೆ ಇತ್ತು. ಸ್ವಪ್ನವ್ಯಾಖ್ಯಾನದ ಹಿರಿಯ ಪಂಡಿತರಾದ ಇಬ್ನು ಸೀರೀನ್ ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ನಂತರ ಹಝ್ರತ್ ಅಬೂಬಕರ್(ರ) ಈ ಸಮುದಾಯದ ಅತ್ಯಂತ ಶ್ರೇಷ್ಠ ಸ್ವಪ್ನ ವ್ಯಾಖ್ಯಾನಗಾರರಾಗಿದ್ದರು. ಅರೇಬಿಯದ ವಂಶಾವಳಿಯನ್ನು ಅವರು ಅತ್ಯಂತ ಹೆಚ್ಚು ತಿಳಿದಿದ್ದರು.

ವಂಶಾವಳಿಯ ಜ್ಞಾನದಲ್ಲಿ ಉನ್ನತ ಸ್ಥಾನವನ್ನು ಹೊಂದಿರುವ ಜುಬೈರ್ ಬಿನ್ ಮತ್‌ಅಮ್ ಹೇಳುತ್ತಾರೆ: ನಾನು ವಂಶಾವಳಿಯ ಅರಿವನ್ನು ಹಝ್ರತ್ ಅಬೂಬಕರ್‌ರಿಂದ(ರ) ಕಲಿತಿರುವೆನು. ವಿಶೇಷವಾಗಿ ಖುರೈಶಿನ ವಂಶಾವಳಿಯನ್ನು. ಏಕೆಂದರೆ ಹಝ್ರತ್ ಅಬೂಬಕರ್(ರ) ಖುರೈಶಿಗೆ ಸೇರಿದ್ದವರಾಗಿದ್ದರು. ಖುರೈಶಿ ವಂಶಾವಳಿಯಲ್ಲಿ ಇರುವ ಒಳಿತು ಮತ್ತು ಕೆಡುಕನ್ನು ಅವರು ಚೆನ್ನಾಗಿ ತಿಳಿದಿದ್ದರು. ಆದರೆ ಹಝ್ರತ್ ಅಬೂಬಕರ್(ರ) ಖುರೈಶಿಗಳ ಕೆಡುಕನ್ನು ಹೇಳುತ್ತಿರಲಿಲ್ಲ. ಆದ್ದರಿಂದ ಅವರು ಹಝ್ರತ್ ಅಖೀಲ್ ಬಿನ್ ಅಬೂತಾಲಿಬ್‌ರಿಗಿಂತ ಹೆಚ್ಚು ಸ್ವೀಕಾರಾರ್ಹ ಮತ್ತು ಪ್ರಿಯಕರರಾಗಿದ್ದರು. ಹಝ್ರತ್ ಅಬೂಬಕರ್‌ರ(ರ) ನಂತರ ವಂಶಾವಳಿಯ ಅರಿವಿನಲ್ಲಿ ಅದರ ಒಳಿತು ಮತ್ತು ಕೆಡುಕಿನ ಬಗ್ಗೆ ಹೆಚ್ಚು ತಿಳಿದವರು ಆಗಿದ್ದರು. ಆದರೆ ಹಝ್ರತ್ ಅಖೀಲ್‌ರನ್ನು ಖುರೈಶಿಗಳು ಇಷ್ಟಪಡುತ್ತಿರಲಿಲ್ಲ. ಏಕೆಂದರೆ, ಅವರು ಖುರೈಶಿಗಳ ಕೆಡುಕಿನ ಬಗ್ಗೆಯೂ ಹೇಳುತ್ತಿದ್ದರು. ತಲೆಮಾರು ಮತ್ತು ವಂಶಾವಳಿಯ ಹೆಸರು, ಅರೇಬಿಯದ ಸ್ಥಿತಿಗತಿಗಳು ಮತ್ತು ಘಟನೆಗಳ ಬಗ್ಗೆ ಅರಿಯಲು ಹಝ್ರತ್ ಅಖೀಲ್ ಮಸ್ಜಿದ್ ನಬವಿಯಲ್ಲಿ ಹಝ್ರತ್ ಅಬೂಬಕರ್‌ರ(ರ) ಸಮೀಪ ಕುಳಿತುಕೊಳ್ಳುತ್ತಿದ್ದರು.

ಮಕ್ಕಾ ನಿವಾಸಿಗಳ ಪ್ರಕಾರ ಹಝ್ರತ್ ಅಬೂಬಕರ್(ರ) ಅವರ ಅತ್ಯುತ್ತಮ ಜನರಲ್ಲಿ ಒಬ್ಬರಾಗಿದ್ದರು. ಆದ್ದರಿಂದ ಯಾವುದಾದರೂ ತೊಂದರೆ ಎದುರಾದರೆ, ಅವರು ಹಝ್ರತ್ ಅಬೂಬಕರ್‌ರಿಂದ(ರ) ಸಹಾಯ ಬೇಡುತ್ತಿದ್ದರು.
(ಅಸ್ಸೀರತುಲ್ ಹಲಬೀಯ, ಸಂಪುಟ-1, ಪುಟ-390, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಮಕ್ಕಾದಲ್ಲಿ ಇರುವ ಎಲ್ಲ ಗೋತ್ರಗಳಿಗೆ ಕಅ್‌ಬದ ಪದವಿಯ ಕಾರಣದಿಂದ ಯಾವುದಾದರೂ ಪದವಿಯಿರುತ್ತಿತ್ತು. ಅವರ ಮೇಲೆ ಕಅ್‌ಬಕ್ಕೆ ಸಂಬಂಧಿಸಿ ಯಾವುದಾದರೂ ಕರ್ತವ್ಯ ಮತ್ತು ಜವಾಬ್ದಾರಿ ಇರುತ್ತಿತ್ತು. ಹಾಜಿಗಳಿಗೆ, ಎಂದರೆ, ಹಜ್ಜ್ ತೀರ್ಥಾಟನೆಗಾಗಿ ಬರುವವರಿಗೆ ನೀರು ಮತ್ತು ಆವಶ್ಯಕ ವಸ್ತುಗಳ ಪೂರೈಕೆಯ ಕೆಲಸವನ್ನು ಬನೂ ಅಬ್ದುಲ್ ಮನಾಫ್ ಗೋತ್ರಕ್ಕೆ ಒಪ್ಪಿಸಲಾಗಿತ್ತು. ಯುದ್ಧದ ಸಮಯದಲ್ಲಿ ಧ್ವಜಾರೋಹನ, ಕಅ್‌ಬದ ಕಾವಲು ಮತ್ತು ಕೇಂದ್ರದ ವ್ಯವಸ್ಥೆಯನ್ನು ಸರಿಪಡಿಸುವ ಜವಾಬ್ದಾರಿ ಬನೂ ಅಬ್ದುದ್ದಾರ್ ಗೋತ್ರದ್ದಾಗಿತ್ತು. ಸೈನ್ಯಗಳ ನೇತೃತ್ವವು ಖಾಲಿದ್ ಬಿನ್ ವಲೀದ್‌ರ ಗೋತ್ರವಾದ ಬನೂ ಮಖ್‌ಝೂಮ್‌ರ ಜವಾಬ್ದಾರಿಯಾಗಿತ್ತು. ಪರಿಹಾರಧನವನ್ನು ಒಟ್ಟುಗೂಡಿಸುವ ಜವಾಬ್ದಾರಿ ಹಝ್ರತ್ ಅಬೂಬಕರ್‌ರ(ರ) ಸಮುದಾಯವಾದ ಬನೂತೈಮ್ ಬಿನ್ ಮುರ್ರದ್ದಾಗಿತ್ತು. ಹಝ್ರತ್ ಅಬೂಬಕರ್(ರ) ಯುವಕರಾದಾಗ ಆ ಸೇವೆ ಅವರಿಗೆ ಒಪ್ಪಿಸಲಾಯಿತು.

ಹಝ್ರತ್ ಅಬೂಬಕರ್(ರ) ಯಾವುದಾದರೂ ಪರಿಹಾರಧನದ ಬಗ್ಗೆ ತೀರ್ಪು ನೀಡಿದರೆ, ಖುರೈಶಿಯರು ಅದನ್ನು ಅಂಗೀಕರಿಸುತ್ತಿದ್ದರು. ಅದಕ್ಕೆ ಬೆಲೆಕೊಡುತ್ತಿದ್ದರು. ಅವರಲ್ಲದೇ ಬೇರೆ ಯಾರಾದರೂ ಇದರ ತೀರ್ಪು ನೀಡಿದರೆ, ಖುರೈಶಿಯರು ಅದನ್ನು ಲೆಕ್ಕಿಸುತ್ತಿರಲಿಲ್ಲ. ಅದನ್ನು ಅಂಗೀಕರಿಸುತ್ತಿರಲಿಲ್ಲ.
(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-311, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2008)

ನಿರ್ಗತಿಕರ ಮತ್ತು ಪೀಡಿತರಿಗೆ ನೆರವು ನೀಡುವುದಾಗಿ ಮಾಡಲಾದ ಒಪ್ಪಂದವಾದ **"ಹಿಲ್‌ಫುಲ್ ಫುಝೂಲ್"**ನಲ್ಲೂ ಅವರು ಸೇರಿದ್ದರು. ಇಸ್ಲಾಮಿಗೆ ಮುಂಚೆ ಅರೇಬಿಯದ ಕೆಲವು ಸಭ್ಯ ವ್ಯಕ್ತಿಗಳ ಮನಸ್ಸಲ್ಲಿ ಹೀಗೆ ಒಂದು ಯೋಚನೆ ಬಂತು: ನಾವು ಅರ್ಹರಿಗೆ ಅವರ ಹಕ್ಕನ್ನು ಗಳಿಸಿಕೊಡಲು ಸಹಾಯ ಮಾಡುವೆವು ಮತ್ತು ದೌರ್ಜನ್ಯಗಾರನನ್ನು ದೌರ್ಜನ್ಯದಿಂದ ತಡೆಯುವೆವು ಎಂದು ನಾವೆಲ್ಲರೂ ಸೇರಿ ಪ್ರತಿಜ್ಞೆ ಮಾಡೋಣ. ಅರಬಿಯಲ್ಲಿ ಹಕ್ಕಿಗೆ ಫಝ್ಲ್ ಎಂದೂ ಹೇಳಲಾಗುತ್ತದೆ. ಫಝ್ಲಿನ ಬಹುವಚನ ಫುಝೂಲ್ ಎಂದಾಗಿದೆ. ಹೀಗೆ ಈ ಪ್ರತಿಜ್ಞೆಯ ಹೆಸರು ಹಲ್‌ಫುಲ್ ಫುಝೂಲ್ ಎಂದು ಪ್ರಸಿದ್ಧವಾಯಿತು. ಕೆಲವರ ಅಭಿಪ್ರಾಯದಲ್ಲಿ, ಈ ಯೋಜನೆಯನ್ನು ಕಾರ್ಯಗತಗೊಳಿಸಿದವರ ಹೆಸರುಗಳಲ್ಲಿ ಫಝ್ಲ್ ಎಂಬ ಪದ ಬರುತ್ತದೆ. ಆದ್ದರಿಂದ ಈ ಪ್ರತಿಜ್ಞೆಯನ್ನು ಹಲ್‌ಫುಲ್ ಫುಝೂಲ್ ಎಂದು ಹೇಳಲಾಯಿತು. ಹೇಗಿದ್ದರೂ ಫುಜ್ಜಾರ್ ಯುದ್ಧದ ನಂತರ ಬಹುಶಃ ಇದೇ ಯುದ್ಧದಿಂದ ಪ್ರಭಾವಿತರಾಗಿ ಹಝ್ರತ್ ಪೈಗಂಬರರ(ಸ) ದೊಡ್ಡಪ್ಪರಾದ ಝುಬೇರ್ ಬಿನ್ ಅಬ್ದುಲ್‌ಮುತಲ್ಲಿಬ್‌ರು ಈ ಯೋಜನೆಯನ್ನು ಪುನಃ ತಾಜಾ ಮಾಡಲು ಬಯಸಿದರು. ಹೀಗೆ ಅವರ ಮನವಿ ಪ್ರಕಾರ ಖುರೈಶಿನ ಕೆಲವು ಗೋತ್ರಗಳ ಪ್ರತಿನಿಧಿಗಳು ಅಬ್ದುಲ್ಲಾಹ್ ಬಿನ್ ಜದ್ಆನ್‌ರ ಮನೆಯಲ್ಲಿ ಒಟ್ಟುಗೂಡಿದ್ದರು. ಅಲ್ಲಿ ಅಬ್ದುಲ್ಲಾಹ್ ಬಿನ್ ಜದ್ಆನ್‌ರ ವತಿಯಿಂದ ಒಂದು ಔತನದ ವ್ಯವಸ್ಥೆ ಮಾಡಲಾಗಿತ್ತು. ಅನಂತರ ಎಲ್ಲರೂ ಒಮ್ಮತಾಭಿಪ್ರಾಯದಿಂದ ಹೀಗೆ ಪ್ರತಿಜ್ಞೆ ಮಾಡಿದರು: ನಾವು ಸದಾ ದೌರ್ಜನ್ಯವನ್ನು ತಡೆಯುವೆವು. ಪೀಡಿತರ ಸಹಾಯವನ್ನು ಮಾಡುವೆವು. ಈ ಪ್ರತಿಜ್ಞೆಯಲ್ಲಿ ಭಾಗಿಯಾದವರಲ್ಲಿ, ಬನೂ ಹಾಶಿಂ, ಬನೂ ಮುತಲ್ಲಿಬ್, ಬನೂ ಅಸದ್, ಬನೂ ಝುಹ್‌ರಾ, ಬನೂ ತೈಮ್ ಗೋತ್ರದವರು ಸೇರಿದ್ದರು. ಹಝ್ರತ್ ಪೈಗಂಬರ್(ಸ) ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು ಮತ್ತು ಪ್ರತಿಜ್ಞೆಯಲ್ಲಿ ಭಾಗಿಯಾಗಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ಪ್ರವಾದಿತ್ವದ ಕಾಲದಲ್ಲಿ ಒಮ್ಮೆ ಹೀಗೆ ಹೇಳಿದರು: ನಾನು ಅಬ್ದುಲ್ಲಾಹ್ ಬಿನ್ ಜದ್ಆನಿನ ಮನೆಯಲ್ಲಿ ಒಂದು ಪ್ರತಿಜ್ಞೆಯಲ್ಲಿ ಭಾಗಿಯಾಗಿದ್ದೆ. ಇಂದು ಇಸ್ಲಾಮಿನ ಕಾಲದಲ್ಲೂ ಯಾರಾದರೂ ನನ್ನನ್ನು ಅದರ ಕಡೆಗೆ ಆಮಂತ್ರಿಸಿದರೆ, ನಾನು ಅದಕ್ಕೆ ತಯಾರಿದ್ದೇನೆ.
(ಸೀರತ್ ಖಾತಮನ್ನಬೀಈನ್, ಸಂಪುಟ-104-105)

ಹಲ್‌ಫುಲ್ ಫುಝೂಲಿನಲ್ಲಿ ಹಝ್ರತ್ ಅಬೂಬಕರ್(ರ) ಸೇರಿದ್ದರು ಎಂಬುದರ ಬಗ್ಗೆ ಒಬ್ಬ ಲೇಖಕ ಬರೆಯುತ್ತಾರೆ: ಈ ಸಂಘಟನೆಯಲ್ಲಿ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್ ಸಿದ್ದೀಖ್(ರ) ಕೂಡ ಭಾಗಿಯಾಗಿದ್ದರು. (ಸಯ್ಯಿದುನಾ ಸಿದ್ದೀಖ್ ಅಕ್ಬರ್ ಕೆ ಶಬ್ ವ ರೋಝ್, ಮುಹಮ್ಮದ್ ಹುಝೈಫ ಲಾಹೋರಿ, ಪುಟ-19, ಮಕ್ತಬಲ್ ಹರ್‌ಮೈನ್ ಲಾಹೋರ್)

ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತರಾಗುವುದಕ್ಕೆ ಮುಂಚಿತವಾಗಿಯೇ ಹಝ್ರತ್ ಅಬೂಬಕರಿಗೆ(ರ) ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಇದ್ದ ಸಂಬಂಧ ಮತ್ತು ಗೆಳೆತನದ ಬಗ್ಗೆ ಪ್ರಸ್ತಾಪಿಸಲಾಗಿದೆ. ಇಬ್ನು ಇಸ್‌ಹಾಖ್ ಮತ್ತು ಇತರ ಜನರು ಹೀಗೆ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತರಾಗುವುದಕ್ಕೆ ಮುಂಚಿತವಾಗಿಯೇ ಹಝ್ರತ್ ಅಬೂಬಕರ್(ರ) ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಂಗಡಿಗರಾಗಿದ್ದರು. ಅವರು ಹಝ್ರತ್ ಪೈಗಂಬರರ(ಸ) ಸತ್ಯಸಂಧತೆ, ಪ್ರಾಮಾಣಿಕತೆ, ಪರಿಶುದ್ಧ ಪ್ರಕೃತಿ, ಉನ್ನತ ಸ್ವಭಾವಗುಣಗಳ ಬಗ್ಗೆ ಚೆನ್ನಾಗಿ ತಿಳಿದಿದ್ದರು. ಇಸ್ಲಾಮಿಗೆ ಮುಂಚೆಯೂ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರರ(ಸ) ಸ್ನೇಹಿತರಾಗಿದ್ದರು. (ಅಲ್‌ಬಿದಾಯ ವನ್ನಹಾಯ, ಸಂಪುಟ-2, ಭಾಗ-3, ಪುಟ-29-32, ದಾರುಲ್ ಕುತುಬ್ ಇಲ್‌ಮಿಯ 2001)

ಹಝ್ರತ್ ಅಬೂಬಕರ್‌ರಿಗೆ(ರ) ಚಿಕ್ಕಂದಿನಿಂದಲೇ ಹಝ್ರತ್ ಪೈಗಂಬರ್‌ರೊಂದಿಗೆ(ಸ) ವಿಶೇಷವಾದ ಪ್ರೀತಿ ಮತ್ತು ನಿಷ್ಠೆಯ ಭಾವನೆಯಿತ್ತು ಎಂದು ಸೀರತುಸ್ಸಹಾಬದಲ್ಲಿ ಬರೆಯಲಾಗಿದೆ. ಅವರು ಹಝ್ರತ್ ಪೈಗಂಬರರ(ಸ) ಗೆಳೆಯರಲ್ಲಿ ಸೇರಿದವರಾಗಿದ್ದರು. ವ್ಯಾಪಾರಕ್ಕೆ ಸಂಬಂಧಿಸಿದ ಹೆಚ್ಚಿನ ಯಾತ್ರೆಗಳಲ್ಲೂ ಪ್ರವಾದಿಯ ಸಹಯಾತ್ರಿಕನಾಗುವ ಸೌಭಾಗ್ಯ ಅವರಿಗೆ ಲಭಿಸಿತ್ತು.
(ಸೈರುಸ್ಸಹಾಬ, ಸಂಪುಟ-1, ಭಾಗ-1, ಪುಟ-56)

ಪ್ರವಾದಿತ್ವಕ್ಕೆ ಮುಂಚೆ ಹಝ್ರತ್ ಪೈಗಂಬರರ(ಸ) ಸ್ನೇಹಿತರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೇಳುತ್ತಾರೆ: ಪ್ರವಾದಿತ್ವಕ್ಕೆ ಮುಂಚೆ ಹಝ್ರತ್ ಪೈಗಂಬರರ(ಸ) ಗೆಳೆತನದ ಸಂಬಂಧದ ವಲಯ ಬಹಳ ಪರಿಮಿತವೆಂದು ಕಾಣಬಹುದಾಗಿದೆ. ಸತ್ಯದಲ್ಲಿ, ಆರಂಭದಿಂದಲೇ ಅವರು ಏಕಾಂಗಿ ಯಾಗಿರುವುದನ್ನು ಹೆಚ್ಚು ಇಷ್ಟಪಡುತ್ತಿದ್ದರು. ಅವರು ತಮ್ಮ ಪ್ರಾಯದ ಯಾವುದೇ ಕಾಲದಲ್ಲಿ ಮಕ್ಕಾದ ಸಾಮಾನ್ಯ ಸಮಾಜದೊಂದಿಗೆ ಸೇರಿಕೊಂಡಿರಲಿಲ್ಲ. ಆದರೆ ಕೆಲವರೊಂದಿಗೆ ಅವರಿಗೆ ಗೆಳೆತನವಿತ್ತು. ಅವರಲ್ಲಿ ಹಝ್ರತ್ ಅಬೂಬಕರ್(ರ) ಮೊದಲಿಗರಾಗಿದ್ದರು. ಎಂದರೆ, ಅಬ್ದುಲ್ಲಾಹ್ ಬಿನ್ ಅಬೀಖಹಾಫ. ಅವರು ಖುರೈಶಿನ ಉನ್ನತ ಕುಟುಂಬದವರಾಗಿದ್ದರು. ತಮ್ಮ ಸಭ್ಯತೆ ಮತ್ತು ಯೋಗ್ಯತೆಯ ಕಾರಣದಿಂದ ಸಮುದಾಯದಲ್ಲಿ ಬಹಳ ಗೌರವಭಾವದಿಂದ ಕಾಣಲ್ಪಡುತ್ತಿದ್ದರು. ಎರಡನೆಯ ಪದವಿಯಲ್ಲಿ ಹಕೀಂ ಬಿನ್ ಜಝಾಮ್ ಆಗಿದ್ದರು. ಅವರು ಹಝ್ರತ್ ಖದೀಜರ ಸಹೋದರ ಪುತ್ರರಾಗಿದ್ದರು. ಅವರು ಕೂಡ ಅತ್ಯಂತ ಸಭ್ಯ ಸ್ವಭಾವದವರಾಗಿದ್ದರು. ಆರಂಭದಲ್ಲಿ ಅವರು ಇಸ್ಲಾಂ ಸ್ವೀಕರಿಸಿರಲಿಲ್ಲ. ಆದರೆ ಆ ಸ್ಥಿತಿಯಲ್ಲೂ ಹಝ್ರತ್ ಪೈಗಂಬರ್‌ರೊಂದಿಗೆ(ಸ) ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಇರಿಸುತ್ತಿದ್ದರು. ಕೊನೆಗೆ ಉತ್ತಮ ಸಹಜಗುಣದ ಕಾರಣದಿಂದ ಅವರು ಇಸ್ಲಾಮಿನ ಕಡೆಗೆ ಆಕರ್ಷಿತರಾದರು. ಅದೇ ರೀತಿಯಲ್ಲಿ ಝೈದ್ ಬಿನ್ ಅಮ್ರ್‌ರೊಂದಿಗೂ ಹಝ್ರತ್ ಪೈಗಂಬರ್‌ರಿಗೆ(ಸ) ಸಂಬಂಧವಿತ್ತು. ಅವರು ಹಝ್ರತ್ ಉಮರ್‌ರ(ರ) ನಿಕಟ ಸಂಬಂಧಿಯಾಗಿದ್ದರು. ಇಸ್ಲಾಮಿಗೆ ಮುಂಚೆಯೂ ಬಹುದೇವಾರಾಧನೆಯನ್ನು ತ್ಯಜಿಸಿದ ಜನರಲ್ಲಿ ಅವರು ಸೇರಿದ್ದರು. ತನ್ನನ್ನು ತಾವೇ ದೀನೇ ಇಬ್ರಾಹೀಮಿಗೆ ಸೇರಿದವರು ಎಂದು ಹೇಳಿಕೊಳ್ಳುತ್ತಿದ್ದರು. ಆದರೆ ಅವರು ಇಸ್ಲಾಮಿಗೆ ಮುಂಚೆಯೇ ನಿಧನರಾದರು.

(ಸೀರತ್ ಖತಮನ್ನಬೀಈನ್, ಪುಟ-114)

*(ಪುಟ ಸಂಖ್ಯೆ-12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಇಸ್ಲಾಮಿನ ಕಡೆಗೆ ನಾನು ಯಾರನ್ನೆಲ್ಲ ಕರೆದನೋ ಅವರೆಲ್ಲ ಎಡವಿದ್ದರು ಮತ್ತು ತಡಮಾಡುತ್ತಾ ಹೋದರು – ಅಬೂಬಕರ್ ಹೊರತುಪಡಿಸಿ. ನಾನು ಅವರೊಡನೆ ಇಸ್ಲಾಮಿನ ಬಗ್ಗೆ ಪ್ರಸ್ತಾಪಿಸಿದಾಗ ಅವರು ಅದರಿಂದ ಹಿಂದಕ್ಕೆ ಸರಿಯಲೂ ಇಲ್ಲ ಈ ಕುರಿತು ತಡಮಾಡಲೂ ಇಲ್ಲ.**

**ಪ್ರತಿ ಕಾಲಘಟ್ಟದಲ್ಲೂ ಸಿದ್ದೀಖಿನ ಪರಿಪೂರ್ಣತೆಯನ್ನು ಗಳಿಸಲು ಪ್ರಯತ್ನಿಸುವ ಒಬ್ಬ ವ್ಯಕ್ತಿಗೆ ಆವಶ್ಯಕವಾದುದೇನೆಂದರೆ, ಅಬೂಬಕರರ(ರ) ಸ್ವಭಾವಗುಣ ಮತ್ತು ಸಹಜ ಪ್ರಕೃತಿಯನ್ನು ತನ್ನೊಳಗೆ ಸಾಧ್ಯವಾದಷ್ಟು ಉಂಟುಮಾಡಲು ಕಠಿಣ ಪರಿಶ್ರಮ ಮಾಡಬೇಕು. ಅನಂತರ ಸಾಧ್ಯವಾದಷ್ಟು ದುಆಗಳನ್ನು ಮಾಡಿ ಅದಕ್ಕಾಗಿ ಪ್ರಯತ್ನಿಸಬೇಕು. ಎಲ್ಲಿಯ ವರೆಗೆ ಅಬೂಬಕರರ(ರ) ಸಹಜಗುಣದ ನೆರಳನ್ನು ತನ್ನ ಮೇಲೆ ಹಾಕುವುದಿಲ್ಲವೋ ಎಲ್ಲಿಯ ವರೆಗೆ ಅದೇ ಬಣ್ಣದಲ್ಲಿ ವರ್ಣರಂಜಿತನಾಗುವುದಿಲ್ಲವೋ ಅಲ್ಲಿಯ ವರೆಗೆ ಸಿದ್ದೀಖಿ ಗುಣದ ಪರಿಪೂರ್ಣತೆ ಮತ್ತು ಶ್ರೇಷ್ಠತೆ ಲಭಿಸಲು ಸಾಧ್ಯವಲ್ಲ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–12–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರ ಇಸ್ಲಾಂ ಸ್ವೀಕಾರದ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಈ ಕುರಿತು ಹೆಚ್ಚಿನ ಪ್ರಸ್ತಾಪಗಳಿವೆ. ಕೆಲವು ಮಾತುಗಳನ್ನು ವಿವಿಧ ಮಗ್ಗಲುಗಳಲ್ಲಿ ಹಲವು ರೀತಿಗಳಲ್ಲಿ ಹೇಳಲಾಗಿವೆ. ಆದರೆ ಅವೆಲ್ಲವೂ ಒಂದೇ ಘಟನೆಯಾಗಿವೆ ಎಂದು ತಿಳಿದುಬರುತ್ತದೆ. ಈಗ ನಾನು ಕೆಲವನ್ನು ಪ್ರಸ್ತಾಪಿಸುತ್ತೇನೆ. ಅಸದುಲ್ ಗ್ಹಾಬದಲ್ಲಿ ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರ ಇಸ್ಲಾಂ ಸ್ವೀಕಾರದ ಬಗ್ಗೆ ಪ್ರಸ್ತಾಪಿಸಲಾಗಿದೆ. ಹಝ್ರತ್ ಅಬ್ದುಲ್ಲಾಃ ಬಿನ್ ಮಸ್‌ಊದ್ ವರದಿ ಮಾಡುತ್ತಾರೆ. ಹಝ್ರತ್ ಅಬೂಬಕರ್ ಸಿದ್ದೀಖ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತರಾಗುವುದಕ್ಕೆ ಮುಂಚೆ ಒಂದು ಬಾರಿ ನಾನು ಯಮನಿಗೆ ಹೋಗಿದ್ದೆ. ಅಜ್ಞ್‌ದ್ ಗೋತ್ರದ ಒಬ್ಬ ವೃದ್ಧ ವ್ಯಕ್ತಿಯ ಬಳಿ ಅತಿಥಿಯಾಗಿ ತಂಗಿದ್ದೆ.ಅವರು ಜ್ಞಾನಿ ಮತ್ತು ಪಂಡಿತರಾಗಿದ್ದರು. ಜನರ ವಂಶಾವಳಿಯ ಜ್ಞಾನದಲ್ಲಿ ಅವರು ನಿಪುಣರಾಗಿದ್ದರು. ಅವರು ನನ್ನನ್ನು ಕಂಡಾಗ ಹೇಳಿದರು: ನೀವು ಹರಮಿನ ನಿವಾಸಿಯೆಂದು ನನಗೆ ಅನಿಸುತ್ತಿದೆ. ಹೌದೆಂದು ನಾನು ಹೇಳಿದ್ದೆ. ನೀವು ಖುರೈಶಿ ಗೋತ್ರದವರಾಗಿದ್ದೀರಿ ಎಂದು ನನಗೆ ತೋರುತ್ತಿದೆ. ಹೌದೆಂದು ನಾನು ಹೇಳಿದೆ. ನೀವು ತೈಮಿ ವಂಶದವರು ಎಂದು ನಾನು ಭಾವಿಸುತ್ತೇನೆ. ಹೌದು ನಾನು ತೈಮ್ ಬಿನ್ ಮುರ್ರ ವಂಶದವನು ಎಂದು ನಾನು ಹೇಳಿದ್ದೆ. ಆಗ ಅವರು ಹೀಗೆ ಹೇಳಿದರು: ಈಗ ನನಗೆ ನಿಮ್ಮ ಬಗ್ಗೆ ಹೇಳಲು ಕೇವಲ ಒಂದು ಮಾತು ಉಳಿದಿದೆ. ಅದೇನೆಂದು ನಾನು ಕೇಳಿದೆ. ನಿನ್ನ ಹೊಟ್ಟೆಯಿಂದ ಬಟ್ಟೆಯನ್ನು ನೀಗಿಸಿ ನನಗೆ ತೋರಿಸು. ಆಗ ನಾನು ಹೇಳಿದೆ: ನೀವೇಕೆ ಹಾಗೆ ಹೇಳುತ್ತಿದ್ದೀರಿ ಎಂದು ಅರಿಯದೇ ನಾನು ಹಾಗೆ ಮಾಡುವುದಿಲ್ಲ. ಅವರು ಹೇಳಿದರು: ನಾನು ಸತ್ಯವಾದ ಜ್ಞಾನದಿಂದ ಹೇಳುತ್ತಿದ್ದೇನೆ. ಒಬ್ಬ ಪ್ರವಾದಿ ಹರಮಿನಲ್ಲಿ ಆಗಮಿಸುವರು. ಒಬ್ಬ ಯುವಕ ಮತ್ತು ಒಬ್ಬ ಹಿರಿ ವಯಸ್ಸಿನ ವ್ಯಕ್ತಿ ಅವರ ಕೆಲಸದಲ್ಲಿ ಅವರಿಗೆ ನೆರವಾಗುವರು. ಯುವಕನ ಬಗ್ಗೆ ಹೇಳುವುದಾದರೆ, ಅವರು ಕಷ್ಟತೆಗಳಲ್ಲಿ ಜಿಗಿಯುವವರು ಮತ್ತು ಸಂಕಷ್ಟಗಳನ್ನು ತಡೆಯುವವರಾಗುವರು.ಹಿರಿ ವಯಸ್ಸಿನ ವ್ಯಕ್ತಿಯು ಬಿಳಿ ಮತ್ತು ಸಪೂರ ಶರೀರದವರಾಗಿರುವರು, ಅವರ ಹೊಟ್ಟೆಯ ಮೇಲೆ ಮಚ್ಚೆ ಇರುವುದು, ಎಡೆತೊಡೆಯಲ್ಲಿ ಒಂದು ಗುರುತು ಇರುವುದು. ಅವರು ಹೇಳಿದರು: ನಾನು ಕೇಳಿದ್ದು ನೀನು ತೋರಿಸಬೇಕೆಂದೇನಿಲ್ಲ. ನಿನ್ನಲ್ಲಿ ಇತರ ಎಲ್ಲ ಲಕ್ಷಣಗಳು ಇರುವುದಾಗಿ ಸಾಬೀತಾಗಿದೆ. ನನ್ನಿಂದ ರಹಸ್ಯವಾಗಿ ಇರುವ ಈ ಸಂಗತಿಯ ಹೊರತು. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ನಾನು ನನ್ನ ಹೊಟ್ಟೆಯಿಂದ ನನ್ನ ಅಂಗಿಯನ್ನು ನೀಗಿಸಿದೆ. ಅವರು ನನ್ನ ಹೊಕ್ಕಲಿನ ಮೇಲೆ ಕಪ್ಪು ಮಚ್ಚೆಯನ್ನು ನೋಡಿದಾಗ ಅವರು ಹೇಳಿದರು: ಕಅ್‌ಬದ ಪರಿಪಾಲಕನ ಆಣೆ, ನೀವು ಅವರೇ ಆಗಿರುವಿರಿ. ನಾನು ನಿಮ್ಮ ಮುಂದೆ ಒಂದು ವಿಷಯವನ್ನು ಇರಿಸಲು ಬಯಸುತ್ತೇನೆ. ನೀನು ಮುಂಜಾಗ್ರತೆಯಿಂದ ಇರು. ಅದೇನೆಂದು ಹಝ್ರತ್ ಅಬೂಬಕರ್(ರ) ಕೇಳಿದರು. ಅವರು ಹೇಳಿದರು: ಸನ್ಮಾರ್ಗದಿಂದ ಮುಖ ತಿರುಗಿಸಬೇಡಿರಿ, ಅನುಕರಣೀಯ ಮತ್ತು ಅತ್ಯುತ್ತಮ ಮಾದರಿಯ ಮಾರ್ಗವನ್ನು ಬಲವಾಗಿ ಹಿಡಿದು ಅಲ್ಲಾಹನ ವತಿಯಿಂದ ನೀಡಲಾದ ಸಂಪತ್ತು ಹಾಗೂ ಹಣದ ಬಗ್ಗೆ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ನಾನು ಯಮನಿನಲ್ಲಿ ತನ್ನ ಕೆಲಸವನ್ನು ಮುಗಿಸಿದ ನಂತರ ಆ ವೃದ್ಧ ವ್ಯಕ್ತಿಗೆ ವಿದಾಯ ಹೇಳಲು ಅವರ ಬಳಿಗೆ ಹೋದೆನು. ಆಗ ಅವರು ಹೇಳಿದರು: ನಾನು ಪ್ರವಾದಿಯ ಹಿರಿಮೆಯ ಬಗ್ಗೆ ನಾನು ರಚಿಸಿದ ಈ ಪದ್ಯಪಂಕ್ತಿಗಳನ್ನು ಬಾಯಿಪಾಠ ಮಾಡುತ್ತೀರಾ. ಹೀಗೆ ಅವರು ಕೆಲವು ಪಂಕ್ತಿಗಳನ್ನು ಹೇಳಿದರು. ಅನಂತರ ನಾನು ಮಕ್ಕಾಗೆ ಮರಳಿಬಂದೆ. ಆಗ ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತರಾಗಿದ್ದರು. ಅನಂತರ ಉತ್ಬ ಬಿನ್ ಅಬೀ ಮುಈದ್, ಶೈಬ, ರಬೀಅ, ಅಬೂಜಹಲ್, ಅಬೂಬಖ್‌ತರಿ ಮತ್ತು ಖುರೈಶಿನ ಇತರ ಸರದಾರರು ನನ್ನ ಬಳಿಗೆ ಬಂದರು. ನಿಮ್ಮ ಮೇಲೆ ಏನಾದರೂ ವಿಪತ್ತು ಬಂದೆರಿಗಿದೆಯೇ ಎಂದು ನಾನು ಕೇಳಿದೆ. ಅವರು ಹೇಳಿದರು: ಹೇ ಅಬೂಬಕರ್, ಬಹಳ ದೊಡ್ಡ ಘಟನೆ ನಡೆದಿದೆ. ಅಬೂತಾಲಿಬಿನ ಅನಾಥನು ತಾನು ಪ್ರವಾದಿಯೆಂದು ವಾದಿಸುತ್ತಿದ್ದಾನೆ. ನೀವು ಇರದಿದ್ದರೆ, ನಾವು ಅವನ ಕುರಿತು ಕಾಯುತ್ತಿರಲಿಲ್ಲ. ಈಗ ನೀವು ಬಂದಿರುವಿರಿ. ಈಗ ಈ ವಿಷಯದಲ್ಲಿ ನೀವೇ ನಮಗೆ ಸಾಕು. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ನಾನು ಅವರನ್ನು ಉತ್ತಮ ರೀತಿಯಲ್ಲಿ ಮಾತನಾಡಿ ಕಳುಹಿಸಿದೆ. ಹಝ್ರತ್ ಪೈಗಂಬರ್(ಸ)ರ ಕುರಿತು ನಾನು ಕೇಳಿದಾಗ, ಅವರು ಖದೀಜ(ರ)ರ ಮನೆಯಲ್ಲಿ ಇರುವರು ಎಂದು ಗೊತ್ತಾಯಿತು. ನಾನು ಹೋಗಿ ಬಾಗಿಲನ್ನು ತಟ್ಟಿದೆ. ಹೀಗೆ ಅವರು ಹೊರಗೆ ಬಂದರು. ನಾನು ಹೇಳಿದೆ: ಹೇ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್. ನೀವು ನಿಮ್ಮ ಕೌಟುಂಬಿಕ ಮನೆಯಿಂದ ಹೊರಗೆ ಬಂದಿದ್ದೀರಿ. ನೀವು ನಿಮ್ಮ ತಂದೆ ತಾತಂದಿರ ಧರ್ಮವನ್ನು ಉಪೇಕ್ಷಿಸಿದ್ದೀರಿ. ಹಝ್ರತ್ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್ ನಾನು ನಿಮ್ಮ ಮತ್ತು ನಿಮ್ಮೆಲ್ಲರಿಗಾಗಿ ಇರುವ ಅಲ್ಲಾಹನ ಪ್ರವಾದಿಯಾಗಿರುವೆನು. ಆದ್ದರಿಂದ ನೀನು ಅಲ್ಲಾಹನನ್ನು ನಂಬು. ನಾನು ಕೇಳಿದೆ: ನಿಮ್ಮ ವಾದಕ್ಕಿರುವ ಪುರಾವೆಯೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಯಮನನಲ್ಲಿ ಭೇಟಿಯಾದ ಆ ವೃದ್ಧ ವ್ಯಕ್ತಿ ಅದರ ಪುರಾವೆಯಾಗಿದೆ. ನಾನು ಹೇಳಿದೆ: ನಾನು ಯಮನಿನಲ್ಲಿ ಅನೇಕ ವೃದ್ಧರನ್ನು ಭೇಟಿಯಾಗಿದ್ದೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಿನಗೆ ಪದ್ಯಗಳನ್ನು ಹೇಳಿಕೊಟ್ಟ ವೃದ್ಧ ವ್ಯಕ್ತಿ. ನಾನು ಕೇಳಿದೆ: ಹೇ ನನ್ನ ಸ್ನೇಹಿತ, ನಿಮಗೆ ಈ ಮಾಹಿತಿ ಯಾರು ನೀಡಿದರು? ಹಝ್ರತ್ ಪೈಗಂಬರ್(ಸ) ಹೇಳಿದರು: ನನಗಿಂತ ಮುಂಚಿನ ಪ್ರವಾದಿಗಳ ಬಳಿಗೂ ಹೋಗುತ್ತಿದ್ದ ಆ ಮಹತ್ತಾದ ದೇವದೂತ ನನ್ನೊಡನೆ ಹೇಳಿದರು. ನಾನು ಹೇಳಿದೆ: ನೀವು ನಿಮ್ಮ ಕೈಯನ್ನು ಚಾಚಿರಿ, ಅಲ್ಲಾಹನಲ್ಲದೇ ಆರಾಧ್ಯನಿಲ್ಲ ಮತ್ತು ನೀವು ಅಲ್ಲಾಹನ ಪ್ರವಾದಿಯಾಗಿರುವಿರಿ ಎಂಬುದಾಗಿ ನಾನು ಸಾಕ್ಷ್ಯವಹಿಸುತ್ತೇನೆ. ಹಝ್ರತ್ ಅಬೂಬಕರ್(ರ) ಹೇಳುತ್ತಾರೆ: ಅನಂತರ ನಾನು ಮರಳಿದೆ. ನಾನು ಇಸ್ಲಾಂ ಸ್ವೀಕಾರ ಮಾಡಿದ ಕಾರಣದಿಂದ ಮಕ್ಕದ ಎರಡು ಪರ್ವತಗಳ ನಡುವೆ ಹಝ್ರತ್ ಪೈಗಂಬರ್‌ರಿಗಿಂತ(ಸ) ಹೆಚ್ಚು ಸಂತುಷ್ಟರಾಗಿ ಬೇರೆ ಯಾರೂ ಇರಲಿಲ್ಲ. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–3, ಪುಟ–312–313, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2008)

ಇದು ಅಸದುಲ್ ಗಾಬದ ವಿವರಣೆಯಾಗಿದೆ. ಕೆಲವೆಡೆ ಕಥೆಗಾಗಿ ಹೆಚ್ಚಾಗಿ ಹೇಳುತ್ತಾರೆ. ಆದರೆ ಅನೇಕ ಸಂಗತಿಗಳು ಸರಿಯೇ ಆಗಿವೆ.

ರಿಯಾಝುನ್ನಝರದಲ್ಲಿ ಹಝ್ರತ್ ಅಬೂಬಕರ್‌ರ ಇಸ್ಲಾಂ ಸ್ವೀಕಾರದ ಘಟನೆ ಹೀಗೆ ಪ್ರಸ್ತಾಪಿಸಲಾಗಿದೆ –ಉಮ್ಮುಲ್ ಮೂಮಿನೀನ್ ಹಝ್ರತ್ ಉಮ್ಮೇ ಸಲ್ಮಾ ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್ ಸಿದ್ದೀಖ್(ರ)

ಹಝ್ರತ್ ಪೈಗಂಬರ್‌ರ(ಸ) ಆತ್ಮೀಯ ಮತ್ತು ಪ್ರಾಮಾಣಿಕ ಸ್ನೇಹಿತರಾಗಿದ್ದರು. ಅವರು ಪ್ರವಾದಿಯಾಗಿ ನಿಯೋಜಿತರಾದಾಗ ಖುರೈಶಿಯರು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರ ಬಳಿಗೆ ಬಂದು ಹೀಗೆ ಹೇಳಿದರು: ಹೇ ಅಬೂಬಕರ್, ನಿಮ್ಮ ಗೆಳೆಯ ಹುಚ್ಚರಾಗಿದ್ದಾರೆ. ನಊಝುಬಿಲ್ಲಾಹ್. ವಿಷಯವೇನೆಂದು ಹಝ್ರತ್ ಅಬೂಬಕರ್(ರ) ಕೇಳಿದರು. ಅವರು ಹೇಳಿದರು: ಅವರು ಮಸ್ಜಿದ್ ಹರಾಮಿನಲ್ಲಿ ಜನರನ್ನು ಏಕದೇವನ ಕಡೆಗೆ ಕರೆಯುತ್ತಿದ್ದಾರೆ ಮತ್ತು ತನ್ನನ್ನು ಸ್ವತಃ ಪ್ರವಾದಿಯೆಂದು ಹೇಳುತ್ತಿದ್ದಾರೆ. ಹಝ್ರತ್ ಅಬೂಬಕರ್(ರ) ಕೇಳಿದರು: ಅವರು ಹಾಗೆ ಹೇಳುತ್ತಿದ್ದಾರೆಯೇ? ಹೌದೆಂದು ಆ ಜನರು ಹೇಳಿದರು. ಹೀಗೆ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋದರು. ಅವರ ಮನೆಯ ಬಾಗಿಲನ್ನು ತಟ್ಟಿದರು. ಅವರು ಹೊರಗೆ ಬಂದಾಗ ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಅಬೂಖಾಸಿಂ, ನಾನು ನಿಮ್ಮ ಬಗ್ಗೆ ಕೇಳುತ್ತಿರುವುದೇನು? ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಹಝ್ರತ್ ಅಬೂಬಕರ್, ನೀನು ನನ್ನ ಬಗ್ಗೆ ಏನು ಕೇಳಿದ್ದೀಯ? ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಏಕನಾದ ಅಲ್ಲಾಹನ ಕಡೆಗೆ ಕರೆಯುತ್ತಿದ್ದೀರಿ ಎಂದೂ ನೀವು ಅಲ್ಲಾಹನ ಪ್ರವಾದಿಯಾಗಿರುವಿರಿ ಎಂದೂ ನಾನು ಕೇಳಿದ್ದೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಹೇ ಅಬೂಬಕರ್, ಖಂಡಿತವಾಗಿಯೂ ನನ್ನ ಗೌರವಾರ್ಹ ಪ್ರಭು ನನ್ನನ್ನು ಸುವಾರ್ತೆಗಾರನಾಗಿಯೂ ಮುನ್ನೆಚ್ಚರಿಕೆಗಾರನಾಗಿಯೂ ಕಳುಹಿಸಿದ್ದಾನೆ. ನನ್ನನ್ನು ಇಬ್ರಾಹೀಮರ ದುಆದ ಸ್ವೀಕಾರವನ್ನಾಗಿ ಮಾಡಿದ್ದಾನೆ. ನನ್ನನ್ನು ಸಕಲ ಜನರ ಕಡೆಗೆ ಪ್ರವಾದಿಯಾಗಿ ಕಳುಹಿಸಿದ್ದಾನೆ. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್‌ರೊಡನೆ(ಸ) ಹೇಳಿದರು: ಅಲ್ಲಾಹನಾಣೆ, ನೀವು ಎಂದಾದರೂ ಸುಳ್ಳು ಹೇಳಿದ್ದಾಗಿ ನಾನು ಕಂಡಿಲ್ಲ. ಖಂಡಿತವಾಗಿಯೂ ನೀವು ನಿಮಗೆ ಒಪ್ಪಿಸಲಾದ ವಿಶ್ವಸ್ತ ನಿಧಿ, ಸ್ನೇಹಸಂಬಂಧ ಮತ್ತು ಉತ್ತಮ ಸತ್ಕರ್ಮಗಳ ಕಾರಣದಿಂದ ನುಬುವ್ವತ್ ಲಭಿಸಲು ಹೆಚ್ಚು ಅರ್ಹರಾಗಿರುವಿರಿ. ನೀವು ನಿಮ್ಮ ಕೈಯನ್ನು ಚಾಚಿರಿ. ನಾನು ನಿಮ್ಮ ಕೈಯಲ್ಲಿ ಬೈಅತ್ ಮಾಡುತ್ತೇನೆ. ಹಝ್ರತ್ ಪೈಗಂಬರ್(ಸ) ತನ್ನ ಕೈಯನ್ನು ಚಾಚಿದರು. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬೈಅತ್ ಮಾಡಿ ಅವರನ್ನು ಸತ್ಯಪಡಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ತಂದದ್ದು ಸತ್ಯವೆಂದು ಸಮ್ಮತಿಸಿದರು. ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ಅವರನ್ನು ಇಸ್ಲಾಮಿನ ಕಡೆಗೆ ಕರೆದಾಗ ಹಝ್ರತ್ ಅಬೂಬಕರ್(ರ) ತಡಮಾಡಿರಲಿಲ್ಲ, ಹಿಂದೆಮುಂದೆ ನೋಡಿರಲಿಲ್ಲ.

(ಅರ್‌ರಿಯಾಝುನ್ನಝ್ರ, ಸಂಪುಟ-1, ಪುಟ-84-85, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2014)

ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಇಸ್ಲಾಮಿನ ಕಡೆಗೆ ನಾನು ಯಾರನ್ನೆಲ್ಲ ಕರೆದನೋ ಅವರೆಲ್ಲ ಎಡವಿದ್ದರು ಮತ್ತು ತಡಮಾಡುತ್ತಾ ಹೋದರು - ಅಬೂಬಕರ್ ಹೊರತುಪಡಿಸಿ. ನಾನು ಅವರೊಡನೆ ಇಸ್ಲಾಮಿನ ಬಗ್ಗೆ ಪ್ರಸ್ತಾಪಿಸಿದಾಗ ಅವರು ಅದರಿಂದ ಹಿಂದಕ್ಕೆ ಸರಿಯಲೂ ಇಲ್ಲ ಈ ಕುರಿತು ತಡಮಾಡಲೂ ಇಲ್ಲ.

(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-205-206, ದಾರುಲ್ ಫಿಕರ್ ಬೈರೂತ್ 2003)

ಹಝ್ರತ್ ಪೈಗಂಬರ್(ಸ) ಹೇಳಿದರು: ಎಲೈ ಜನರೇ, ಅಲ್ಲಾಹನು ನನ್ನನ್ನು ನಿಮ್ಮ ಕಡೆಗೆ ಪ್ರವಾದಿಯಾಗಿ ಕಳುಹಿಸಿದ್ದಾನೆ. ಆಗ ನಾನು ಸುಳ್ಳುಗಾರನೆಂದು ನೀವು ಹೇಳಿದ್ದೀರಿ. ನಾನು ಸತ್ಯವಂತನೆಂದು ಅಬೂಬಕರ್(ರ) ಹೇಳಿದರು. ಅವರು ತನ್ನ ಜೀವ ಮತ್ತು ಸಂಪತ್ತಿನಿಂದ ನನ್ನೊಡನೆ ಸಹಾನುಭೂತಿಯನ್ನು ತೋರಿಸಿದರು. (ಸಹೀಹ್ ಬುಖಾರಿ, ಕಿತಾಬ್ ಫಝಾಇಲುನ್ನಬಿ(ಸ), ಹದೀಸ್-3661) ಇದು ಬುಖಾರಿಯ ವರದಿಯಾಗಿದೆ.

ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರ ಇಸ್ಲಾಂ ಸ್ವೀಕಾರದ ಘಟನೆಯನ್ನು ವಿವರಿಸುತ್ತಾ ಒಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಪ್ರವಾದಿತ್ವದ ವಾದವನ್ನು ಘೋಷಿಸಿದ್ದಾಗ ಹಝ್ರತ್ ಅಬೂಬಕರ್(ರ) ಎಲ್ಲೋ ಹೊರಗೆ ಹೋಗಿದ್ದರು. ಅವರು ಮರಳಿ ಬಂದಾಗ ಅವರ ದಾಸಿಯರಲ್ಲಿ ಒಬ್ಬಳು ಅವರೊಡನೆ ಹೀಗೆ ಹೇಳಿದಳು: ನಿಮ್ಮ ಸ್ನೇಹಿತ ಹುಚ್ಚನಾಗಿ ಬಿಟ್ಟಿದ್ದಾನೆ. ಅವರ ಬಳಿಗೆ ಆಕಾಶದಿಂದ ದೇವದೂತರು ಅವತೀರ್ಣವಾಗುತ್ತಾರೆ ಎಂದೆಲ್ಲ ವಿಚಿತ್ರವಾಗಿ ಮಾತನಾಡುತ್ತಾರೆ. ಹಝ್ರತ್ ಅಬೂಬಕರ್(ರ) ತಕ್ಷಣವೇ ಅಲ್ಲಿಂದ ಎದ್ದರು ಮತ್ತು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮನೆಗೆ ತಲುಪಿ ಬಾಗಿಲನ್ನು ತಟ್ಟಿದರು. ಹಝ್ರತ್ ಪೈಗಂಬರ್(ಸ) ಹೊರಗೆ ಬಂದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ಕೇವಲ ಒಂದು ಮಾತನ್ನು ಕೇಳಲು ಬಂದಿದ್ದೇನೆ. ನಿಮ್ಮ ಬಳಿಗೆ ಅಲ್ಲಾಹನ ದೇವದೂತರು ಅವತೀರ್ಣವಾಗುತ್ತಾರೆ ಮತ್ತು ನಿಮ್ಮೊಡನೆ ಮಾತನಾಡುತ್ತಾರೆ ಎಂದು ನೀವು ಹೇಳಿದ್ದೀರಾ? ಎಡವಿ ಹೋಗದಿರಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಸ್ವಲ್ಪವಿಶದವಾಗಿ ಹೇಳಲು ಭಾವಿಸಿದರು. ನಮ್ಮ ಚರಿತ್ರೆಯ ಗ್ರಂಥಗಳಲ್ಲಿ ಸಾಮಾನ್ಯವಾಗಿ ಇದೇ ವರದಿ ಚಾಲ್ತಿಯಲ್ಲಿದೆ. ಹಝ್ರತ್ ಅಬೂಬಕರ್(ರ) ಅವರನ್ನು ತಡೆದು ಹೇಳಿದರು: ನೀವು ವಿವರಿಸಬೇಡಿರಿ. ನೀವು ಹೀಗೆ ಹೇಳಿದ್ದೀರಾ ಎಂದು ಮಾತ್ರ ನನ್ನೊಡನೆ ಹೇಳಿರಿ. ಆದರೂ ಮುನ್ನುಡಿಯೆಂಬಂತೆ ಕೆಲವು ಮಾತುಗಳನ್ನು ಹೇಳಲು ಹಝ್ರತ್ ಪೈಗಂಬರ್(ಸ) ಬಯಸಿದರು. ಆದರೆ ಹಝ್ರತ್ ಅಬೂಬಕರ್(ರ) ಹೇಳಿದರು: ಬೇಡ ಬೇಡ, ಈ ಮಾತು ಸರಿಯೇ ಎಂದು ಮಾತ್ರ ಹೇಳಿದರೆ ಸಾಕು. ಹೌದು, ಸರಿಯೇ ಆಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ನಿಮ್ಮನ್ನು ನಂಬುತ್ತೇನೆ. ಯಾ ರಸೂಲಲ್ಲಾಹ್, ನೀವು ನನಗೆ ಪುರಾವೆಗಳನ್ನು ಮುಂದಿರಿಸುವುದರಿಂದ ನಾನು ತಡೆಯಲು ಕಾರಣವೇನೆಂದರೆ, ನನ್ನ ವಿಶ್ವಾಸವು ನಾನು ನಿಮ್ಮನ್ನು ಕಂಡ ಆಧಾರದ ಮೇಲಾಗಿರಲಿ, ಪುರಾವೆಯ ಮೇಲಾಗದಿರಲಿ ಎಂದು ನಾನು ಬಯಸಿದ್ದೆ. ಏಕೆಂದರೆ ನಿಮ್ಮನ್ನು ಸತ್ಯವಂತ ಮತ್ತು ಸನ್ಮಾರ್ಗಿಯೆಂದು ಒಪ್ಪಿದ ಮೇಲೆ ಬೇರೆ ಯಾವುದೇ ಪುರಾವೆಗಳ ಆವಶ್ಯಕತೆಯೇ ಇರುವುದಿಲ್ಲ. ಒಟ್ಟಿನಲ್ಲಿ ಯಾವ ಸಂಗತಿಯನ್ನು ಮಕ್ಕಾ ನಿವಾಸಿಗಳು ರಹಸ್ಯವಾಗಿ ಇಟ್ಟಿದ್ದರೋ ಅದನ್ನು ಹಝ್ರತ್ ಅಬೂಬಕರ್(ರ) ತನ್ನ ಕೃತ್ಯಗಳಿಂದ ಸ್ಪಷ್ಟವಾಗಿ ಬಯಲು ಮಾಡಿದರು. (ತಫ್ಸೀರೆ ಕಬೀರ್, ಸಂಪುಟ-2, ಪುಟ-251-252)

ಹಝ್ರತ್ ಅಬೂಬಕರ್(ರ)ರ ಇಸ್ಲಾಂ ಸ್ವೀಕಾರದ ಘಟನೆಯನ್ನು ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ವಿವರಿಸಿರುವರು: ಹಝ್ರತ್ ಅಬೂಬಕರ್(ರ)ರ ವಿಶ್ವಾಸ ಸ್ವೀಕಾರ ವಿಸ್ಮಯತರದ್ದಾಗಿತ್ತು. ಪ್ರವಾದಿತ್ವದ ವಾದವನ್ನು ಮಾಡಲು ಅಲ್ಲಾಹನು ದಿವ್ಯವಾಣಿ ಮೂಲಕ ಹಝ್ರತ್ ಪೈಗಂಬರ್(ಸ)ರಿಗೆ ಆಜ್ಞೆ ನೀಡಿದ ಸಮಯದಲ್ಲಿ ಹಝ್ರತ್ ಅಬೂಬಕರ್(ರ) ಮಕ್ಕಾದ ಒಬ್ಬ ಸರದಾರನ ಮನೆಯಲ್ಲಿದ್ದರು. ಆ ಸರದಾರನ ದಾಸಿ ಬಂದು ಹೀಗೆ ಹೇಳಿದಳು: ಖದೀಜರಿಗೆ ಏನಾಗಿದೆ ಎಂದು ಗೊತ್ತಾಗುತ್ತಿಲ್ಲ. ಮೂಸಾ ನಬಿಯಾಗಿದ್ದ ಹಾಗೆ ಅವರ ಪತಿ ನಬಿಯಾಗಿರುವರು ಎಂದು ಅವರು ಹೇಳುತ್ತಿದ್ದಾರೆ. ಜನರು ಈ ಸುದ್ದಿಯನ್ನು ಕೇಳಿ ನಗುತ್ತಿದ್ದರು ಮತ್ತು ಈ ರೀತಿಯ ಮಾತುಗಳನ್ನು ಹೇಳುವವರನ್ನು ಹುಚ್ಚರೆಂದು ಭಾವಿಸುತ್ತಿದ್ದರು. ಆದರೆ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರರ(ಸ) ಅವಸ್ಥೆಯ ಬಗ್ಗೆ ಚೆನ್ನಾಗಿ ತಿಳಿದಿದ್ದರು. ಅವರು ತಕ್ಷಣ ಎದ್ದು ಹಝ್ರತ್ ಪೈಗಂಬರರ(ಸ) ಮನೆಗೆ ಹೋದರು. ನೀವು ವಾದಿಸಿದ್ದೀರಾ ಎಂದು ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಅಲ್ಲಾಹನು ನನ್ನನ್ನು ಲೋಕದ ಸುಧಾರಣೆಗಾಗಿ ಕಳುಹಿಸಿದ್ದಾನೆ. ಶಿರ್ಕನ್ನು ಅಳಿಸಿಹಾಕಲು ಆಜ್ಞಾಪಿಸಿದ್ದಾನೆ. ಹಝ್ರತ್ ಅಬೂಬಕರ್(ರ) ಹೆಚ್ಚಿನ ಸವಾಲುಗಳನ್ನು ಕೇಳದೇ ಹೀಗೆ ಹೇಳಿದರು: ನನ್ನ ತಂದೆತಾಯಂದಿರ ಆಣೆ, ನೀವು ಎಂದಿಗೂ ಸುಳ್ಳು ಹೇಳಿಲ್ಲ. ನೀವು ಅಲ್ಲಾಹನ ಬಗ್ಗೆ ಸುಳ್ಳು ಹೇಳುವಿರಿ ಎಂದು ನನಗೆ ನಂಬಲು ಸಾಧ್ಯವಿಲ್ಲ. ಆದ್ದರಿಂದ ಅಲ್ಲಾಹನಲ್ಲದೇ ಆರಾಧ್ಯನಿಲ್ಲ ಮತ್ತು ನೀವು ಅಲ್ಲಾಹನ ದೂತರಾಗಿದ್ದೀರಿ ಎಂದು ನಾನು ನಂಬುತ್ತೇನೆ. ಅನಂತರ ಹಝ್ರತ್ ಅಬೂಬಕರ್ ರಝಿಯಲ್ಲಾಹುರ ಒಳಿತು ಮತ್ತು ದೇವಭಕ್ತಿಯ ಬಗ್ಗೆ ಚೆನ್ನಾಗಿ ತಿಳಿದಿದ್ದ ಯುವಕರನ್ನು ಒಟ್ಟುಗೂಡಿಸಿ ಅವರನ್ನು ಮನವರಿಕೆ ಮಾಡಲು ಶುರುಮಾಡಿದರು. ಹೀಗೆ ಇತರ ಏಳು ಮಂದಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಂಬಿದರು. ಇವರೆಲ್ಲರೂ 12 ಮತ್ತು 25 ವರ್ಷ ವಯಸ್ಸಿನ ನಡುವೆ ಇರುವ ಯುವಕರಾಗಿದ್ದರು. ( ದ ಾ ರ ೆ ಃ ಯೂರೋಪ್, ಅನ್ವಾರುಲ್ ಉಲೂಮ್, ಸಂಪುಟ-8, ಪುಟ-543-544)

ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯಲ್ಲಿ ಬೇರೊಂದು ರೀತಿಯಲ್ಲಿ ಹೀಗೆ ವಿವರಿಸಿರುವರು: ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರನ್ನು ಒಂದೇ ಪುರಾವೆಯಿಂದ ನಂಬಿದ್ದರು. ಎಂದಿಗೂ ಅವರ ಹೃದಯದಲ್ಲಿ ಒಂದು ನಿಮಿಷಕ್ಕೂ ಯಾವುದೇ ಸಂಶಯ ಉಂಟಾಗಲಿಲ್ಲ. ಪುರಾವೆ ಅದೇ ಆಗಿದೆ. ಘಟನೆ ಅಲ್ಪ ಬೇರೆ ರೀತಿಯಲ್ಲಿ ವಿವರಿಸಲಾಗಿರುತ್ತದೆ. ಹಝ್ರತ್ ಪೈಗಂಬರ್(ಸ)ರನ್ನು ಹಝ್ರತ್ ಅಬೂಬಕರ್(ರ) ಚಿಕ್ಕಂದಿನಿಂದ ನೋಡಿದ್ದರು. ಪೈಗಂಬರ್(ಸ) ಎಂದಿಗೂ ಸುಳ್ಳು ಹೇಳಿಲ್ಲ, ಎಂದಿಗೂ ತುಂಟಾಟಿಕೆ ಮಾಡಿಲ್ಲ, ಕೊಳಕು ಹೇಳಿಲ್ಲವೆಂದು ಅವರಿಗೆ ಗೊತ್ತಿತ್ತು. ಅದಕ್ಕಿಂತ ಹೆಚ್ಚೇನೂ ಅವರಿಗೆ ಗೊತ್ತಿರಲಿಲ್ಲ. ಯಾವುದೇ ಶರೀಅತ್ ಅಥವಾ ಕಾನೂನನ್ನು ಅವರು ತಿಳಿದಿರಲಿಲ್ಲ. ಅವರು ನಂಬಿದ್ದು ಅವುಗಳ ಆಧಾರದ ಮೇಲಲ್ಲ. ಅಲ್ಲಾಹನ ಪ್ರವಾದಿ ಹೇಗಿರುತ್ತಾರೆ, ಅವರ ಸತ್ಯತೆಗಿರುವ ಪುರಾವೆಗಳೇನು ಎಂದೆಲ್ಲ ಅವರಿಗೆ ಗೊತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಎಂದಿಗೂ ಸುಳ್ಳು ಹೇಳಿಲ್ಲ ಎಂದು ಮಾತ್ರ ಅವರಿಗೆ ಗೊತ್ತಿತ್ತು. ಅವರು ಯಾತ್ರೆಗೆ ಹೋಗಿದ್ದರು. ಅವರು ಮರಳಿ ಬರುತ್ತಿದ್ದಾಗ ಮಾರ್ಗದಲ್ಲೇ ಯಾರೋ ಅವರೊಡನೆ ಹೇಳಿದರು: ನಿನ್ನ ಗೆಳೆಯನಾದ ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅಲ್ಲಾಹನ ಪ್ರವಾದಿಯೆಂದು ಹೇಳುತ್ತಿದ್ದಾರೆ. ಅವರು ಹಾಗೆ ಹೇಳುತ್ತಿದ್ದಾರೆಯೇ ಎಂದು ಹಝ್ರತ್ ಅಬೂಬಕರ್(ರ) ಕೇಳಿದರು. ಹೌದೆಂದು ಅವನು ಹೇಳಿದನು. ಹಝ್ರತ್ ಅಬೂಬಕರ್(ರ): ಹಾಗಾದರೆ ಅವರು ಸುಳ್ಳು ಹೇಳುತ್ತಿಲ್ಲ. ಅವರು ಹೇಳುವುದೆಲ್ಲವೂ ಸತ್ಯವೇ ಆಗಿದೆ.

ಅವರು ಮನುಷ್ಯರ ಬಗ್ಗೆ ಸುಳ್ಳು ಹೇಳಿಲ್ಲ ಎಂದಾದರೆ, ಅವರು ಅಲ್ಲಾಹನ ಕುರಿತು ಹೇಗೆ ಸುಳ್ಳು ಹೇಳುವರು. ಅವರು ಮನುಷ್ಯರನ್ನು ಮೋಸ

ಮಾಡಿಲ್ಲವೆಂದಾದರೆ, ಅವರು ಅಲ್ಲಾಹನಗೆ ಹೇಗೆ ಅಪ್ರಾಮಾಣಿಕನಾಗಲು ಸಾಧ್ಯ? ಮನುಷ್ಯರ ಆತ್ಮಗಳನ್ನು ನಾಶಮಾಡುವಂತಹ ತಪ್ಪುಗಳನ್ನು ಅವರು ಹೇಗೆ ಮಾಡಬಲ್ಲರು. ಇದೇ ಒಂದು ಪುರಾವೆಯಿಂದ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರನ್ನು ನಂಬಿದರು. ಅಲ್ಲಾಹನು ಕೂಡ ಇದನ್ನೇ ಪುರಾವೆಯಾಗಿ ಇರಿಸುತ್ತಾನೆ. ಜನರೊಡನೆ ಹೀಗೆ ಕೇಳಲು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪೈಗಂಬರರನ್ನು(ಸ) ಆಜ್ಞಾಪಿಸುತ್ತಾನೆ: **ಫಖದ್ ಲಬಿಸ್‌ತು ಫೀಕುಂ ಉಮರನ್ ಮಿನ್‌ಖಬ್‌ಲಿಹೀ ಅಫಲಾ ತಾಖಿಲೂನ್**. ಎಂದರೆ, ಒಂದು ದೀರ್ಘಕಾಲ ನಾನು ನಿಮ್ಮೊಂದಿಗೆ ಇದ್ದೆನು. ನಾನು ಎಂದಿಗೂ ನಿಮ್ಮನ್ನು ಮೋಸಮಾಡಿಲ್ಲ. ಹೀಗಿರುವಾಗ ಈಗ ನಾನು ಅಲ್ಲಾಹನ ವಿಷಯದಲ್ಲಿ ಹೇಗೆ ಮೋಸಮಾಡಬಲ್ಲನು? ಇದೇ ಪುರಾವೆಯಿಂದ ಹಝ್ರತ್ ಅಬೂಬಕರ್(ರ) ಪ್ರಯೋಜನ ಪಡೆದರು ಮತ್ತು ಹೀಗೆ ಹೇಳಿದರು: ಅವರು ಅಲ್ಲಾಹನ ಪ್ರವಾದಿಯಾಗಿರುವರು ಎಂದು ಹೇಳುತ್ತಿದ್ದರೆ, ಅವರು ಸತ್ಯವಂತರೇ ಆಗಿರುವರು ಮತ್ತು ನಾನು ಅವರನ್ನು ನಂಬುವೆನು. ಅನಂತರ ಅವರ ಹೃದಯದಲ್ಲಿ ಎಂದಿಗೂ ಸಂಶಯ ಉಂಟಾಗಲಿಲ್ಲ. ಅವರ ಸ್ಥಿರಚಿತ್ತತೆಯಲ್ಲಿ ಎಂದಿಗೂ ನಡುಕ ಉಂಟಾಗಲಿಲ್ಲ. ಸದಾ ಸ್ಥೈರ್ಯವಾಗಿದ್ದರು. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರಿಗೆ ದೊಡ್ಡ ದೊಡ್ಡ ಆಪತ್ತುಗಳು ಬಂದುವು, ಆಸ್ತಿಪಾಸ್ತಿಗಳನ್ನು ಮತ್ತು ಸ್ವದೇಶವನ್ನು ಬಿಡಬೇಕಾಗಿ ಬಂತು, ಬಾಂಧವರನ್ನು ಕೊಲ್ಲಬೇಕಾಗಿ ಬಂತು, ಆದರೆ ಹಝ್ರತ್ ಪೈಗಂಬರರ(ಸ) ಸತ್ಯತೆಯ ಬಗ್ಗೆ ಸಂಶಯ ಉಂಟಾಗಲಿಲ್ಲ. (ಬೈಅತ್ ಕರರನೆ ವಾಲೋಂ ಕೆ ಲಿಏ ಹಿದಾಯಾತ್, ಅನ್ವಾರುಲ್ ಉಲೂಮ್, ಸಂಪುಟ–6, ಪುಟ–76–77)

ಒಂದು ಬಾರಿ ಬೈಅತ್ ಮಾಡಿದವರನ್ನು ಉಪದೇಶಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್‌ರನ್ನು(ಸ) ನಂಬಿದ ಘಟನೆಯನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರಿಗೆ ಸಿದ್ದೀಖ್ ಎಂಬ ಬಿರುದುನಾಮ ನೀಡಿದರು. ಗಮನವಿಟ್ಟು ನೋಡುವುದಾದರೆ, ಹಝ್ರತ್ ಅಬೂಬಕರ್(ರ) ತೋರಿಸಿದ ಸತ್ಯಸಂಧತೆಯ ಉದಾಹರಣೆ ಲಭಿಸುವುದು ಕಷ್ಟ. ಸತ್ಯವೇನೆಂದರೆ, ಪ್ರತಿ ಕಾಲಘಟ್ಟದಲ್ಲೂ ಸಿದ್ದೀಖಿನ ಪರಿಪೂರ್ಣತೆಯನ್ನು ಗಳಿಸಲು ಪ್ರಯತ್ನಿಸುವ ಒಬ್ಬ ವ್ಯಕ್ತಿಗೆ ಆವಶ್ಯಕವಾದುದೇನೆಂದರೆ, ಅಬೂಬಕರರ(ರ) ಸ್ವಭಾವಗುಣ ಮತ್ತು ಸಹಜ ಪ್ರಕೃತಿಯನ್ನು ತನ್ನೊಳಗೆ ಸಾಧ್ಯವಾದಷ್ಟು ಉಂಟುಮಾಡಲು ಕಠಿಣ ಪರಿಶ್ರಮ ಮಾಡಬೇಕು. ಅನಂತರ ಸಾಧ್ಯವಾದಷ್ಟು ದುಆಗಳನ್ನು ಮಾಡಿ ಅದಕ್ಕಾಗಿ ಪ್ರಯತ್ನಿಸಬೇಕು. ಎಲ್ಲಿಯ ವರೆಗೆ ಅಬೂಬಕರರ(ರ) ಸಹಜಗುಣದ ನೆರಳನ್ನು ತನ್ನ ಮೇಲೆ ಹಾಕುವುದಿಲ್ಲವೋ ಎಲ್ಲಿಯ ವರೆಗೆ ಅದೇ ಬಣ್ಣದಲ್ಲಿ ವರ್ಣರಂಜಿತನಾಗುವುದಿಲ್ಲವೋ ಅಲ್ಲಿಯ ವರೆಗೆ ಸಿದ್ದೀಖಿ ಗುಣದ ಪರಿಪೂರ್ಣತೆ ಮತ್ತು ಶ್ರೇಷ್ಠತೆ ಲಭಿಸಲು ಸಾಧ್ಯವಲ್ಲ.

ಅನಂತರ ಹೇಳುತ್ತಾರೆ: ಅಬೂಬಕರರ ಸಹಜಗುಣವೆಂದರೇನು? ಇದು ಇದರ ಬಗ್ಗೆ ವಿಶದವಾಗಿ ಹೇಳುವ ಸಂದರ್ಭವಲ್ಲ. ಏಕೆಂದರೆ ಇದರ ವಿಶದ ವಿವರಣೆಗೆ ಬಹಳ ಸಮಯ ಬೇಕಾಗುವುದು. ನಾನು ಸಂಕ್ಷಿಪ್ತವಾಗಿ ಒಂದು ಘಟನೆ ಹೇಳುತ್ತೇನೆ. ಹಝ್ರತ್ ಪೈಗಂಬರ್(ಸ) ಪ್ರವಾದಿತ್ವದ ವಾದ ಮಾಡಿದಾಗ ಹಝ್ರತ್ ಅಬೂಬಕರ್(ರ) ವ್ಯಾಪಾರಕ್ಕಾಗಿ ಸಿರಿಯದ ಕಡೆಗೆ ಹೋಗಿದ್ದರು. ಅವರು ಮರಳುತ್ತಿದ್ದಾಗ ರಸ್ತೆಯಲ್ಲೇ ಒಬ್ಬರು ಅವರನ್ನು ಭೇಟಿಯಾದರು. ಮಕ್ಕದ ಸ್ಥಿತಿಯ ಬಗ್ಗೆ ಅವರು ಆ ವ್ಯಕ್ತಿಯೊಡನೆ ಕೇಳಿದರು. ಏನಾದರೂ ಹೊಸಸುದ್ದಿ ಇದೆಯೇ ಎಂದು ಕೇಳಿದರು. ಯಾತ್ರೆಯಿಂದ ಮರಳಿ ಬರುವಾಗ ಸ್ವದೇಶಿಯಾದ ಯಾರನ್ನಾದರೂ ಭೇಟಿಯಾದರೆ ಅವರೊಡನೆ ಸ್ವದೇಶದ ಬಗ್ಗೆ ಕೇಳುವುದು ಮಾಮೂಲು. ಆ ವ್ಯಕ್ತಿ ಹೇಳಿದನು: ಹೊಸ ವಿಷಯವೇನೆಂದರೆ, ನಿನ್ನ ಸ್ನೇಹಿತನಾದ ಮುಹಮ್ಮದ್(ಸಲ್ಲಲ್ಲಾಹು ಅಲೈಹಿ ವಸಲ್ಲಮ್) ನುಬುವ್ವತಿನ ವಾದವನ್ನು ಮಾಡುತ್ತಿದ್ದಾರೆ. ಅದನ್ನು ಕೇಳಿದಾಕ್ಷಣ ಹಝ್ರತ್ ಅಬೂಬಕರ್(ರ) ಹೇಳಿದರು: ಅವರು ಹಾಗೆ ಹೇಳುತ್ತಿದ್ದರೆ, ಅವರು ಸತ್ಯವಂತರೇ ಆಗಿರುವರು.

ಹಝ್ರತ್ ಪೈಗಂಬರ್(ಸ)ರ ಬಗ್ಗೆ ಅವರಲ್ಲಿ ಎಷ್ಟು ಉತ್ತಮ ಭಾವನೆ ಇತ್ತು ಎಂದು ಈ ಒಂದು ಘಟನೆಯಿಂದಲೇ ಗೊತ್ತಾಗುತ್ತದೆ. ಯಾವುದೇ ಪವಾಡ ಅಥವಾ ದೃಷ್ಟಾಂತದ ಆವಶ್ಯಕತೆಯಿದೆ ಎಂದು ಅವರು ಭಾವಿಸಲಿಲ್ಲ. ಸತ್ಯವೇನೆಂದರೆ, ವಾದಿಸುವವನ ಜೀವನ ಸ್ಥಿತಿಯ ಬಗ್ಗೆ ಗೊತ್ತಿಲ್ಲದ ವ್ಯಕ್ತಿ ದೃಷ್ಟಾಂತವನ್ನು ಕೇಳುತ್ತಾನೆ. ಪರಿಚಯವಿಲ್ಲದೇ ಇರುವಾಗ ಹೆಚ್ಚಿನ ಕಾರ್ಯಗಳನ್ನು ಅರಿಯುವ ಆವಶ್ಯಕತೆಯಿರುತ್ತದೆ. ಆದರೆ ಜೀವಿತ ಮತ್ತು ಅವರ ಅವಸ್ಥೆಯ ಬಗ್ಗೆ ಗೊತ್ತಿರುವ ವ್ಯಕ್ತಿಗೆ ಪವಾಡಗಳ ಆವಶ್ಯಕತೆಯಿರುವುದಿಲ್ಲ. ಒಟ್ಟಿನಲ್ಲಿ, ಹಝ್ರತ್ ಅಬೂಬಕರ್(ರ) ಮಾರ್ಗದಲ್ಲೇ ಹಝ್ರತ್ ಪೈಗಂಬರರ(ಸ) ವಾದವನ್ನು ಕೇಳಿ ವಿಶ್ವಾಸ ಕೈಗೊಂಡರು. ಅನಂತರ ಮಕ್ಕ ತಲುಪಿದಾಗ ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ ಹಾಜರಾಗಿ ಹೀಗೆ ಕೇಳಿದರು: ನೀವು ಪ್ರವಾದಿತ್ವದ ವಾದವನ್ನು ಮಾಡಿದ್ದೀರಾ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಸಾಕ್ಷ್ಯವಹಿಸಿರಿ. ನಾನು ನಿಮ್ಮನ್ನು ಸತ್ಯಪಡಿಸಿದ ಮೊದಲ ವ್ಯಕ್ತಿಯಾಗಿರುವೆನು. ಹೀಗೆ ಹೇಳಿದ್ದು ಅವರ ಕೇವಲ ಬಾಯಿಮಾತು ಆಗಿರಲಿಲ್ಲ. ಬದಲಾಗಿ, ಹಝ್ರತ್ ಅಬೂಬಕರ್(ರ) ತನ್ನ ಕೃತ್ಯಗಳಿಂದ ಅದನ್ನು ಸಾಬೀತುಪಡಿಸಿ ತೋರಿಸಿದರು, ಅದನ್ನು ಮರಣದ ತನಕ ನೆರವೇರಿಸಿದರು ಮತ್ತು ಮರಣದ ನಂತರವೂ ಜೊತೆಬಿಡಲಿಲ್ಲ. (ಮಲ್‌ಫೂಝಾತ್, ಸಂಪುಟ–1, ಪುಟ–372–374)

**“ವಲಿಮನ್ ಖಾಫ ಮಖಾಮ ರಬ್ಬಿಹೀ ಜನ್ನತಾನ್”**ಎಂದರೆ ಯಾರು ತನ್ನ ಪರಿಪಾಲಕನ ಸ್ಥಾನದ ಬಗ್ಗೆ ಭಯವಿರಿಸುತ್ತಾನೋ ಅವನಿಗೆ ಎರಡು ಸ್ವರ್ಗವಿದೆ ಎಂಬ ಸೂರಃ ರಹ್ಮಾನಿನ ವಚನವನ್ನು ವ್ಯಾಖ್ಯಾನಿಸುವಾಗ ಹಝ್ರತ್ ಅಬೂಬಕರ್(ರ)ರ ಉದಾಹರಣೆಯನ್ನು ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರನ್ನೇ ನೋಡಿರಿ. ಅವರು ಸಿರಿಯದಿಂದ ಮರಳಿ ಬರುತ್ತಿದ್ದರು. ಮಾರ್ಗ ಮಧ್ಯೆ ಒಬ್ಬ ವ್ಯಕ್ತಿಯನ್ನು ಭೇಟಿಯಾದರು. ಏನಾದರೂ ಹೊಸ ವಾರ್ತೆಯನ್ನು ಹೇಳಲು ಆ ವ್ಯಕ್ತಿಯೊಡನೆ ಹೇಳಿದರು. ಆ ವ್ಯಕ್ತಿ ಹೇಳಿದರು: ಹೊಸ ಸುದ್ದಿಯೇನಿಲ್ಲ. ಆದರೆ ನಿಮ್ಮ ಸ್ನೇಹಿತನಾದ ಮುಹಮ್ಮದ್(ಸಲ್ಲಲ್ಲಾಹು ಅಲೈಹಿ ವಸಲ್ಲಂ) ಪ್ರವಾದಿತ್ವದ ವಾದವನ್ನು ಮಾಡಿರುವರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅವರು ಪ್ರವಾದಿತ್ವದ ವಾದವನ್ನು ಮಾಡಿರುವರಾದರೆ, ಅವರು ಸತ್ಯವಂತರೇ ಆಗಿರುವರು. ಅವರು ಎಂದಿಗೂ ಸುಳ್ಳು ಹೇಳಲಿಕ್ಕಿಲ್ಲ. ಅನಂತರ ಅವರ ನೇರವಾಗಿ ಹಝ್ರತ್ ಪೈಗಂಬರ್(ಸ)ರ ಮನೆಗೆ ಹೋದರು ಮತ್ತು ಹೀಗೆ ಹೇಳಿದರು: ನಾನು ನಿಮ್ಮನ್ನು ಸತ್ಯಪಡಿಸಿದ ಮೊದಲ ವ್ಯಕ್ತಿಯಾಗಿರುವೆನು ಎಂಬುದಕ್ಕೆ ನೀವು ಸಾಕ್ಷ್ಯವಹಿಸಿರಿ. ನೋಡಿರಿ ಅವರು ಪೈಗಂಬರ್(ಸ)ರೊಡನೆ ಯಾವುದೇ ದೃಷ್ಟಾಂತವನ್ನು ಆವಶ್ಯಪಡಲಿಲ್ಲ. ಪರಿಚಿತರಾಗಿದ್ದರು ಎಂಬ ಒಂದು ಸೌಭಾಗ್ಯದಿಂದಲೇ ವಿಶ್ವಾಸವನ್ನು ಕೈಗೊಂಡರು.

ಚಿಕ್ಕಂದಿನಿಂದಲೇ ಗೆಳೆಯರಾಗಿದ್ದವರಿಗೆ ಹಿಂದಿನ ಸ್ಥಿತಿಯೇ ಪವಾಡವಾಗಿರುತ್ತದೆ, ದೃಷ್ಟಾಂತವಾಗಿರುತ್ತದೆ. ಅನಂತರ ಅವರನ್ನು ಅತ್ಯಂತ ಹೆಚ್ಚಾಗಿ ದುಃಖಿಸಲಾಯಿತು ಮತ್ತು ಅತ್ಯಂತ ಹೆಚ್ಚು ಅವರನ್ನೇ ಪೀಡಿಸಲಾಯಿತು. ಆದ್ದರಿಂದ ಎಲ್ಲರಿಗಿಂತ ಮೊದಲು ಅವರನ್ನೇ ಪ್ರವಾದಿತ್ವದ ಸಿಂಹಾಸನದಲ್ಲಿ ಕುಳ್ಳಿರಿಸಲಾಯಿತು. ಅಲ್ಲಾಹನು ಅವರಿಗೆ ಇಹಲೋಕದಲ್ಲೂ ಅನುಗ್ರಹವನ್ನು ದಯಪಾಲಿಸುತ್ತಾ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಮೊದಲ ಖಲೀಫರಾಗಿ ನಿಶ್ಚಯಿಸಿದನು ಮತ್ತು ಅವರಿಗೆ ಪರಲೋಕದಲ್ಲಿ ಸ್ವರ್ಗ ಇದ್ದದ್ದೇ ಆಗಿದೆ. ಒಂದು ಕಾಲದಲ್ಲಿ ಅವರು ಪೂರ್ತಿ ದಿವಸ ವ್ಯಾಪಾರದಲ್ಲಿ ಕಳೆಯುತ್ತಿದ್ದರು. ಅನಂತರ ಅವರಿಗೆ ಲಭಿಸಿದ ಸ್ಥಾನವನ್ನು ನೋಡಿರಿ. ಅವರು ಹಝ್ರತ್ ಪೈಗಂಬರರ(ಸ) ನಂತರ ಮೊದಲ ಖಲೀಫರಾಗಿ ನಿಶ್ಚಯಿಸಲ್ಪಟ್ಟರು. (ಮಲ್‌ಫೂಝಾತ್, ಸಂಪುಟ–10, ಪುಟ–78–79)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಮನುಷ್ಯರು ಎರಡು ವಿಧದ್ದಾಗಿರುತ್ತಾರೆ. ಒಂದು, ಆರಂಭದಲ್ಲೇ ನಂಬುವ ಸೌಭಾಗ್ಯಶಾಲಿಗಳಿರುತ್ತಾರೆ. ಅವರು ಬಹಳ ಮುಂದಾಲೋಚನೆಯುರುವ ಬುದ್ಧಿವಂತರಾಗಿರುತ್ತಾರೆ. ಅವರು ಸೂಕ್ಷ್ಮದೃಷ್ಟಿಯುಳ್ಳವರಾಗಿರುತ್ತಾರೆ. ಬಹಳ ಸೂಕ್ಷ್ಮವಾಗಿ ನೋಡುವವರಾಗಿರುತ್ತಾರೆ. ಉದಾಹರಣೆಗೆ, ಹಝ್ರತ್ ಅಬೂಬಕರ್(ರ). ಎರಡನೇ ವಿಧದ ಜನರು ಅವಿವೇಕಿಗಳಾಗಿರುತ್ತಾರೆ. ತಲೆಯ ಮೇಲೆ ಬೀಳುವಾಗಲೇ ಎಚ್ಚೆತ್ತುಕೊಳ್ಳುತ್ತಾರೆ. ಎಂದರೆ ಯಾವುದಾದರೂ ಕಷ್ಟತೆಗೆ ಸಿಲುಕಿಕೊಳ್ಳುವಾಗ, ಶಿಕ್ಷೆ ಬಂದೆರುಗುವಾಗಲೇ ನಂಬಬೇಕೇ ಬೇಡವೇ ಎಂದು ಯೋಚಿಸುತ್ತಾರೆ.

ಪುರುಷರಲ್ಲಿ ಯಾರು ಮೊತ್ತಮೊದಲು ಸತ್ಯವಿಶ್ವಾಸ ಕೈಗೊಂಡವರು ಎಂಬುದರ ಕುರಿತು ಚರಿತ್ರೆಗಾರರ ನಡುವೆ ಭಿನ್ನಾಭಿಪ್ರಾಯಗಳಿವೆ. ಇದಕ್ಕೆ ಕೆಲವರು ಹೀಗೆ ಹೇಳುತ್ತಾರೆ: ಮಕ್ಕಳಲ್ಲಿ ಮೊದಲು ಹಝ್ರತ್ ಅಲಿ(ರ), ಹಿರಿಯರಲ್ಲಿ ಹಝ್ರತ್ ಅಬೂಬಕರ್(ರ), ಗುಲಾಮರಲ್ಲಿ ಹಝ್ರತ್ ಝೈದ್(ರ). ಅಲ್ಲಾಮ ಅಹ್ಮದ್ ಬಿನ್ ಅಬ್ದುಲ್ಲಾಹ್ ಬರೆಯುತ್ತಾರೆ: ಮೊತ್ತಮೊದಲು ಹಝ್ರತ್ ಖದೀಜ ಬಿನ್ತ್ ಖುವೈಲಿದ್(ರ) ಇಸ್ಲಾಂ ಸ್ವೀಕರಿಸಿದರು. ಪುರುಷರಲ್ಲಿ ಮೊತ್ತಮೊದಲು ಹಝ್ರತ್ ಅಲಿ(ರ). ಅವರು ಆಗ ಬಾಲಕನಾಗಿದ್ದರು. ಆಗ ಅವರಿಗೆ ಹತ್ತು ವಯಸ್ಸಿತ್ತು. ತನ್ನ ವಿಶ್ವಾಸವನ್ನು ವ್ಯಕ್ತಪಡಿಸಿದ ಮೊದಲ ಪ್ರೌಢ ವಯಸ್ಸಿನ ಅರೇಬಿಯ ವ್ಯಕ್ತಿ ಹಝ್ರತ್ ಅಬೂಬಕರ್ ಬಿನ್ ಅಬೂಖಹಾಫ ಆಗಿದ್ದರು. ಸ್ವತಂತ್ರಗೊಳಿಸಿದ ಗುಲಾಮರಲ್ಲಿ ಇಸ್ಲಾಂ ಸ್ವೀಕರಿಸಿದ ಮೊದಲ ವ್ಯಕ್ತಿ ಹಝ್ರತ್ ಝೈದ್ ಬಿನ್ ಹಾರಿಸ ಆಗಿದ್ದರು. ಇದು ಭಿನ್ನಾಬಿಪ್ರಾಯವಿಲ್ಲದ ಸಂಗತಿಯಾಗಿದೆ.
(ಅರ್‍ರಿಯಾಝುನ್ನಝ್‌ರ ಫೀ ಮನಾಖಿಬುಲ್ ಅಶ್ರಃ, ಸಂಪುಟ–1, ಪುಟ–89, ದಾರುಲ್ ಕುತುಬ್ ಇಲ್‌ಮಿಯ 2014)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ) ತನ್ನ ತಬ್ಲೀಗ್ ಕೆಲಸ ಶುರುಮಾಡಿದಾಗ ಮೊತ್ತಮೊದಲು ಹಝ್ರತ್ ಖದೀಜ(ರ) ವಿಶ್ವಾಸ ಕೈಗೊಂಡರು. ಒಂದು ನಿಮಿಷಕ್ಕೂ ಹಿಂದೆ ಸರಿಯಲಿಲ್ಲ. ಹಝ್ರತ್ ಖದೀಜರ(ರ) ನಂತರ ಪುರುಷರಲ್ಲಿ ಮೊತ್ತಮೊದಲು ವಿಶ್ವಾಸ ಕೈಗೊಂಡವರ ಕುರಿತು ಚರಿತ್ರೆಗಾರರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಹಝ್ರತ್ ಅಬೂಬಕರ್ ಬಿನ್ ಅಬೀಖಹಾಫರ(ರ) ಹೆಸರನ್ನು ಹೇಳುತ್ತಾರೆ. ಕೆಲವರು ಹಝ್ರತ್ ಅಲಿಯ,

ಕೆಲವರು ಝೈದ್ ಬಿನ್ ಹಾರಿಸರ ಹೆಸರು ಹೇಳುತ್ತಾರೆ.ಆದರೆ ನಮ್ಮ ಪ್ರಕಾರ ಈ ಜಗಳ ಅನಾವಶ್ಯಕವಾದುದಾಗಿದೆ. ಹಝ್ರತ್ ಅಲಿ(ರ) ಮತ್ತು ಝೈದ್ ಬಿನ್ ಹಾರಿಸ(ರ) ಹಝ್ರತ್ ಪೈಗಂಬರ್(ಸ)ರ ಮನೆಯ ಜನರಾಗಿದ್ದರು. ಅವರು ಮಕ್ಕಳ ಹಾಗೆ ಪೈಗಂಬರ್‌ರೊಡನೆ(ಸ) ಇದ್ದರು. ಹಝ್ರತ್ ಪೈಗಂಬರ್(ಸ) ಹೇಳುವಾಗ ಮಕ್ಕಳೆಂಬ ನೆಲೆಯಲ್ಲಿ ಅವರು ಪೈಗಂಬರ್‌ರನ್ನು ನಂಬಿದರು. ಈ ಇಬ್ಬರು ಮಕ್ಕಳನ್ನು ಹೊರತಪಡಿಸಿದರೆ, ಹಝ್ರತ್ ಅಬೂಬಕರ್(ರ) ವಿಶ್ವಾಸಿಗಳಲ್ಲಿ ಮೊದಲಿಗರಾಗಿದ್ದರು. ಹಝ್ರತ್ ಪೈಗಂಬರ್‌ರ(ಸ) ಸನ್ನಿಧಿಯಲ್ಲಿ ಸದಾ ಇರುತ್ತಿದ್ದ ಕವಿಯಾದ ಹಸ್ಸಾನ್ ಬಿನ್ ಸಾಬಿತ್ ಅನ್ಸಾರಿ ಹಝ್ರತ್ ಅಬೂಬಕರ್(ರ)ರ ಕುರಿತು ಹೇಳುತ್ತಾರೆ:

**ಇದ್ಹಾ ತಧಕರತ್ ಶಜೂ ಮಿನ್ ಅಖೀ ಸಿಖ್ವಿ,**
**ಫಧ್‌ಕುರ್ ಅಖಾಕ ಅಬಾ ಬಕರಿನ್ ಬಿಮಾ ಫಅಲಾ,**
**ಖೈರುಲ್ ಬರಿಯ್ಯ ಇತ್ತಖಾಹಾ ವಅಅ್‌ದಲಿಹಾ,**
**ಬಅ್‌ದನ್ನಬಿಯ್ಯಿ ವ ಔಫಾಹ ಬಿಮಾ ಹಮಲಾ**
**ಅಸ್ಸಾನಿಯತ್ತಾಲಿಯಲ್ ಮಹ್‌ಮೂದ್ ಮುಶಹ್ಹದ,**
**ವ ಔಲನ್ನಾಸಿ ಮಿನ್‌ಹುಮ್ ಸದಖುರ್ರುಸುಲ.**

ಎಂದರೆ, ನಿನ್ನ ಹೃದಯದಲ್ಲಿ ಎಂದಾದರೂ ನಿನ್ನ ಉತ್ತಮ ಸಹೋದರನ ಬಗ್ಗೆ ನೋವುಭರಿತ ಆಲೋಚನೆ ಉಂಟಾದರೆ, ಆಗ ನಿಮ್ಮ ಸಹೋದರನಾದ ಅಬೂಬಕರ್‌ರನ್ನು ಕೂಡ ನೆನಪಿಸಿರಿ. ನೆನಪಿಡಲು ಯೋಗ್ಯವಾದ ಅವರ ಶ್ರೇಷ್ಠಗುಣಗಳ ಕಾರಣದಿಂದ. ಅವರು ಹಝ್ರತ್ ಪೈಗಂಬರರ(ಸ) ನಂತರ ಎಲ್ಲರಿಗಿಂತ ಹೆಚ್ಚು ದೇವಭಯವುಳ್ಳವರಾಗಿದ್ದರು, ಎಲ್ಲರಿಗಿಂತ ಹೆಚ್ಚು ನ್ಯಾಯವಂತರಾಗಿದ್ದರು, ತಾನು ಎತ್ತಿದ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ಅತ್ಯಂತ ಹೆಚ್ಚಾಗಿ ಈಡೇರಿಸುವವರಾಗಿದ್ದರು. ಹೌದು. ಸೌರ್ ಗುಹೆಯಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಸರಣೆಯಲ್ಲಿ ತನ್ನನ್ನು ತಾನೇ ಸಂಪೂರ್ಣವಾಗಿ ಸಮರ್ಪಿಸಿದ ವ್ಯಕ್ತಿ ಅಬೂಬಕರ್(ರ) ಅವರೇ ಆಗಿದ್ದರು. ಅವರು ಕೈ ಹಾಕುತ್ತಿದ್ದ ಕೆಲಸಗಳನ್ನು ಸುಂದರಗೊಳಿಸುತ್ತಿದ್ದರು. ಜನರಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ನಂಬಿದ ಮೊದಲ ವ್ಯಕ್ತಿ ಸಹ ಅವರಾಗಿದ್ದರು.

ಹಝ್ರತ್ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ತನ್ನ ಸಭ್ಯತೆ ಮತ್ತು ಯೋಗ್ಯತೆಯ ಕಾರಣದಿಂದ ಅತ್ಯಂತ ಆದರಣೀಯರಾಗಿದ್ದರು. ಇಸ್ಲಾಮಿನಲ್ಲಿ ಬೇರೆ ಸಹಾಬಿಗೆ ಸಿಗದಂತಹ ಸ್ಥಾನ ಅವರಿಗೆ ಲಭಿಸಿತ್ತು. ಒಂದು ಕ್ಷಣಕ್ಕೂ ಹಝ್ರತ್ ಪೈಗಂಬರರ(ಸ) ವಾದದಲ್ಲಿ ಅವರು ಸಂಶಯ ಹೊಂದಲಿಲ್ಲ. ಬದಲಾಗಿ ಕೇಳುತ್ತಲೇ ನಂಬಿದರು. ಅನಂತರ ಅವರು ಸಂಪೂರ್ಣ ಗಮನ, ಜೀವ ಮತ್ತು ಸಂಪತ್ತು ಹಝ್ರತ್ ಪೈಗಂಬರ್(ಸ) ತಂದ ಧರ್ಮದ ಸೇವೆಗಾಗಿ ಸಮರ್ಪಿಸಿದರು. ಹಝ್ರತ್ ಪೈಗಂಬರ್(ಸ)ರಿಗೆ ತನ್ನ ಸಹಾಬಿಯರಲ್ಲಿ ಅಬೂಬಕರ್(ರ) ಹೆಚ್ಚು ಪ್ರಿಯರಾಗಿದ್ದರು. ಹಝ್ರತ್ ಪೈಗಂಬರ್(ಸ)ರ ಮರಣದ ನಂತರ ಅವರು ಮೊದಲ ಖಲೀಫರಾದರು. ತನ್ನ ಖಿಲಾಫತಿನ ಕಾಲದಲ್ಲೂ ಅವರು ಅಸಾಮಾನ್ಯವಾದ ಯೋಗ್ಯತೆಯನ್ನು ತೋರಿಸಿದರು. ಹಝ್ರತ್ ಅಬೂಬಕರ್‌ರ(ರ) ಕುರಿತು ಯುರೋಪಿನ ಪ್ರಸಿದ್ಧ ಪೌರಸ್ತ್ಯ ಸ್ಪ್ರಿಂಗರ್ ಬರೆಯುತ್ತಾರೆ: ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಮೋಸಗೊಳಪಟ್ಟವರಾಗಿದ್ದರೂ ಮೋಸಮಾಡುವವರಾಗಿರಲಿಲ್ಲ ಎಂಬುದಕ್ಕೆ ಅವರನ್ನು ಇಸ್ಲಾಮಿನ ಆರಂಭ ಕಾಲದಲ್ಲಿ ಹಝ್ರತ್ ಅಬೂಬಕರ್(ರ) ನಂಬಿದ್ದರು ಎಂಬುವುದೇ ಅತ್ಯಂತ ದೊಡ್ಡ ಪುರಾವೆಯಾಗಿದೆ. ಹಝ್ರತ್ ಪೈಗಂಬರ್(ಸ) ತನ್ನನ್ನು ಸ್ವತಃ ಅಲ್ಲಾಹನ ಪ್ರವಾದಿಯೆಂದು ದೃಢವಾಗಿ ನಂಬಿದ್ದರು. ಈ ವಿಷಯದಲ್ಲಿ ಸ್ಪ್ರಿಂಗರಿನೊಂದಿಗೆ ಸರ್ ವಿಲ್ಲಿಯಮ್ ಮ್ಯೂರ್ ಸಹ ಒಮ್ಮತಾಭಿಪ್ರಾಯವನ್ನು ಹೊಂದಿರುವರು ಎಂದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ.

(ಸೀರತ್ ಖತಮನ್ನಬೀಈನ್, ಪುಟ-121-122)

ಇಸ್ಲಾಮಿನ ಪ್ರಚಾರ ಮತ್ತು ಅದರ ಕಾರಣದಿಂದ ಹಝ್ರತ್ ಅಬೂಬಕರ್‌ರಿಗೆ(ರ) ಎಂತಹ ಕಷ್ಟತೆಗಳಿಂದ ಸಾಗಬೇಕಾಗಿತ್ತು ಎಂಬುದರ ಬಗ್ಗೆ ಅಸದುಲ್ ಗ್ಹಾಬದಲ್ಲಿ ಹೀಗೆ ಬರೆಯಲಾಗಿದೆ: ಇಸ್ಲಾಂ ಧರ್ಮ ಬಂದಾಗ, ಅವರು ಎಲ್ಲರಿಗಿಂತ ಮುಂಚೆ ಇಸ್ಲಾಂ ಸ್ವೀಕರಿಸಿದರು. ಅವರೊಡನೆ ಇದ್ದ ಪ್ರೀತಿ ಮತ್ತು ಅವರೊಂದಿಗೆ ಇದ್ದ ಆಕರ್ಷಣೆಯ ಕಾರಣದಿಂದ ಒಂದು ಸಂಘ ಅವರ ಕೈಯಲ್ಲಿ ಇಸ್ಲಾಂ ಸ್ವೀಕಾರ ಮಾಡಿದ್ದರು. ಎಲ್ಲಿಯ ವರೆಗೆ ಎಂದರೆ, ಅಶ್ರ ಮುಬಶ್ಶಿರರಲ್ಲಿ (ಸ್ವರ್ಗದ ವಾಗ್ದಾನ ಲಭಿಸಿದ ಹತ್ತು ಸಹಾಬಿಯರಲ್ಲಿ) ಐವರು ಸಹಾಬಿಯರಾದ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್(ರ), ಹಝ್ರತ್ ಝುಬೇರ್ ಬಿನ್ ಅವಾಮ್(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್ ಬಿನ್ ಅಬೀವಖಾಸ್(ರ), ಹಝ್ರತ್ ತಲ್ಹ ಬಿನ್ ಉಬೈದ್(ರ) ಎಂಬವರು ಹಝ್ರತ್ ಅಬೂಬಕರ್(ರ)ರ ಕೈಯಲ್ಲಿ ಇಸ್ಲಾಂ ಸ್ವೀಕರಿಸಿದರು.

(ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ-3, ಪುಟ-205, ದಾರುಲ್ ಫಿಕರ್ ಬೈರೂತ್ 2003)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ತನ್ನ ಗ್ರಂಥವಾದ ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬರೆಯುತ್ತಾರೆ: ಹಝ್ರತ್ ಖದೀಜ(ರ), ಹಝ್ರತ್ ಅಬೂಬಕರ್(ರ), ಹಝ್ರತ್ ಅಲಿ(ರ), ಹಝ್ರತ್ ಝೈದ್ ಬಿನ್ ಹಾರಿಸರ(ರ) ನಂತರ ಹಝ್ರತ್ ಅಬೂಬಕರ್‌ರ(ರ) ತಬ್ಲೀಗಿನ ಕಾರಣದಿಂದ ಐವರು ಸತ್ಯವಿಶ್ವಾಸವನ್ನು ಸ್ವೀಕರಿಸಿದ್ದರು. ಅವರೆಲ್ಲರೂ ಆದರಣೀಯ ಮತ್ತು ಉನ್ನತ ಪದವಿಯನ್ನು ಪಡೆದು ಶ್ರೇಷ್ಠ ಸಹಾಬಿಯರಲ್ಲಿ ಗಣಿಸಲ್ಪಟ್ಟರು. ಅವರ ಹೆಸರುಗಳು ಹೀಗಿವೆ: ಒಂದು, ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್. ಅವರು ಬನೂ ಉಮೈಯ್ಯ ಕುಟುಂಬದವರಾಗಿದ್ದರು. ಇಸ್ಲಾಂ ಸ್ವೀಕರಿಸುವಾಗ ಅವರಿಗೆ ಸುಮಾರು 30 ವರ್ಷ ಪ್ರಾಯವಿತ್ತು. ಹಝ್ರತ್ ಉಮರ್‌ರ(ರ) ನಂತರ ಅವರು ಇಸ್ಲಾಮಿನ ಮೂರನೇ ಖಲೀಫರಾದರು. ಹಝ್ರತ್ ಉಸ್ಮಾನ್(ರ) ಅತ್ಯಂತ ಲಜ್ಜೆಯುಳ್ಳ, ನಿಷ್ಠಾವಂತ, ಸೌಮ್ಯಶಾಲಿ, ಉದಾರಿ, ಶ್ರೀಮಂತ ವ್ಯಕ್ತಿಯಾಗಿದ್ದರು. ಅವರು ಅನೇಕ ಸಂದರ್ಭಗಳಲ್ಲಿ ಇಸ್ಲಾಮಿಗೆ ಧನಸಹಾಯಗಳನ್ನು ಮಾಡಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ಇಬ್ಬರು ಪುತ್ರಿಯರನ್ನು ಒಂದರ ನಂತರ ಇನ್ನೊಂದರಂತೆ ಹಝ್ರತ್ ಉಸ್ಮಾನ್‌ರಿಗೆ ವಿವಾಹ ಮಾಡಿಸಿಕೊಟ್ಟಿದ್ದರು ಇದರಿಂದ ಹಝ್ರತ್ ಉಸ್ಮಾನ್‌ರೊಂದಿಗೆ ಹಝ್ರತ್ ಪೈಗಂಬರ್(ಸ)ರಿಗೆ ಇದ್ದ ಸ್ನೇಹದ ಅಂದಾಜು ಆಗುತ್ತದೆ. ಆದ್ದರಿಂದಲೇ ಅವರನ್ನು ಧುನ್ನೂರೈನ್ ಎಂದು ಕರೆಯಲಾಗುತ್ತದೆ.

ಎರಡನೆಯವರು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ). ಅವರು ಬನೂಝುಹ್‌ರಾ ಕುಟುಂಬದವರಾಗಿದ್ದರು. ಹಝ್ರತ್ ಪೈಗಂಬರ್‌ರ(ಸ) ತಾಯಿ ಸಹ ಇದೇ ಕುಟುಂಬವರಾಗಿದ್ದರು. ಅಬ್ದುರ್ರಹ್ಮಾನ್ ಔಫ್(ರ) ಅತ್ಯಂತ ವಿವೇಕಶಾಲಿ ಮತ್ತು ಸಭ್ಯ ವ್ಯಕ್ತಿಯಾಗಿದ್ದರು. ಹಝ್ರತ್ ಉಸ್ಮಾನ್‌ರ(ರ) ಖಿಲಾಫತಿನ ಬಗ್ಗೆ ಇದ್ದ ಸಮಸ್ಯೆಯು ಇವರಿಂದಲೇ ಪರಿಹರಿಸಲ್ಪಟ್ಟಿತ್ತು. ಇಸ್ಲಾಂ ಸ್ವೀಕರಿಸುವಾಗ ಅವರ ಅವರಿಗೆ ಸುಮಾರು 30 ವರ್ಷ ಪ್ರಾಯವಿತ್ತು. ಅವರು ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ನಿಧನರಾದರು.

ಮೂರನೆಯದ್ದಾಗಿ ಸಅದ್ ಬಿನ್ ವಖಾಸ್(ರ) ಆಗಿದ್ದರು. ಅವರು ಆ ಸಮಯದಲ್ಲಿ ಯುವಕರಾಗಿದ್ದರು. ಅವರಿಗೆ ಆ ಸಮಯದಲ್ಲಿ 19 ವರ್ಷ ಪ್ರಾಯವಿತ್ತು. ಇವರೂ ಬನೂ ಝುಹ್ರಾದವರಾಗಿದ್ದರು. ಅವರು ಅತ್ಯಂತ ಧೈರ್ಯಶಾಲಿ ಮತ್ತು ಶೂರರಾಗಿದ್ದರು. ಹಝ್ರತ್ ಉಮರ್(ರ)ರ ಕಾಲದಲ್ಲಿ ಇರಾಕ್ ಅವರ ಕೈಯಿಂದಲೇ ಜಯಿಸಲಾಯಿತು. ಅವರು ಅಮೀರ್ ಮುಆವಿಯರ ಕಾಲದಲ್ಲಿ ನಿಧನರಾದರು.

ನಾಲ್ಕನೆಯದಾಗಿ, ಝುಬೇರ್ ಬಿನ್ ಅವಾಮ್(ರ). ಅವರು ಹಝ್ರತ್ ಪೈಗಂಬರ್(ಸ)ರ ತಂದೆಯ ಸಹೋದರಿ ಪುತ್ರರಾಗಿದ್ದರು. ಎಂದರೆ ಸಫಿಯ ಬಿನ್ತ್ ಅಬ್ದುಲ್‌ಮುತಲ್ಲಿಬರ ಪುತ್ರ. ಅವರು ಅನಂತರ ಹಝ್ರತ್ ಅಬೂಬಕರ್‌ರ(ರ) ಅಳಿಯನಾದರು. ಅವರು ಬನೂ ಅಸದ್ ಗೋತ್ರದವರಾಗಿದ್ದರು ಇಸ್ಲಾಂ ಸ್ವೀಕರಿಸುವಾಗ ಅವರಿಗೆ ಕೇವಲ 15 ವರ್ಷ ಪ್ರಾಯವಿತ್ತು. ಹಝ್ರತ್ ಪೈಗಂಬರ್(ಸ) ಝುಬೇರ್‌ರಿಗೆ ಖಂದಕ್ ಯುದ್ಧದಲ್ಲಿ ಒಂದು ವಿಶೇಷ ಸೇವೆ ಮಾಡಿದ ಕಾರಣದಿಂದ ಹವಾರಿ ಎಂಬ ಬಿರುದನ್ನು ನೀಡಿದ್ದರು. ಝುಬೇರ್ ಹಝ್ರತ್ ಅಲಿ(ರ)ರ ಕಾಲದಲ್ಲಿ ಜಮಲ್ ಯುದ್ಧದ ನಂತರ ಶಹೀದ್ ಆದರು.

ಐದನೆಯದ್ದಾಗಿ, ತಲ್‌ಹ ಬಿನ್ ಉಬೈದುಲ್ಲಾಹ್ ಆಗಿರುವರು. ಅವರು ಹಝ್ರತ್ ಅಬೂಬಕರ್‌ರ(ರ) ಕುಟುಂಬವಾದ ಬನೂ ತೈಮ್ ಗೋತ್ರದವರಾಗಿದ್ದರು ಆಗ ಅವರು ಯುವಕರಾಗಿದ್ದರು. ತಲ್‌ಹ ಸಹ ಇಸ್ಲಾಮಿನ ವಿಶೇಷ ತ್ಯಾಗಿಗಳಲ್ಲಿ ಒಬ್ಬರಾಗಿದ್ದರು. ಹಝ್ರತ್ ಅಲಿ(ರ)ರ ಕಾಲದಲ್ಲಿ ಜಮಲ್ ಯುದ್ಧದಲ್ಲಿ ಅವರು ಶಹೀದ್ ಆದರು.

ಹಝ್ರತ್ ಪೈಗಂಬರ್(ಸ) ತನ್ನ ಅನುಗ್ರಹೀತ ನಾಲಗೆಯಿಂದ ಸ್ವರ್ಗದ ಸುವಾರ್ತೆಯನ್ನು ನೀಡಿದ ಹತ್ತು ಸಹಾಬಿಯರಲ್ಲಿ ಅವರಿದ್ದರು ಹಾಗೂ ಹಝ್ರತ್ ಪೈಗಂಬರ್(ಸ)ರ ಅತ್ಯಂತ ನಿಕಟ ಸಹಚರರಲ್ಲಿ ಮತ್ತು ಸಲಹೆಗಾರರಲ್ಲಿ ಗಣಿಸಲ್ಪಡುತ್ತಿದ್ದರು. (ಸೀರತ್ ಖಾತಮುನ್ನಬೀಈನ್, ಸಂಪುಟ-122-123)

ಇಸ್ಲಾಂ ಸ್ವೀಕರಿಸಿದವರ ಮೇಲೆ ಮಕ್ಕಾದ ಸತ್ಯನಿಷೇಧಿಗಳು ಅನೇಕ ದೌರ್ಜನ್ಯಗಳನ್ನು ಮಾಡಿದರು. ದುರ್ಬಲ ಮತ್ತು ಗುಲಾಮರಾದ ಮುಸ್ಲಿಮರು ದೌರ್ಜನ್ಯ ಮತ್ತು ಪೀಡನೆಗೆ ಗುರಿಯಾದರು ಎಂದು ಮಾತ್ರವಲ್ಲ, ಸ್ವತಃ ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಅಬೂಬಕರ್(ರ) ಕೂಡ ಸುರಕ್ಷಿತರಾಗಿರಲಿಲ್ಲ. ಸೀರತ್ ಹಲ್‌ಬಿಯದಲ್ಲಿ ಹೀಗೊಂದು ಘಟನೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ತಲ್‌ಹ(ರ) ಇಸ್ಲಾಂ ಸ್ವೀಕಾರ ಮಾಡಿದ್ದಾಗಿ ಬಯಲು ಮಾಡಿದ್ದಾಗ ಖುರೈಶಿನ ಸಿಂಹವೆಂದು ಪ್ರಸಿದ್ಧರಾಗಿದ್ದ ನೌಫಲ್ ಬಿನ್ ಅದವಿಯ ಎಂಬವನು ಅವರಿಬ್ಬರನ್ನು ಒಂದೇ ಹಗ್ಗದಲ್ಲಿ ಕಟ್ಟಿ ಹಾಕಿದನು. ಅವರ ಗೋತ್ರವಾದ ಬನೂ ತೈಮ್ ಕೂಡ ಅವರಿಬ್ಬರನ್ನು ರಕ್ಷಿಸಲಿಲ್ಲ. ಆದ್ದರಿಂದಲೇ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ತಲ್‌ಹ(ರ)ರನ್ನು **ಖರೀನೈನ್** ಎಂದು ಕರೆಯಲಾಗುತ್ತದೆ ಎಂದರೆ, ಜೊತೆಗೆ ಸೇರಿದ್ದ ಇಬ್ಬರು ಗೆಳೆಯರು. (ಅಸ್ಸೀರತುಲ್ ಹಲಬೀಯ, ಸಂಪುಟ-1, ಪುಟ-395, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಉರ್‌ವ ಬಿನ್ ಝುಬೇರ್ ಹೇಳುತ್ತಾರೆ: ನಾನು ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ಬಿನ್ ಆಸ್‌ರೊಡನೆ ಕೇಳಿದೆ: ಮುಶ್ರಿಕರು ಹಝ್ರತ್ ಪೈಗಂಬರ್‌ರೊಂದಿಗೆ ಮಾಡಿದ ಅತ್ಯಂತ ಹೀನಾಯ ವರ್ತನೆ

ಏನಾಗಿತ್ತು? ಅವರು ಹೇಳಿದರು: ಒಮ್ಮೆ ಹಝ್ರತ್ ಪೈಗಂಬರ್(ಸ) ಮಸ್ಜಿದ್ ಹರಾಮಿನಲ್ಲಿ ನಮಾಝ್ ಅನುಷ್ಠಿಸುತ್ತಿದ್ದಾಗ ಉಖ್ಬ ಬಿನ್ ಅಬೀ ಮುಈತ್ ಎಂಬವನು ಒಂದು ಬಟ್ಟೆಯನ್ನು ಹಝ್ರತ್ ಪೈಗಂಬರ್(ಸ)ರ ಕುತ್ತಿಗೆಗೆ ಹಾಕಿ ಅವರ ಗಂಟಲನ್ನು ಜೋರಾಗಿ ಹಿಸುಕಿದರು. ಅಷ್ಟರಲ್ಲಿ ಹಝ್ರತ್ ಅಬೂಬಕರ್(ರ) ಅಲ್ಲಿಗೆ ತಲುಪಿದರು ಹಾಗೂ ಅವರು ಉಖ್ಬನ ತೋಳನ್ನು ಹಿಡಿದು ಜೋರಾಗಿ ತಳ್ಳಿಕೊಂಡು ಹಝ್ರತ್ ಪೈಗಂಬರ್(ಸ)ರಿಂದ ಬಿಡಿಸಿಕೊಂಡರು ಮತ್ತು ಹೀಗೆ ಹೇಳಿದರು: **ಅತಖ್‌ತುಲೂನ ರಜುಲನ್ ಅನ್‌ಯಖೂಲ ರಬ್ಬಿಯಲ್ಲಾಹು**. ಎಂದರೆ, ನನ್ನ ಪರಿಪಾಲಕ ಅಲ್ಲಾಹನೆಂದು ಹೇಳಿದ್ದಕ್ಕೆ ಮಾತ್ರ ಒಬ್ಬ ವ್ಯಕ್ತಿಯನ್ನು ನೀವು ಕೊಲ್ಲುವಿರಾ?

(ಸಹೀಹ್ ಬುಖಾರಿ, ಕಿತಾಬುಲ್ ಮನಾಖಿಬ್, ಹದೀಸ್–3856)

ಒಂದು ವರದಿಯಲ್ಲಿ ಹೀಗಿದೆ: ಒಂದು ಬಾರಿ ಮಸ್ಜಿದ್ ಹರಾಮಿನಲ್ಲಿ ಬಹುದೇವಾರಾಧಕರು ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು: ನೀವು ನಮ್ಮ ಮೂರ್ತಿಗಳ ಕುರಿತು ಹೀಗೆಲ್ಲ ಹೇಳುತ್ತಿದ್ದಿಯಲ್ಲವೇ? ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಆಗ ಅವರು ಹಝ್ರತ್ ಪೈಗಂಬರರ(ಸ) ಸುತ್ತ ಒಟ್ಟುಗೂಡಿದರು. ಹಝ್ರತ್ ಅಬೂಬಕರ್(ರ)ರಿಗೆ ಇದರ ಮಾಹಿತಿ ಲಭಿಸಿದಾಗ ಅವರು ಅಲ್ಲಿಗೆ ತಲುಪಿದರು ಮತ್ತು ಅವರು ಹೀಗೆ ಕೇಳಿದರು: **ಅತಖ್‌ತುಲೂನ ರಜುಲನ್ ಅನ್‌ಯಖೂಲ ರಬ್ಬಿಯಲ್ಲಾಹು ವ ಖದ್ ಜಾಅಕುಂ ಬಿಲ್‌ಬಯ್ಯಿನಾತಿ ಮಿರ್‍ರಬ್ಬಿಕುಂ**. ಎಂದರೆ, ನನ್ನ ಪರಿಪಾಲಕ ಅಲ್ಲಾಹನೆಂದು ಹೇಳಿದ್ದಕ್ಕೆ ಮಾತ್ರ ಒಬ್ಬ ವ್ಯಕ್ತಿಯನ್ನು ನೀವು ಕೊಲ್ಲುವಿರಾ? ಮತ್ತು ಅವರು ನಿಮ್ಮ ಬಳಿಗೆ ನಿಮ್ಮ ಪರಿಪಾಲಕನ ಕಡೆಯಿಂದ ಸ್ಪಷ್ಟವಾದ ದೃಷ್ಟಾಂತಗಳನ್ನು ತೆಗೆದುಕೊಂಡು ಬಂದಿರುವವರು. ಆಗ ಮುಶ್ರಿಕರು ಹಝ್ರತ್ ಪೈಗಂಬರ್(ಸ)ರನ್ನು ಬಿಟ್ಟು ಹಝ್ರತ್ ಅಬೂಬಕರ್(ರ)ರನ್ನು ಹೊಡೆಯಲು ಆರಂಭಿಸಿದರು. ಹಝ್ರತ್ ಅಬೂಬಕರ್(ರ)ರ ಪುತ್ರಿಯಾದ ಹಝ್ರತ್ ಅಸ್ಮಾ(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ನಮ್ಮ ಬಳಿಗೆ ಬರುವಾಗ ಅವರ ಸ್ಥಿತಿ ಏನಾಗಿತ್ತು ಎಂದರೆ, ಅವರು ತನ್ನ ಕೂದಲನ್ನು ಹಿಡಿಯುವಾಗ ಅವು ಕೈಗಳಲ್ಲಿ ಬರುತ್ತಿದ್ದುವು ಮತ್ತು ಅವರು ಹೀಗೆ ಹೇಳುತ್ತಿದ್ದರು: **ತಬಾರಕ್ತ ಯಾಝುಲ್‌ಜಲಾಲಿ ವಲ್‌ಇಕ್ರಾಮ್**.ಎಂದರೆ, ಪ್ರತಾಪಶಾಲಿಯೂ ಗೌರವಾರ್ಹನೂ ಆದವನೇ, ನೀನು ಅನುಗ್ರಹಪೂರ್ಣನಾಗಿರುವೆ.

ಒಂದು ವರದಿಯಲ್ಲಿ ಹೀಗಿದೆ: ಬಹುದೇವಾರಾಧಕರು ಹಝ್ರತ್ ಪೈಗಂಬರ್‌ರ(ಸ) ತಲೆ ಮತ್ತು ಕೂದಲನ್ನು ಎಷ್ಟು ಎಳೆದರು ಎಂದರೆ, ಅವರ ಹೆಚ್ಚಿನ ಕೂದಲುಗಳು ಉದುರಿದುವು. ಆಗ ಹಝ್ರತ್ ಅಬೂಬಕರ್(ರ) ಅವರನ್ನು ರಕ್ಷಿಸಲು ಬಂದು ಹೀಗೆ ಹೇಳುತ್ತಿದ್ದರು: **ಅತಖ್‌ತುಲೂನ ರಜುಲನ್ ಅನ್‌ಯಖೂಲ ರಬ್ಬಿಯಲ್ಲಾಹು**. ಎಂದರೆ, ನನ್ನ ಪರಿಪಾಲಕ ಅಲ್ಲಾಹನೆಂದು ಹೇಳಿದ್ದಕ್ಕೆ ಮಾತ್ರ ಒಬ್ಬ ವ್ಯಕ್ತಿಯನ್ನು ನೀವು ಕೊಲ್ಲುವಿರಾ? ಹಝ್ರತ್ ಅಬೂಬಕರ್(ರ) ಅಳುತ್ತಾ ಸಹ ಇದ್ದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಅಬೂಬಕರ್, ಅವರನ್ನು ಬಿಟ್ಟುಬಿಡು. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ, ನಾನು ಜೀವತ್ಯಾಗಗೊಳ್ಳಲು ನಾನು ಅವನ ವತಿಯಿಂದ ಕಳುಹಿಸಲ್ಪಟ್ಟವನಾಗಿದ್ದಾನೆ. ಆಗ ಸತ್ಯನಷೇಧಿಗಳು ಹಝ್ರತ್ ಪೈಗಂಬರ್(ಸ)ರನ್ನು ಬಿಟ್ಟರು. (ಅಸ್ಸೀರತುಲ್ ಹಲಬೀಯ, ಸಂಪುಟ–1, ಪುಟ–417, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಅಲಿ(ರ) ಒಂದು ಬಾರಿ ಜನರೊಡನೆ ಕೇಳಿದರು: ಎಲೈ ಜನರೇ, ಜನರಲ್ಲಿ ಅತ್ಯಂತ ಶೂರ ಯಾರು? ಹೇ ಅಮೀರಲ್ ಮೂಮಿನೀನ್, ನೀವೆಂದು ಜನರು ಉತ್ತರಿಸಿದರು. ಹಝ್ರತ್ ಅಲಿ(ರ) ಹೇಳಿದರು: ನಾನಾದರೋ ನನ್ನೊಂದಿಗೆ ಹೋರಾಡಿದ ಎಲ್ಲರನ್ನು ಹೊಡೆದು ಬೀಳಿಸಿರುವೆನು. ಆದರೆ ಅತ್ಯಂತ ಶೂರ ಅಬೂಬಕರ್(ರ) ಆಗಿರುವರು.

ಬದ್ರ್ ಯುದ್ಧದ ದಿನಗಳಲ್ಲಿ ನಾವು ಹಝ್ರತ್ ಪೈಗಂಬರ್(ಸ)ರಿಗೆ ಡೇರೆಯನ್ನು ಹಾಕಿದ್ದೆವು. ಮುಶ್ರಿಕರು ಹಝ್ರತ್ ಪೈಗಂಬರ್(ಸ)ರ ಸಮೀಪಕ್ಕೆ ತಲುಪದಿರಲಿಕ್ಕಾಗಿ ಯಾರು ಹಝ್ರತ್ ಪೈಗಂಬರ್(ಸ)ರಿಗೆ ಜೊತೆ ಕಾವಲು ನಿಲ್ಲುವರು ಎಂದು ನಾವು ಕೇಳಿದೆವು. ಆಗ ಅಲ್ಲಾಹನಾಣೆ, ಯಾರೂ ತಯಾರಾಗಲಿಲ್ಲ. ಆದರೆ ಯಾವನೇ ಮುಶ್ರಿಕನು ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪುವುದಕ್ಕೆ ಮುಂಚಿತವಾಗಿ ಅವನನ್ನು ಎದುರಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ತನ್ನ ಖಡ್ಗವನ್ನು ಹಿಡಿಯುತ್ತಾ ಹಝ್ರತ್ ಪೈಗಂಬರ್(ಸ)ರ ಸಮೀಪ ನಿಂತರು. ಅವರೇ ಅತ್ಯಂತ ಧೈರ್ಯಶಾಲಿ.

ಹಝ್ರತ್ ಅಲಿ(ರ) ಹೇಳುತ್ತಾರೆ: ಒಮ್ಮೆ ಹಝ್ರತ್ ಪೈಗಂಬರ್(ಸ)ರನ್ನು ಖುರೈಶಿ ಜನರು ಹಿಡಿದರು. ಕೆಲವರು ಅವರೊಡನೆ ಕೋಪಗೊಳ್ಳುತ್ತಿದ್ದರು, ಕೆಲವರು ಅವರನ್ನು ಉಪದ್ರವಿಸುತ್ತಿದ್ದರು. ನೀವು ಎಲ್ಲ ದೇವರುಗಳನ್ನು ಒಂದು ಮಾಡಿದ್ದೀಯ ಎಂದು ಹೇಳುತ್ತಿದ್ದರು. ಅಲ್ಲಾಹನಾಣೆ, ಆಗ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬರುತ್ತಿದ್ದ ಪ್ರತಿಯೊಬ್ಬರನ್ನು ಹಝ್ರತ್ ಅಬೂಬಕರ್(ರ) ಹೊಡೆದೋಡಿಸುತ್ತಿದ್ದರು. ಕೆಲವರನ್ನು ಬೈದು ದೂರವಾಡುತ್ತಿದ್ದರು. **ಅತಖ್‌ತುಲೂನ ರಜುಲನ್ ಅನ್‌ಯಖೂಲ ರಬ್ಬಿಯಲ್ಲಾಹು**. ಎಂದರೆ, ನನ್ನ ಪರಿಪಾಲಕ ಅಲ್ಲಾಹನೆಂದು ಹೇಳಿದ್ದಕ್ಕೆ ಮಾತ್ರ ಒಬ್ಬ ವ್ಯಕ್ತಿಯನ್ನು ನೀವು ಕೊಲ್ಲುವಿರಾ? ಎಂದು ಕೇಳುತ್ತಿದ್ದರು. ಈ ಘಟನೆಗಳನ್ನೆಲ್ಲ ನೆನಪಿಸಿ ಹಝ್ರತ್ ಅಲಿ(ರ) ಎಷ್ಟು ಅತ್ತುಬಿಟ್ಟರು ಎಂದರೆ, ಅವರ ಗಡ್ಡ ಒದ್ದೆಯಾಯಿತು. ಅನಂತರ ಹಝ್ರತ್ ಅಲಿ(ರ) ಜನರೊಡನೆ ಕೇಳಿದರು: ಅಲ್ಲಾಹನ ಮೇಲೆ ಆಣೆ ಹಾಕಿ ಕೇಳುತ್ತೇನೆ. ಫಿರ್‌ಔನಿನ ಕುಟುಂಬದ ಸತ್ಯವಿಶ್ವಾಸಿ ಉತ್ತಮರೇ ಅಥವಾ ಅಬೂಬಕರ್ ಉತ್ತಮರೇ? ಎಲ್ಲರೂ ಸುಮ್ಮನಿದ್ದರು. ಹಝ್ರತ್ ಅಲಿ(ರ) ಹೇಳಿದರು: ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ರ)ರ ಒಂದು ಘಳಿಗೆ ಫಿರ್‌ಔನಿನ ಕುಟುಂಬದ ಸತ್ಯವಿಶ್ವಾಸಿಯ ಭೂಮಿಯಷ್ಟು ಒಳಿತುಗಳಿಗಿಂತ ಉತ್ತಮ. ಏಕೆಂದರೆ ಆ ವ್ಯಕ್ತಿ ತನ್ನ ವಿಶ್ವಾಸವನ್ನು ರಹಸ್ಯವಾಗಿಡುತ್ತಿದ್ದನು. ಆದರೆ ಹಝ್ರತ್ ಅಬೂಬಕರ್(ರ) ತನ್ನ ವಿಶ್ವಾಸವನ್ನು ಘೋಷಿಸುತ್ತಿದ್ದರು. (ಅಬಬಕರ್ ಸಿದ್ದೀಕ್ ಶಖ್ಸಿಯ ವ ಅಸ್ರಃ, ದಕ್ತೂರ್ ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ–38, ದಾರ್ ಇಬ್ನೆ ಕಸೀರ್ ಬೈರೂತ್ 2003)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಮ್ಮೆ ಕೆಲವು ಶತ್ರುಗಳು ಹಝ್ರತ್ ಪೈಗಂಬರ್(ಸ)ರನ್ನು ಒಬ್ಬಂಟಿಯಾಗಿ ಕಂಡಾಗ ಅವರ ಕುತ್ತಿಗೆಗೆ ರೂಮಾಲನ್ನು ಹಾಕಿ ಹಿಸುಕಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ)ರ ಜೀವ ಹೋಗುವ ಸಾಧ್ಯತೆಯಿತ್ತು. ಆಕಸ್ಮಿಕವಾಗಿ ಅಲ್ಲಿಗೆ ಹಝ್ರತ್ ಅಬೂಬಕರ್(ರ) ಬಂದರು ಮತ್ತು ಹಝ್ರತ್ ಪೈಗಂಬರ್(ಸ)ರನ್ನು ಬಹಳ ಕಷ್ಟದಿಂದ ಬಿಡಿಸಿಕೊಂಡರು. ಆಗ ಅವರು ಹಝ್ರತ್ ಅಬೂಬಕರ್(ರ)ರನ್ನು ಎಷ್ಟು ಹೊಡೆದರು ಎಂದರೆ, ಅವರು ಪ್ರಜ್ಞೆತಪ್ಪಿ ನೆಲಕ್ಕೆ ಬಿದ್ದರು. (ಚಶ್ಮ–ಎ–ಮಾರಿಫತ್, ರೂಹಾನಿ ಖಝಾಈನ್, ಸಂಪುಟ–23, ಪುಟ–257–258)

ಹಝ್ರತ್ ಅಬೂಬಕರ್(ರ) ಇಸ್ಲಾಂ ಸ್ವೀಕಾರ ಮಾಡಿದ ವೇಳೆ ಅವರ ಬಳಿ 40 ಸಾವಿರ ದಿರ್ಹಂ ಇದ್ದುವು. ಅವರು ಅದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರು ಮತ್ತು ಅಲ್ಲಾಹನನ್ನು ನಂಬಿದ ಕಾರಣದಿಂದ ತೊಂದರೆಗೆ ಗುರಿಪಡಿಸಲಾಗುತ್ತಿದ್ದ ಏಳು ಗುಲಾಮರನ್ನು ಅವರು ಸ್ವತಂತ್ರಗೊಳಿಸಿದರು. ಆ ಗುಲಾಮರಲ್ಲಿ ಹಝ್ರತ್ ಬಿಲಾಲ್(ರ), ಹಝ್ರತ್ ಆಮಿರ್ ಬಿನ್ ಫುಹೈರ(ರ), ಹಝ್ರತ್ ಝುನೀರ(ರ), ನಹ್‌ದಿಯ ಮತ್ತು ಅವರ ಮಗಳು, ಬನೀ ಮುಅ್‌ಮಿಲ್‌ನ ಒಬ್ಬಳು ದಾಸಿ ಹಾಗೂ ಉಮ್ಮೆ ಉಬೈಸ್ ಇದ್ದರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–3, ಪುಟ–247, ದಾರುಲ್ ಫಿಕರ್ ಬೈರೂತ್ 2001)

ಹಝ್ರತ್ ಬಿಲಾಲ್(ರ) ಬನೂ ಜುಮುಅದ ಗುಲಾಮರಾಗಿದ್ದರು ಮತ್ತು ಉಮಯ್ಯ ಬಿನ್ ಖ಼ಲ್‌ಫ್ ಅವರಿಗೆ ಬಹಳ ಕಷ್ಟತೆಗಳನ್ನು ಕೊಡುತ್ತಿದ್ದರು. ಅಲ್ಲಿಗೆ ಹಝ್ರತ್ ಅಬೂಬಕರ್(ರ) ಬಂದು ಹೀಗೆ ಹೇಳಿದರು: ನೀವು ಈ ವ್ಯಕ್ತಿಗೆ ಎಷ್ಟು ಕಾಲ ಕಷ್ಟತೆ ಕೊಡುತ್ತಾ ಇರುವಿರಿ. ಹೀಗೆ ಹಝ್ರತ್ ಅಬೂಬಕರ್(ರ) ಹಝ್ರತ್ ಬಿಲಾಲ್‌ರನ್ನು 40 ದಿರ್ಹಮ್ ಕೊಟ್ಟು ಖರೀದಿ ಮಾಡಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–175, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಲುಗ಼ಾತುಲ್ ಹದೀಸ್–ಸಂಪುಟ–1, ಪುಟ–82, ನುಮಾನಿ ಕುತುಬ್ ಖಾನ ಲಾಹೋರ್)

ಹಝ್ರತ್ ಆಮಿರ್ ಬಿನ್ ಫುಹೇರ ಒಬ್ಬ ಕಪ್ಪು ವರ್ಣದ ಗುಲಾಮರಾಗಿದ್ದರು. ಅವರು ತುಫೈಲ್ ಬಿನ್ ಅಬ್ದುಲ್ಲಾಹ್‌ರ ಬಿನ್ ಸಖ್‌ಬರರ ಗುಲಾಮರಾಗಿದ್ದರು. ತಾಯಿಯ ಕಡೆಯಿಂದ ಅವರು ಹಝ್ರತ್ ಆಯಿಶ(ರ)ರ ಸಹೋದರರಾಗಿದ್ದರು. ಹಝ್ರತ್ ಆಮಿರ್ ಇಸ್ಲಾಂ ಸ್ವೀಕರಿಸಿದ ಮೊದಲಿಗರಲ್ಲಿ ಒಬ್ಬರಾಗಿದ್ದರು. ಅಲ್ಲಾಹನ ಮಾರ್ಗದಲ್ಲಿ ಅವರಿಗೆ ಕಷ್ಟತೆಗಳನ್ನು ಕೊಡಲಾಗುತ್ತಿತ್ತು. ಹಝ್ರತ್ ಅಬೂಬಕರ್(ರ) ಅವರನ್ನು ಖರೀದಿ ಮಾಡಿ ಸ್ವತಂತ್ರಗೊಳಿಸಿದರು. (ಅಸದುಲ್‌ಗಾಬ, ಸಂಪುಟ–3, ಪುಟ–31, ಆಮಿರ್ ಬಿನ್ ಫಹೀರ, ದಾರುಲ್ ಕುತುಬ್ ಇಲ್‌ಮಿಯ 2003)

ಹಝ್ರತ್ ಝುನೀರ ರೂಮಿ(ರ) ಇಸ್ಲಾಮ್ ಸ್ವೀಕಾರದಲ್ಲಿ ಮುಂದಾಗಿದ್ದ ಮಹಿಳೆಯರಲ್ಲಿ ಒಳಪಟ್ಟಿದ್ದರು. ಅವರು ಇಸ್ಲಾಂ ಸ್ವೀಕರಿಸಿದಾಗ ಅವರ ಕಣ್ಣಿನ ದೃಷ್ಟಿ ನಷ್ಟವಾಯಿತು. ಆಗ ಮುಶ್ರಿಕರು ಹೇಳಿದರು: ಲಾತ್ ಮತ್ತು ಉಝ್ಝರನ್ನು ನಿರಾಕರಿಸಿದ ಕಾರಣದಿಂದ ಝುನೀರ ಕುರುಡಿಯಾದಳು. ಆಗ ಝುನೀರ(ರ) ಸತ್ಯನಿಷೇಧಿಗಳೊಡನೆ ಹೇಳಿದರು: ಲಾತ್ ಮತ್ತು ಉಝ್ಝಾ ಹೇಗೆ ತಾನೆ ನನ್ನನ್ನು ಕುರುಡಿ ಮಾಡುತ್ತಿದ್ದರು. ಅವರಿಗೆ ಸ್ವತಃ ಕಣ್ಣು ಕಾಣುತಿಲ್ಲ. ಇದು ದೇವವಿಧಿತವಾಗಿದೆ. ಅಲ್ಲಾಹನ ಇಚ್ಛೆ ಪ್ರಕಾರ ನನ್ನ ಕಣ್ಣಿನ ದೃಷ್ಟಿ ನಷ್ಟವಾಯಿತು ಮತ್ತು ನನ್ನ ದೃಷ್ಟಿಯನ್ನು ಮರಳಿಸಲು ನನ್ನ ಪ್ರಭುವಿಗೆ ಸಾಧ್ಯವಿದೆ. ಅವರು ರಾತ್ರಿ ನಿದ್ದೆ ಹೋಗಿ ಮರುದಿನ ಬೆಳಿಗ್ಗೆ ಎಚ್ಚೆತಾಗ ಅಲ್ಲಾಹನು ಅವರ ದೃಷ್ಟಿಯನ್ನು ಮರಳಿಸಿದ್ದನು. ಆಗ ಖುರೈಶಿಗಳು ಹೇಳಿದರು ಇದು ಮುಹಮ್ಮದಿನ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಜಾದುವಿನ ಕಾರಣದಿಂದ ಆಗಿದೆ. ಅವರಿಗೆ ನೀಡಲಾಗುತ್ತಿದ್ದ ಕಷ್ಟತೆಗಳನ್ನು ಹಝ್ರತ್ ಅಬೂಬಕರ್(ರ) ಕಂಡಾಗ ಅವರನ್ನು ಖರೀದಿ ಮಾಡಿ ಸ್ವತಂತ್ರಗೊಳಿಸಿದರು. (ಅಸದುಲ್‌ಗಾಬ, ಸಂಪುಟ–6, ಪುಟ–127, ದಾರುಲ್ ಫಿಕರ್ ಬೈರೂತ್ 2003)

ಈ ಪ್ರಸ್ತಾಪ ಮುಂದುವರೆಯುವುದು. ಇನ್ಶಾ ಅಲ್ಲಾಹ್.

**ವಿಶೇಶ ಸೂಚನೆ**

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

**Distt: Gurdaspur (Pb.) INDIA Qadian - 143516**

Postal Reg. No: 3000039689/2020-22 Vol No.03, Thursday, 20 January 2022, Issue No. 03

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

*(ಪುಟ ಸಂಖ್ಯೆ 06ರ ಉಳಿದ ಭಾಗ)*

ಹೇಗಿದ್ದರೂ ಹಝ್ರತ್ ಪೈಗಂಬರ್‌ರೊಂದಿಗೆ(ಸ) ಸಂಬಂಧದಲ್ಲಿ ಹಝ್ರತ್ ಅಬೂಬಕರ್(ರ) ಮೊದಲಿಗರಾಗಿದ್ದರು.

ಇಸ್ಲಾಮಿಗೆ ಮುಂಚಿನಿಂದಲೂ ಹಝ್ರತ್ ಅಬೂಬಕರ್‌ರಿಗೆ(ರ) ಬಹುದೇವಾರಾಧನೆ ಇಷ್ಟವಾಗಿರಲಿಲ್ಲ. ಎಂದಿಗೂ ಯಾವುದೇ ಮೂರ್ತಿಯ ಮುಂದೆ ಅವರು ಸಾಷ್ಟಾಂಗ ಮಾಡಿರಲಿಲ್ಲ. ಸುರ್ತ ಹಲಬಿಯದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ) ಎಂದಿಗೂ ಯಾವುದೇ ಮೂರ್ತಿಯ ಮುಂದೆ ಸಾಷ್ಟಾಂಗ ಮಾಡಿರಲಿಲ್ಲ. ಇಸ್ಲಾಮಿಗೆ ಮುಂಚಿತವಾಗಿಯೇ ಬಹುದೇವಾರಾಧನೆಯನ್ನು ನಿರಾಕರಿಸಿದವರಲ್ಲಿ ಹಝ್ರತ್ ಅಬೂಬಕರ್‌ರನ್ನು(ರ) ಅಲ್ಲಾಮ ಇಬ್ನು ಜೂಝಿ ಗಣಿಸಿರುವರು. ಎಂದರೆ ಎಂದಿಗೂ ಅವರು ಮೂರ್ತಿಯ ಸಮೀಪಕ್ಕೆ ಹೋಗಿರಲಿಲ್ಲ. (ಅಸ್ಸೀರತುಲ್ ಹಲಬೀಯ, ಸಂಘುಟ–1, ಪುಟ–384–385, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಅದೇ ರೀತಿಯಲ್ಲಿ ಇಸ್ಲಾಮಿಗೆ ಮುಂಚಿನಿಂದಲೇ ಅವರು ಮದ್ಯಪಾನವನ್ನು ಅನಿಷ್ಟತೆಯಿಂದ ಕಾಣುತ್ತಿದ್ದರು. ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಇಸ್ಲಾಮಿಗೆ ಮುಂಚಿತವಾಗಿಯೇ ಮದ್ಯಪಾನವನ್ನು ತನ್ನ ಮೇಲೆ ನಿಷಿದ್ಧಗೊಳಿಸಿದ್ದರು. (ಕನ್‌ಝುಲ್ ಅಮಾಲ್, ಭಾಗ–12, ಪುಟ–490, ಮನಾಖಿಬ್ ಅಬೂಬಕರ್, ಹದೀಸ್–35609, ಮೊಅಸ್ಸಸುರ್ರಿಸಾಲ 1985)

ಅವರು ಇಸ್ಲಾಮಿಗೆ ಮುಂಚೆ ಮತ್ತು ನಂತರ ಎಂದಿಗೂ ಮದ್ಯಪಾನ ಮಾಡಿರಲಿಲ್ಲ. ಒಂದು ಸಭೆಯಲ್ಲಿ ಹಝ್ರತ್ ಅಬೂಬಕರ್‌ರೊಡನೆ(ರ) ಹೀಗೆ ಕೇಳಲಾಯಿತು: ನೀವು ಇಸ್ಲಾಮಿಗೆ ಮುಂಚೆ ಎಂದಾದರೂ ಮದ್ಯಪಾನ ಮಾಡಿದ್ದೀರಾ? ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಊಧುಬಿಲ್ಲಾಹ್, ನಾನು ಅಲ್ಲಾಹನಿಂದ ಅಭಯ ಯಾಚಿಸುತ್ತೇನೆ. ಅದಕ್ಕೆ ಕಾರಣವೇನೆಂದು ಕೇಳಲಾಯಿತು. ಹಝ್ರತ್ ಅಬೂಬಕರ್(ರ) ಹೇಳಿದರು: ನಾನು ನನ್ನ ಗೌರವವನ್ನು ಕಾಪಾಡುತ್ತಿದ್ದೆ. ನನ್ನ ಪರಿಶುದ್ಧತೆಯನ್ನು ಸಂರಕ್ಷಿಸುತ್ತಿದ್ದೆ. ಏಕೆಂದರೆ, ಶರಾಬು ಕುಡಿಯುವವನು ತನ್ನ ಗೌರವ ಮತ್ತು ಪರಿಶುದ್ಧತೆಯನ್ನು ನಷ್ಟಪಡಿಸುತ್ತಾನೆ. ವರದಿಗಾರ ಹೇಳುತ್ತಾರೆ: ಈ ಸಂಗತಿ ಹಝ್ರತ್ ಪೈಗಂಬರ್‌ರಿಗೆ(ಸ) ಗೊತ್ತಾದಾಗ, ಅವರು ಹೇಳಿದರು: ಸದಖ ಅಬೂಬಕರ್, ಸದಖ ಅಬೂಬಕರ್, ಎಂದರೆ, ಅಬೂಬಕರ್ ಸತ್ಯವನ್ನು ಹೇಳಿರುವರು. ಹೀಗೆ ಅವರು ಎರಡು ಬಾರಿ ಹೇಳಿದರು. (ತಾರೀಖುಲ್ ಖುಲಫಾ ಲಿಸ್ಸುಯೂತಿ, ಪುಟ–30, ದಾರುಲ್ ಕುತುಬ್ ಅಲ್‌ಅರಬಿ ಬೈರೂತ್ 1999)

ಹಝ್ರತ್ ಅಬೂಬಕರ್‌ರ(ರ) ಇಸ್ಲಾಂ ಸ್ವೀಕಾರದ ಕುರಿತು ವಿವಿಧ ವರದಿಗಳು ಲಭಿಸುತ್ತವೆ: ಅವುಗಳಲ್ಲಿ ಕೆಲವು ವಿಶದವಿವರಣೆಗಳಾಗಿವೆ, ಕೆಲವು ಸಂಕ್ಷಿಪ್ತವಾಗಿವೆ. ಹೇಗಿದ್ದರೂ ಕೆಲವನ್ನು ಹೇಳುತ್ತೇನೆ. ಹಝ್ರತ್ ಆಯಿಶ(ರ) ಹೇಳುತ್ತಾರೆ: ನಾನು ನನ್ನ ತಂದೆ ತಾಯಿಯನ್ನು ಚಿಕ್ಕಂದಿನಿಂದಲೇ ಇಸ್ಲಾಂ ಧರ್ಮದಲ್ಲೇ ಕಂಡಿರುವೆ. ಹಝ್ರತ್ ಪೈಗಂಬರ್(ಸ) ಹಗಲು ರಾತ್ರಿ ಎರಡೂ ಹೊತ್ತುಗಳಲ್ಲಿ ನಮ್ಮ ಮನೆಗೆ ಬರದ ದಿನಗಳೇ ಇಲ್ಲ.

(ಸಹೀಹ್ ಬುಖಾರಿ, ಕಿತಾಬುಲ್ ಕಫಾಲ, ಹದೀಸ್–2297)

ಹಝ್ರತ್ ಅಬೂಬಕರ್‌ರ(ರ) ಇಸ್ಲಾಂ ಸ್ವೀಕಾರದ ಕುರಿತು ವಿವಿಧ ವರದಿಗಳು ಲಭಿಸುತ್ತವೆ. ಶರಹ್ ಝುರ್‌ಖಾನಯಲ್ಲಿ ಹಝ್ರತ್ ಅಬೂಬಕರ್‌ರ(ರ) ಇಸ್ಲಾಂ ಸ್ವೀಕಾರದ ಬಗ್ಗೆ ಹೀಗೆ ವಿವರಿಸಲಾಗಿದೆ: ಒಂದು ದಿನ ಹಝ್ರತ್ ಅಬೂಬಕರ್(ರ) ಹಝ್ರತ್ ಹಕೀಂ ಬಿನ್ ಹಝ್ಝಾಮರ ಮನೆಯಲ್ಲಿದ್ದರು. ಮುಹಮ್ಮದ್‌ರನ್ನು(ಸ) ಮೂಸಾರ(ಅ) ಹಾಗೆ ನಬಿಯಾಗಿ ನಿಯೋಗಿಸಲಾಗಿದೆ ಎಂದು ನಿಮ್ಮ ತಂದೆಯ ಸಹೋದರಿಯಾದ ಖದೀಜ ತನ್ನ ಗಂಡನ ಕುರಿತು ಹೇಳುತ್ತಿದ್ದಾರೆ ಎಂದು ಹಕೀಮರ ದಾಸಿ ಅಲ್ಲಿಗೆ ಬಂದು ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಮೌನವಾಗಿ ಅಲ್ಲಿಂದ ಎದ್ದು ಹಝ್ರತ್ ಪೈಗಂಬರರ(ಸ) ಬಳಿಗೆ ಬಂದು ಇಸ್ಲಾಂ ಸ್ವೀಕರಿಸಿದರು. (ಶ ರ ಹ್ ಝುರ್‌ಖಾನಿ ಅಲಾ ಮವಾಹಿಬ್ ಲಿದ್ದುನಿಯಾ, ಸಂಪುಟ–1, ಪುಟ–447–448, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1996)

ಸೀರತ್ ಇಬ್ನು ಹಿಶಾಮಿನ ವ್ಯಾಖ್ಯಾನವಾದ ಅರ್‍ರೈಸುಲ್ ಅನ್‌ಫಿನಲ್ಲಿ ಹಝ್ರತ್ ಅಬೂಬಕರ್‌ರ(ರ) ಒಂದು ಕನಸು ಮತ್ತು ಅವರ ಇಸ್ಲಾಂ ಸ್ವೀಕಾರದ ಘಟನೆಯನ್ನು ಹೀಗೆ ಪ್ರಸ್ತಾಪಿಸಲಾಗಿದೆ: ಚಂದ್ರವು ಮಕ್ಕದಲ್ಲಿ ಇಳಿದು ತುಂಡುತುಂಡಾಗಿ ಎಲ್ಲ ಸ್ಥಳಗಳಲ್ಲಿ ಮತ್ತು ಎಲ್ಲ ಮನೆಗಳಲ್ಲಿ ಹರಡಿರುವುದಾಗಿಯೂ ಅನಂತರ ಆ ಚಂದ್ರನನ್ನು ಅವರ ಮಡಿಲಲ್ಲಿ ಒಟ್ಟುಗೂಡಿಸಲಾಗಿದ್ದಾಗಿಯೂ ಹಝ್ರತ್ ಪೈಗಂಬರರ(ಸ) ಪ್ರವಾದಿತ್ವಕ್ಕೆ ಮುಂಚಿತವಾಗಿ ಹಝ್ರತ್ ಅಬೂಬಕರ್(ರ) ಕನಸಿನಲ್ಲಿ ಕಂಡಿದ್ದರು. ಹಝ್ರತ್ ಅಬೂಬಕರ್(ರ) ಗ್ರಂಥಾನುಸಾರಿಯಾದ ಕೆಲವು ಪಂಡಿತರ ಮುಂದೆ ಈ ಕನಸನ್ನು ಪ್ರಸ್ತಾಪಿಸಿದರು. ಅವರು ಹೀಗೆ ಹೇಳಿದರು: ಕಾಯಲಾಗುತ್ತಿರುವ, ಪ್ರತೀಕ್ಷೆ ಮಾಡಲಾಗುತ್ತಿರುವ ಪ್ರವಾದಿಯ ಆಗಮನದ ಸಮಯ ಬಂದಿದೆ. ನೀವು ಆ ಪ್ರವಾದಿಯನ್ನು ಅನುಸರಿಸುವಿರಿ. ಆದ್ದರಿಂದ ನೀವು ಜನರಲ್ಲಿ ಅತ್ಯಂತ ಸೌಭಾಗ್ಯಶಾಲಿಯಾಗುವಿರಿ. ಅನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್‌ರನ್ನು(ರ) ಇಸ್ಲಾಮಿನ ಕಡೆಗೆ ಆಮಂತ್ರಿಸಿದಾಗ ಅವರ ಅದನ್ನು ಸ್ವೀಕರಿಸುವುದರಲ್ಲಿ ತಡಮಾಡಲಿಲ್ಲ. (ಅರ್‍ರೌಝುಲ್ ಉನುಫ್ ಫೀ ತಫ್ಸೀರಿ ಸ್ಸೀರತುನ್ನಬವೀಯ ಲಿಇಬ್ನೆ ಹಿಶ್ಯಾಮ್, ಸಂಪುಟ–1, ಪುಟ–431, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಅಬೂಬಕರ್‌ರ(ರ) ಇಸ್ಲಾಂ ಸ್ವೀಕಾರದ ಬಗ್ಗೆ ಸುಬುಲುಲ್‌ಹುದಾದಲ್ಲಿ ಪ್ರಸ್ತಾಪಿಸಲಾಗಿದೆ. ಕಅ್‌ಬ್ ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್(ರ) ಇಸ್ಲಾಂ ಸ್ವೀಕರಿಸಲು ಕಾರಣ ಒಂದು ದಿವ್ಯಸಂದೇಶವಾಗಿತ್ತು. ಹಝ್ರತ್ ಅಬೂಬಕರ್(ರ) ವ್ಯಾಪಾರಕ್ಕಾಗಿ ಸಿರಿಯಗೆ ಹೋಗಿದ್ದರು. ಅಲ್ಲಿ ಅವರು ಒಂದು ಕನಸನ್ನು ಕಂಡರು. ಆ ಕನಸನ್ನು ಬುಹೈರ ರಾಹಿಬ್‌ರಿಗೆ ಹೇಳಿಕೊಟ್ಟರು. ನೀವೆಲ್ಲಿಂದ ಬಂದಿರುವಿರಿ ಎಂದು ಆಗ ಬುಹೈರ ರಾಹಿಬ್ ಅವರೊಡನೆ ಕೇಳಿದರು. ಮಕ್ಕದಿಂದ ಎಂದು ಅವರು ಹೇಳಿದರು. ಮಕ್ಕದ ಯಾವ ಗೋತ್ರದಿಂದ ಎಂದು ರಾಹಿಬ್ ಕೇಳಿದರು. ಖುರೈಶಿನಿಂದ ಎಂದು ಅವರು ಹೇಳಿದರು. ಏನು ಮಾಡುತ್ತಿದ್ದೀರಿ ಎಂದು ರಾಹಿಬ್ ಕೇಳಿದರು. ವ್ಯಾಪಾರಿಯಾಗಿದ್ದೇನೆ ಎಂದು ಅವರು ಹೇಳಿದರು. ಆಗ ಬುಹೈರ ರಾಹಿಬ್ ಹೇಳಿದರು: ಅಲ್ಲಾಹನು ನಿಮ್ಮ ಈ ಕನಸನ್ನು ಸತ್ಯಪಡಿಸಿದರೆ, ನಿಮ್ಮ ಸಮುದಾಯದಲ್ಲಿ ಒಬ್ಬ ಪ್ರವಾದಿ ಆಗಮಿಸುವರು.

ನೀವು ಅವರ ಜೀವಿತದಲ್ಲಿ ಅವರ ಕಾರ್ಯದರ್ಶಿ (ಮಂತ್ರಿ) ಆಗುವಿರಿ. ಅವರ ಮರಣದ ನಂತರ ನೀವು ಅವರ ಉತ್ತರಾಧಿಕಾರಿಯಾಗುವಿರಿ.

ಇದನ್ನು ಹಝ್ರತ್ ಅಬೂಬಕರ್(ರ) ರಹಸ್ಯವಾಗಿ ಇರಿಸಿದರು.

ಕೊನೆಗೆ ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತರಾದಾಗ, ಹಝ್ರತ್ ಅಬೂಬಕರ್(ರ) ಕೇಳಿದರು: ಹೇ ಮುಹಮ್ಮದ್(ಸ) ನಿಮ್ಮ ವಾದಕ್ಕೆ ಪುರಾವೆಯೇನು. ಯಾವುದೇ ಪುರಾವೆಗಳನ್ನು ಕೇಳಲಾಗಿಲ್ಲವೆಂದು ಇತರ ಸ್ಥಳಗಳಲ್ಲಿ ಬರೆಯಲಾಗಿದೆ. ಆದರೆ ಈ ವರದಿಯಲ್ಲಿ ಹೀಗಿದೆ. ಆಗ ಹಝ್ರತ್ ಪೈಗಂಬರ್(ಸ) ಕೇಳಿದರು: ನೀನು ಸಿರಿಯದಲ್ಲಿದ್ದಾಗ ಕಂಡ ಕನಸೇ ಅದಕ್ಕೆ ಪುರಾವೆಯಾಗಿದೆ. ಆಗ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್‌ರನ್ನು(ಸ) ಆಲಂಗಿಸಿದರು. ಅವರ ಕಣ್ಣುಗಳ ಮಧ್ಯೆ ಚುಂಬಿಸಿದರು. ನೀವು ಅಲ್ಲಾಹನ ಪ್ರವಾದಿಯಾಗಿರುವಿರಿ ಎಂಬುದಕ್ಕೆ ನಾನು ಸಾಕ್ಷ್ಯವಹಿಸುತ್ತೇನೆ ಎಂದು ಹೇಳಿದರು.

(ಸಬ್ಲುಲ್ ಹುದಾ, ಸಂಪುಟ–1, ಪುಟ–124, ದಾರುಲ್ ಕುತುಬ್ ಅಲ್‌ಇಲ್ಮಿಯ ಬೈರೂತ್ ಲೆಬನಾನ್ 1993)

ಈ ವರದಿಯಲ್ಲಿ ಹಝ್ರತ್ ಅಬೂಬಕರರ(ರ) ಒಂದು ಕನಸಿನ ಪ್ರಸ್ತಾಪ ಇದೆ. ಆದರೆ ಅವರು ಏನನ್ನು ಕನಸಿನಲ್ಲಿ ಕಂಡಿದ್ದರು ಎಂದು ಅದರ ವಿಶದವಿವರಣೆಯನ್ನು ನಮೂದಿಸಲಾಗಿಲ್ಲ. ಆದರೆ ಹಿಂದೆ ಪ್ರಸ್ತಾಪಿಸಲಾದ ಕನಸಿನ ಕಡೆಗೆ, ಎಂದರೆ, ಚಂದ್ರ ತುಂಡುತುಂಡಾಗಿ ಬಿದ್ದದ್ದಾಗಿ ಕಂಡ ಕನಸಿನ ಕಡೆಗೆ ಇದು ಬೊಟ್ಟು ಮಾಡುತ್ತಿದೆ ಸೀರತ್ ಹಲಬಿಯದಿಂದ ತಿಳಿದುಬರುತ್ತದೆ. ಆ ಕನಸನ್ನು ಹಝ್ರತ್ ಅಬೂಬಕರ್(ರ) ಬುಹೈರ ರಾಹಿಬ್‌ರಿಗೆ ತಿಳಿಸಿದರು.

(ಅಸ್ಸೀರತುಲ್ ಹಲಬೀಯ, ಸಂಪುಟ–1, ಪುಟ–391, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಹೇಗಿದ್ದರೂ ಈ ಕುರಿತು ಹೆಚ್ಚಿನ ವರದಿಗಳನ್ನು ಚರಿತ್ರೆಗಾರರು ಬರೆದಿರುವರು. ಅವುಗಳನ್ನು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್.

***************

**ಸೂಚನೆ**

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**
**Mob or whatsapp: 8050330779**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ (ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.